ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ದಿನಾಂಕ ೧ನೇ ಮಾರ್ಚಿ ೧೯೮೪ ಫಾಲ್ಗುಣ ೧೧, ೧೯೦೫

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೩೦ ನಿಮಿಷಕ್ಕೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅಧ್ಯಕ್ಷ ಪೀಠದಲ್ಲಿದ್ದರು]

FINANCIAL BUSINESS

Discussion and Voting on Demands for Grants

DEMAND NO. 11 AND 12

(Debates Continued)

MR. SPEAKER.—Reply by the Hon'ble Minister of State for Youth Services.

ಶ್ರೀ ಜೀವರಾಜ ಆಳ್ವ (ಯುವಜನ ಸೇವಾ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೪-೮೫ನೇ ವರ್ಷ ಅಂತರಾಷ್ಟ್ರೀಯ ಯುವ ಸಂವತ್ಸರ ವರ್ಷ. ಈ ಕಾರಣದಿಂದ ಕರ್ನಾಟಕ ರಾಜ್ಯದ, ಭಾರತ ದೇಶದ ಹಾಗೂ ಜಗತ್ತಿನ ಎಲ್ಲ ಯುವ ಜನಾಂಗದವರು ಈ ಯುವ ಸಂವತ್ಸರ ವರ್ಷವನ್ನು ನವಚೈತನ್ಯದಿಂದ, ಆಸೆಯಿಂದ ಎದುರುನೋಡುತ್ತಿದ್ದಾರೆ. ಈ ಸಂದರ್ಭದಲ್ಲಿ ಈ ಯುವಕ ಜನಾಂಗದ ಆಶೋತ್ತರಗಳನ್ನು ಈಡೇರಿಸಲು ನಮಗೆ ದೊರಕಿದಂಥ ಒಂದು ದೊಡ್ಡ ಮಹದವಕಾಶವೆಂದರೆ ತಪ್ಪಾಗಲಾರದು. ಈ ರಾಷ್ಟ್ರದ ಸಮಗ್ರತೆಗೆ ಧಕ್ಕೆ ಬಂದಾಗ, ರಾಷ್ಟ್ರದ ಐಕ್ಯತೆಗೆ ಧಕ್ಕೆ ಬಂದಾಗ ರಣರಂಗದಲ್ಲಿ ಹೋರಾಟ ಮಾಡುವುದರ ಮೂಲಕ ಈ ರಾಷ್ಟ್ರದ ಹೆಸರನ್ನು ಉಳಿಸುವವರು ಈ ಯುವ ಜನಾಂಗದವರು. ಆಂತರಿಕವಾಗಿ ಈ ರಾಷ್ಟ್ರದ ಪ್ರಜಾಪ್ರಭುತ್ವಕ್ಕೆ ಹಾಗೂ ಐಕ್ಯತೆಗೆ ಧಕ್ಕೆ ಬಂದಾಗ ಹಿರಿಯ ನಾಯಕರಾದಂಥ ದಿವಂಗತ ಜಯಪ್ರಕಾಶ್ ನಾರಾಯಣ್ ಅವರ ಕರೆಗೆ ಓಗೊಟ್ಟು ಕೆಲಸ ಮಾಡಿದವರು ಈ ಯುವ ಜನಾಂಗದವರು. ಸಾಮಾಜಿಕವಾಗಿ ಮತ್ತು ರಾಜಕೀಯ ಜಗತ್ತಿನ ಹಾಗೂ ದೇಶದ ಎಲ್ಲ ಭಾಗದಲ್ಲಿಯೂ ಕ್ರಾಂತಿಯ ಕಹಳೆಗೆ ಓಗೊಟ್ಟು ಮುಂಚೂಣಿಯಲ್ಲಿ ನಿಲ್ಲುವವರೆಂದರೆ ಈ ಯುವ ಜನಾಂಗದವರು. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಚುನಾವಣಾ ಸಂದರ್ಭದಲ್ಲಿ ನಮಗೋಸ್ಕರ ಹೋರಾಡಿ ಹಾಗೂ ಕೆಲಸ ಮಾಡಿ ಈ ಒಂದು ಸಂಸದೀಯ ಸ್ಥಾನವನ್ನು ಕಲ್ಪಿಸಿಕೊಟ್ಟವರು ಈ ಯುವಕರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮೊನ್ನೆಯ ದಿವಸ ವಿದ್ಯುತ್ ಹಾಗೂ ಅಬಕಾರಿ ಯುವಜನ ಸೇವೆಗಳು ಹಾಗೂ ವಾರ್ತಾ ಇಲಾಖೆಗೆ ಸಂಬಂಧಪಟ್ಟಂತೆ ನಾಲ್ಕು ಇಲಾಖೆಗಳ ಮೇಲಿನ ಡಿಮ್ಯಾಂಡ್‌ಗಳ ಮೇಲೆ ಸುಮಾರು ೭ ಗಂಟೆಗಳ ಕಾಲ ಸತತವಾಗಿ ಚರ್ಚೆ ನಡೆಯಿತು. ಸುಮಾರು ೪೨೦ ನಿಮಿಷಗಳ ಕಾಲ ಅವಿರತವಾಗಿ ನಡೆದಂಥ ಚರ್ಚೆಯಲ್ಲಿ ನನ್ನ ಇಲಾಖೆಯ ಮೇಲೆ ೨೦ ನಿಮಿಷಗಳ ಕಾಲ ಕೂಡ ಚರ್ಚೆಯಾಗಲಿಲ್ಲ. ಈ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ಆದರೆ ನಾನು ಸಹ ಒಬ್ಬ ಯುವಕನಾಗಿ ಈ ಮಾತನ್ನು ಬೇಸರದಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ನಾಲ್ಕರ ಜೊತೆಯಲ್ಲಿಯೇ ೨೦ ನಿಮಿಷಗಳು ಬರುತ್ತದೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಬೇರೆಬೇರೆ ದೊಡ್ಡದೊಡ್ಡ ಇಲಾಖೆಗಳ ಮೇಲೆ ಹೆಚ್ಚು ಸಮಯ ಮಾತನಾಡಿದ ಬಗ್ಗೆ ನನಗೆ ವಿಮಂಚನೆ ಇಲ್ಲ. ಆದರೆ ಮೊನ್ನೆ ಮಾತನಾಡಿದವರು ಯುವಶಕ್ತಿಯನ್ನು ಮರೆತುಹೋದರಲ್ಲ ಎಂದು ನನ್ನ ಮನಸ್ಸಿಗೆ ಬೇಸರವಾಗಿದೆ. ಈ ಅಂತರ ರಾಷ್ಟ್ರೀಯ ಯುವ ಸಂವತ್ಸರ ವರ್ಷದಲ್ಲಿಯಾದರೂ ಮಾನ್ಯ ಸದಸ್ಯರೆಲ್ಲರೂ ಯುವಕರ ಬಗ್ಗೆ ಚಿಂತನೆ ಮಾಡಲು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಪ್ರತಿಯೊಬ್ಬ ಸದಸ್ಯರಲ್ಲಿಯೂ ಕಳಕಳಿಯಿಂದ ಕೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಅಧ್ಯಕ್ಷರದೂ ತಪ್ಪಿದೆ. ಏಕೆಂದರೆ ಅಧ್ಯಕ್ಷರೂ ಕೂಡ ಯುವಕರಾಗಿರುವುದರಿಂದ ಯುವಜನ ಸೇವಾ ಇಲಾಖೆ ಮೇಲೆ ೪ ಗಂಟೆಗಳ ಕಾಲ ಮಾತನಾಡಲು ಅವಕಾಶ ಕೊಡಬೇಕಾಗಿತ್ತು.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಮಾತ್ರ ನನ್ನ ಭಾಷಣವನ್ನು ಯುವಜನ ಸೇವೆಗಳ ಮೇಲೆ ಮೊದಲು ಪ್ರಾರಂಭ ಮಾಡಿದ್ದು.

ಶ್ರೀ ಜೀವರಾಜ ಆಳ್ವ.—ಆದಕ್ಕಾಗಿ ತಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ರಾಜ್ಯಪಾಲರ ಅಪ್ಪಣೆ ಮೇರೆಗೆ ೧೧ ಮತ್ತು ೧೨ನೇ ಸಂಖ್ಯೆಯ ಬೇಡಿಕೆಗಳನ್ನು ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಇಲ್ಲಿ ಮಂಡಿಸಲಾಗಿದೆ. ಈಬಗ್ಗೆ ಒಂದೇ ಒಂದು ಸಂತೋಷದ ಸಂಗತಿ ಎಂದರೆ, ಕಳೆದವರ್ಷದ ಬೇಡಿಕೆಗಳಿಂತ ಈ ಸಲ ಎರಡು ಪಾಲು ಜಾಸ್ತಿಯಾಗಿದೆ. ಅಷ್ಟೇ ಸಂತೋಷದ ಸಂಗತಿ. ಈ ಸಭೆ ಈ ಇಲಾಖೆಯ ಮೇಲೆ ಹೆಚ್ಚಿನ ಚರ್ಚೆ ಮಾಡದೆ ತಪ್ಪು ಮಾಡಿದೆ ಎಂದು ನಾನು ಹೇಳುವುದಿಲ್ಲ. ಆದರೆ ಯಾವ ಒಂದು ಮುಖ್ಯ ಕಾರ್ಯವನ್ನು ಮಾಡಬೇಕಾಗಿತ್ತೋ ಅದನ್ನು ಈ ಸಭೆ ಈ ಒಂದು ಸಂದರ್ಭದಲ್ಲಿ ಮಾಡದಿರುವ ಕಾರಣದಿಂದ, ಇದನ್ನು ಸರಿಪಡಿಸುವುದಕ್ಕಾಗಿ ಈ ಇಲಾಖೆಯ ಮೇಲೆ ಮತ್ತೆ ೩ ಗಂಟೆಗಳ ಕಾಲ ಚರ್ಚೆ ನಡೆಯುವುದು ಒಳ್ಳೆಯದು. ಈ ಇಲಾಖೆಯ ಮೇಲೆ ಸಮಗ್ರವಾದಂಥ ಚಿಂತನೆ ನಡೆಯಬೇಕಾಗಿದೆ. ಈ ಅಂತರರಾಷ್ಟ್ರೀಯ ಯುವಕ ಸಂವತ್ಸರದಲ್ಲಿ ನಮ್ಮ ಸರ್ಕಾರ ಹಾಗೂ ವಿಧಾನಸಭೆ ಮಾಡಬೇಕಾದ ಕೆಲಸಗಳೇನು ಎಂಬ ಬಗ್ಗೆ ಚಿಂತನೆ ನಡೆಯಬೇಕಾಗಿದೆ ಮತ್ತು ಹೆಚ್ಚು ಹಣವನ್ನು ನಮ್ಮ ಇಲಾಖೆಗೆ ಒದಗಿಸುವಂತಹ ಒಂದು ಪರಿಪಾಠವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಯುವ ಜನ ಸೇವಾ ಇಲಾಖೆ ೧೯೬೯ರಲ್ಲಿ ಪ್ರಾರಂಭ ವಾಯಿತು. ಮಾನ್ಯ ರಾಮಕೃಷ್ಣ ಹೆಗಡೆಯವರೇ ಈ ಇಲಾಖೆಯ ಪ್ರಥಮ ಮಂತ್ರಿಗಳಾಗಿದ್ದರು. ೧೯೬೯ ರಿಂದ ೧೯೮೪ರವರೆಗೆ ಅಂದರೆ ಈ ೧೫ ವರ್ಷಗಳಲ್ಲಿ ಈ ಇಲಾಖೆ ಯಾವ ರೀತಿಯಿಂದ ಬೆಳವಣಿಗೆ ಯಾಗಬೇಕಾಗಿತ್ತೋ ಆ ರೀತಿ ಆಗಿಲ್ಲವೆಂದು ನನಗೆ ಬೇಸರವಾಗಿದೆ. ಈ ಇಲಾಖೆಯನ್ನು ನಾನೇ ಕೇಳಿ ತೆಗೆದುಕೊಂಡೆ. ಏಕೆಂದರೆ, ನಮ್ಮ ಜನತಾ ಪಕ್ಷದ ಪರವಾಗಿ ಹೇಳುವುದಾದರೆ. ಯುವ ಜನತೆ ಹಾಗೂ ವಿದ್ಯಾರ್ಥಿಗಳೇ ನಮ್ಮ ಪಕ್ಷದ ಜೀವಾಳ ಎಂದು ಹೇಳುತ್ತೇನೆ. ಇವರೇ ನಮ್ಮ ರಾಜಕೀಯ ಗೆಲುವಿಗೆ ನಾಂದಿ ಹಾಕಿದವರು ಮತ್ತು ಬುನಾದಿ ಹಾಕಿದವರು. ಕಳೆದವರ್ಷ ಈ ಇಲಾಖೆಗೆ ಬಡ್ಜೆಟ್ ಆಲೋಕೇಷನ್‌ನಲ್ಲಿ ಸಾಕಷ್ಟು ಹಣ ಒದಗಿಸಿರಲಿಲ್ಲ, ೧೫ ಪರ್ಸೆಂಟ್ ಹಣ ಒದಗಿಸುವುದಕ್ಕೂ ಕೂಡ ತೊಂದರೆಯಾಗಿತ್ತು. ಅಂತಹ ಪ್ರಸಂಗದಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳ ಒಂದು ಪ್ರೋತ್ಸಾಹ ಈ ನಮ್ಮ ಇಲಾಖೆಗೆ ದೊರಕಿತು. ಆದರೂ ಕೂಡ ಮಾನ್ಯ ರಾಮದೇವ್ ಅವರು ಹೇಳಿದಂತೆ ಯಾವ ರೀತಿಯಿಂದ ಈ ಇಲಾಖೆ ನಮ್ಮ ಯುವ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸುವಂತಹ ಇಲಾಖೆ ಯಾಗಬೇಕಾಗಿತ್ತೋ ಅಂತಹ ಒಂದು ಇಲಾಖೆಯಾಗಿಲ್ಲ. ನಮ್ಮ ಯುವ ಜನರ ಆಸೆಗಳು ಬಹಳ ಇವೆ ಈ ಇಲಾಖೆಗೆ ಒಬ್ಬರು ಯುವಕರೇ ಮಂತ್ರಿಗಳಾಗಿರುವ ಕಾರಣದಿಂದ ತಾವು ಏನೇನು ಆಸೆಗಳನ್ನು ಇಟ್ಟು ಕೊಂಡಿದ್ದೇವೋ ಅದೆಲ್ಲಾ ಈಡೇರುತ್ತದೆ ಹಾಗೂ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ ತನ್ಮೂಲಕ ಯುವಕ ಯುವತಿಯರ ಮಂಡಲಿಗಳು ಉತ್ಸಾಹದಿಂದ ಹಾಗೂ ನಮಕ್ಕೈತನ್ಯದಿಂದ ಕೆಲಸ ಮಾಡುವಂತಹ ಒಂದು ಏರ್ಪಾಡಾಗುತ್ತದೆಂದು, ನಮ್ಮ ಯುವಕ ಯುವತಿಯರು ಹೇಳುತ್ತಿದ್ದಾರೆ. ಆದರೆ ನಮ್ಮ ಒಂದು ಹಣಕಾಸಿನ ಮುಗ್ಗಟ್ಟಿನಿಂದಾಗಿ ಅವರ ಒಂದು ಆಸೆಗನುಗುಣವಾಗಿ ಕೆಲಸ ಮಾಡಲು ನಮಗೆಸಾಧ್ಯವಾಗುತ್ತಿಲ್ಲ.

With all humility I say that whatever aspirations that the youth in Karnataka had when I took over as Minister for Youth Services have not been fulfilled. ಇಂಥ ಒಂದು ಪರಿಸ್ಥಿತಿಯಲ್ಲಿ ನಮ್ಮ ಕರ್ನಾಟಕ ರಾಜ್ಯ ಯುವಜನ ಸೇವೆಯ ಇಲಾಖೆ ಇದೆ. ನಾವು ಸುಮಾರು ೬-೭ ಕೋಟಿ ರೂಪಾಯಿಗಳ ಒಂದು ಬೇಡಿಕೆಯನ್ನು ಈ ಸಾರಿ ಈ ಸದನದಲ್ಲಿ ಮಂಡಿಸಿದ್ದೇವೆ. ಈ ಏಳು ಕೋಟಿ ರೂಪಾಯಿಗಳಲ್ಲಿ ನಾವು ಸುಮಾರು ೩ ಕೋಟಿ ರೂಪಾಯಿಗಳನ್ನು ಎನ್. ಸಿ. ಸಿ. ಗೆ ವೆಚ್ಚ ಮಾಡುತ್ತೇವೆ. ನಾವು ಈ ಎನ್.ಸಿ.ಸಿ.ಯ ಬಗ್ಗೆ ಹೇಳುವುದಾದರೆ ಈ ಬಾಬಿಗೆ ಕೊಡತಕ್ಕಂಥ ಹಣ ಹಿಂದಿನ ಸಾರಿ ಸುಮಾರು ೨.೨ ಕೋಟಿ ಇತ್ತು. ಆದರೆ ನಾವು ಈ ಬಾರಿ ೩ ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಅಂದರೆ ಹಿಂದಿನ ಬಾರಿಗಿಂತ ಈ ಬಾರಿ ಒಂದು ಕೋಟಿ ರೂಪಾಯಿಗಳನ್ನು ಜಾಸ್ತಿ ಖರ್ಚು ಮಾಡುತ್ತಿದ್ದೇವೆ. ಸ್ವಾಮಿ, ಕಳೆದ ನಾಲ್ಕು ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯದ ಎನ್.ಸಿ.ಸಿ.ಯವರು ರಾಷ್ಟ್ರದಲ್ಲಿಯೇ ಹೆಸರು ಗಳಿಸಿಕೊಂಡಿದ್ದಾರೆ. ಈ ಒಂದು ಹೆಸರು ಗಳಿಸಿಕೊಳ್ಳಲು ಕಾರಣವೇನೆಂದರೆ ನಾನು ಮತ್ತು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯೋತ್ಸವದ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯದ ಎನ್.ಸಿ.ಸಿ.ಯವರು ಮಾಡಿದಂತಹ ಕೆಲಸವನ್ನು ನೋಡಿ ಮೆಚ್ಚಿಕೊಂಡಿದ್ದಾರೆ. ನಮ್ಮವರು ಸ್ಕೋರ್ ಬೋರ್ಡಿನಲ್ಲಿ ಎಲ್ಲಾ ರಾಜ್ಯಗಳಿಗಿಂತ ಹೆಚ್ಚು ಸ್ಕೋರ್ ಮಾಡಿ ಇತಿಹಾಸದಲ್ಲಿಯೇ ಒಂದು ದಾಖಲೆಯನ್ನು ಸೃಷ್ಟಿ ಮಾಡಿದ್ದಾರೆ. ಇವರು ೧೦೦ಕ್ಕೆ ೯೭ ಪರ್ಸೆಂಟ್ ಸ್ಕೋರ್ ಗಳಿಸಿಕೊಂಡರು. ಆದರೆ ಎರಡನೆಯ ಸ್ಥಾನವನ್ನು ಪಡೆದವರು ಸುಮಾರು ೭೬ ಸ್ಕೋರ್ ಪಡೆದುಕೊಂಡಿದ್ದರು. ಆದರೆ ನಮ್ಮ ಸ್ಕೋರ್‌ಗಳನ್ನು ಪಡೆದುಕೊಳ್ಳಲು ಇದುವರೆಗೂ ಯಾವ ರಾಜ್ಯಕ್ಕೂ ಕೂಡ ಸಾಧ್ಯವಾಗಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಒಂದು ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿ ನಮ್ಮ ಕರ್ನಾಟಕ ರಾಜ್ಯದ ಎನ್. ಸಿ. ಸಿ. ಬಗ್ಗೆ ಶ್ಲಾಘನೆಯನ್ನು ವ್ಯಕ್ತಪಡಿಸಿದರು. ನಾವು ಹೋದ ಕಡೆಗಳಲ್ಲಿ ಒಳ್ಳೆಯ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕೆಂದು ಹೇಳುತ್ತೇವೆ. ಒಳ್ಳೆಯ ಭಾಷಣ ಮಾಡುತ್ತೇವೆ. ಆದರೆ ಇಂಥ ವಿಷಯಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಹೊರಟಾಗ ನಮಗೆ ಹಣದ ಕೊರತೆ ಅಡ್ಡಿ ಬರುತ್ತದೆ. ಆದರೆ ಆಗ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಯೇ ಒಂದು ಮಾತನ್ನು ಹೇಳಿದರು ಅದು ಏನೆಂದರೆ apart from recognising the NCC and giving them all financial benefits the financial allocations doubled almost ie.. 2 to 3 crores. This enhancement is a most commandable thing that this Government has done. ಇದರ ಜೊತೆಗೆ ಈ ಎನ್.ಸಿ.ಸಿ.ಯವರಿಗೆ ಮೆಡಿಕಲ್ ಸೀಟುಗಳಲ್ಲಿ ಮೊದಲು ಇದ್ದಂಥ ಸೀಟುಗಳಿಗಿಂತ ಡಬಲ್ ಮಾಡಿದ್ದೇವೆ. ಆದ್ದರಿಂದ ನಾವು ಈ ಸಂವತ್ಸರವನ್ನು ವೈಶಿಷ್ಟ್ಯ ಪೂರ್ಣವಾದಂತಹ ವರ್ಷವೆಂದು ಕರೆದಿದ್ದೇವೆ. ಮತ್ತೆ ನಮ್ಮ ಎನ್. ಸಿ. ಸಿ. ಯವರಿಗೆ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಕೂಡ ಸೀಟುಗಳನ್ನು ಮೀಸಲಾತಿ ಇಟ್ಟಿದ್ದೇವೆ, ಅದೇ ರೀತಿಯಲ್ಲಿ ಇನ್ನು ಮುಂದೆ ಪಾಲಿಟೆಕ್ನಿಕ್‌ಗಳಲ್ಲಿಯೂ ಸಹ ಮೀಸಲಾತಿ ಕೊಡುತ್ತಾರೆಂದು ನಾನು ಆಸೆ ವ್ಯಕ್ತಪಡಿಸುತ್ತೇನೆ. ಇದುವರೆಗೂ ನಾವು ಎನ್.ಸಿ.ಸಿ. ಬಗ್ಗೆ ಪ್ರಸ್ತಾಪ ಮಾಡಿದೆವು. ಈಗ ಎನ್. ಎಸ್. ಎಸ್. ಸ್ಕೀಮ್ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಇದು ಒಂದು ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ. ಈ ಯೋಜನೆಗೆ ನಾವು ಖರ್ಚು ಮಾಡತಕ್ಕಂಥ ಹಣ ಸುಮಾರು ೭ ಪರ್ಸೆಂಟ್ ಮಾತ್ರ. ಆದರೆ ಎನ್.ಸಿ.ಸಿ.ಗೆ ಖರ್ಚು ಮಾಡಿದಷ್ಟು ಹಣವನ್ನು ನಾವು ಈ ಸ್ಕೀಮ್‌ಗೆ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ನಾನು ಈ ಯೋಜನೆಗೂ ಕೂಡ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಎನ್ನುವ ಒಂದು ಬೇಡಿಕೆಯನ್ನು ಈ ಸದನದ ಮುಂದೆ ಇಡುತ್ತೇನೆ. ಮಾನ್ಯ ಸದನ ಅದಕ್ಕೆ ಒಪ್ಪಿಗೆ ಕೊಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾವು ಈ ಒಂದು ಯೋಜನೆಯನ್ನು ಪ್ರೌಢಶಾಲೆಗಳಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ನಮ್ಮಲ್ಲಿ ಹಣದ ಕೊರತೆ ಇದೆ. ಆದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ಕಾಲೇಜಿನಿಂದಲೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಈ ಎನ್.ಎಸ್.ಎಸ್.ಗಳನ್ನು ತೆಗೆದುಕೊಳ್ಳಬೇಕೆಂದು ಆಸೆ ಇದೆ. ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರದ ವಿದ್ಯಾನಗರದಲ್ಲಿ ಸುಮಾರು ೪೯ ಎಕರೆ ಜಮೀನನ್ನು ವಿದ್ಯಾ ಇಲಾಖೆಯಿಂದ ನಮ್ಮ ಯುವಜನ ಸೇವಾ ಇಲಾಖೆಗೆ ತೆಗೆದುಕೊಂಡೆವು. ಆದರೆ ಆ ಜಾಗವನ್ನು ವಿದ್ಯಾ ಇಲಾಖೆಯವರು ಬಹಳ ನೊಂದುಕೊಂಡು ನಮಗೆ ಕೊಟ್ಟರು.

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು).— ನೊಂದುಕೊಂಡು ಕೊಡಲಿಲ್ಲ. ಸಂತೋಷವಾಗಿಯೇ ಕೊಟ್ಟಿದ್ದೇವೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ ಆ ವಿದ್ಯಾನಗರದಲ್ಲಿ ಇರತಕ್ಕಂಥ ಈ ಜಾಗದಲ್ಲಿ ನಮ್ಮ ಅಂತರರಾಷ್ಟ್ರೀಯ ಯುವ ಸಂವತ್ಸರದಲ್ಲಿ ಲೋಕನಾಯಕ ಶ್ರೀಮಾನ್ ಜಯಪ್ರಕಾಶ್ ನಾರಾಯಣ್‌ರವರ ಹೆಸರಿನಲ್ಲಿ ಒಂದು ರಾಷ್ಟ್ರೀಯ ಉದ್ಯಾನವನವನ್ನು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಇದಕ್ಕೆ ನಾವು ಸುಮಾರು ೧೫ ಲಕ್ಷ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕೆಂದು ಇದ್ದೇವೆ. ಮತ್ತೆ ಈ ರಾಷ್ಟ್ರೀಯ ಸೇವೆಯಲ್ಲಿ ಹಳೆಯ ಕಟ್ಟಡಗಳನ್ನು ಹೊಸ ಕಟ್ಟಡಗಳನ್ನಾಗಿ ಮಾಡಿದ್ದೇವೆ. ಅಲ್ಲಿ ಕಟ್ಟಡಗಳು ಮೊದಲು ಹಾಳು ಹಂಪಿಯಂತೆ ಕಾಣುತ್ತಿದ್ದವು. ಆದರೆ ಈಗ ಆ ಕಟ್ಟಡಗಳನ್ನು ನೋಡುವುದಕ್ಕೆ ಎಷ್ಟು ಅಂದವಾಗಿವೆ ಎಂಬುದನ್ನು ಮಾನ್ಯ ಸದಸ್ಯರು ನೋಡಬೇಕು. ಇದು ಕೂಡ ನಾವು ರಾಷ್ಟ್ರೀಯ ಸಂವತ್ಸರದಲ್ಲಿ ಸಾಧಿಸಿದ ಸಾಧನೆ ಎಂದು ಹೇಳಬಹುದು. ರಾಷ್ಟ್ರೀಯ ಯುವಜನತೆಯ ಸೇವೆಯನ್ನು ಉಪಯೋಗಿಸಿಕೊಂಡು ನಾವು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ. ಈ ವರ್ಷದಲ್ಲಿ ನಾವು ಕೊಡುವ ಅಂತರರಾಷ್ಟ್ರೀಯ ಕೊಡುಗೆ ಎಂದು ಹೇಳಬಹುದು. ಮತ್ತೊಂದು ವಿಚಾರವನ್ನು ನಾನು ಕಳೆದ ಬೇಡಿಕೆಯ ಮೇಲೆ ಉತ್ತರ ಕೊಡುತ್ತಾ ೧೩ ಸ್ಥಳಗಳಲ್ಲಿ ಕ್ರೀಡಾಂಗಣಗಳನ್ನು ಸ್ಥಾಪನೆ ಮಾಡುತ್ತೇನೆಂದು ಹೇಳಿದ್ದೆ. ಆದರೆ ಆ ಎಲ್ಲಾ ಕ್ರೀಡಾಂಗಣಗಳು ವಿವಿಧ ಹಂತದಲ್ಲಿ ಇವೆ. ಈಗ ನಮಗೆ ಹಣದ ಕೊರತೆ ಇದೆ, ಆದರೆ ಕೇಂದ್ರ ಸರ್ಕಾರದವರು ಏಷ್ಯನ್ ಗೇಮ್ಸ್‌ಗೆ ಸುಮಾರು ೧೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಆದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು ಕಾಸು ಸಹ ಕೊಡಲಿಲ್ಲ. ಆದರೆ ಅವರು ಏಷ್ಯನ್ ಗೇಮ್ಸ್ ಮಾಡಿದ್ದು ಒಂದು ರೀತಿಯಲ್ಲಿ ಸಂತೋಷದಾಯಕವಾದರೂ ಸಹ ನನಗೆ ಅಷ್ಟು ತೃಪ್ತಿಯನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದಲ್ಲಿ ಈಗ ಕ್ರೀಡೆಗಳಿಗೆ ಒಬ್ಬರನ್ನು ಪ್ರತ್ಯೇಕವಾಗಿ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳನ್ನಾಗಿ ಮಾಡಿದ್ದಾರೆ. ಆ ಮಂತ್ರಿಗಳು ಯಾರೆಂದರೆ ಶ್ರೀಮಾನ್ ಬೂಟಾಸಿಂಗ್‌ರವರು. ಅವರು ಏಷ್ಯನ್ ಗೇಮ್ಸ್ ಮಾಡಿ ಒಂದು ಅಪಾರವಾದಂಥ ಒಂದು ಕೀರ್ತಿಯನ್ನು ಗಳಿಸಬೇಕೆಂದು ಪ್ರಯತ್ನ ಮಾಡಿದರು. ಆದರೆ ನಾನು ಆ ಒಂದು ಏಷ್ಯನ್ ಗೇಮ್ಸ್‌ಗೆ ಖರ್ಚು ಮಾಡಿದ ಹಣದಲ್ಲಿ ನಮ್ಮ ರಾಜ್ಯಕ್ಕೆ ಒಂದು ಪರ್ಸೆಂಟ್ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನಾನು ಒಬ್ಬ ಕ್ರೀಡಾ ಮಂತ್ರಿಯಾಗಿ ಹೇಳುತ್ತಿದ್ದೇನೆ ಇದು ಅವರು ಮಾಡಿದಂತಹ ಒಂದು ತಪ್ಪು ಎಂದು. ಕೇಂದ್ರ ಸರ್ಕಾರದವರು ೧೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಂದ್ರಪ್ರಸ್ಥ ಸ್ಟೇಡಿಯಂ, ನೆಹರು ಸ್ಟೇಡಿಯಂಗಳನ್ನು ಕಟ್ಟಿಸಿದರು. ಆದರೆ ಇವತ್ತಿನ ದಿವಸ ಆ ಸ್ಟೇಡಿಯಂಗಳಲ್ಲಿ ವಿಶ್ವಹಿಂದೂಪರಿಷತ್ ಕ್ಯಾಂಪ್‌ಗಳು ನಡೆಯುತ್ತಿವೆ. ಯಾರೋ ವಾಸ ಮಾಡುತ್ತಿದ್ದಾರೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದ ಬಗ್ಗೆ ಇಲ್ಲಿ ಟೀಕೆ ಮಾಡುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ ಮಾನ್ಯ ಕ್ರೀಡಾ ಮಂತ್ರಿಗಳು ಜವಾಬ್ದಾರಿಯುತವಾಗಿ ಮಾತನಾಡಿದರೆ ಒಳ್ಳೆಯದು. ಕೇಂದ್ರ ಸರ್ಕಾರವನ್ನು ದೂರುವುದು ಬಿಟ್ಟು ತಾವು ತಮ್ಮ ಇಲಾಖೆಯಲ್ಲಿ ಏನು ಸಾಧನೆ ಮಾಡಿದ್ದೀರಿ ಎಂಬುದನ್ನು ಹೇಳಿದರೆ ಸಾಕು
You must say what you have achieved. As a Minister incharge of the Sports Department you tell us what you have achieved in the State. I can understand if some other Minister Speaks about the Aasid but you as Sports Minister don't try to cast aspersions on the Asiad. We are ashamed of you. ತಾವು ಈ ರೀತಿ ಉತ್ತರ ಕೊಡುವುದಾದರೆ ನಾವು ನಿಮ್ಮಿಂದ ಏನು ನಿರೀಕ್ಷೆ ಮಾಡುವುದಕ್ಕೆ ಆಗುತ್ತದೆ ?

SRI P. RAMDEV,—Why the Honble Leader of the Opposition is so touchy...

SRI M. VEERAPPA MOILY. — We have got to be. Because the Sports Minister has tried to mix the politics. As a minister incharge of Sports he should not...

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು...

ಶ್ರೀ ಎಂ. ರಘುಪತಿ.—ನೀವು ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಅವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ.

SRI M. VEERAPPA MOILY.—He is not speaking as a Sports Minister. He is speaking as Politician.

ಶ್ರೀ ಎಂ. ಎಸ್. ಕೃಷ್ಣನ್.—ಏಷ್ಯಾಡ್‌ಗೆ ಜಾಸ್ತಿ ಹಣ ಖರ್ಚಾಯಿತು ಎಂದು ಹೇಳುತ್ತಿದ್ದಾರೆ. ಅದರಲ್ಲಿ ದುವ್ಯರ್ವಹಾರ ನಡೆದಿದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳು ಇಟ್ಟುಕೊಂಡಿದ್ದಾರೆ. ಇವತ್ತಿನ ದಿವಸ ಅದು ಅಷ್ಟು ಸಮಂಜಸವಾಗಿಲ್ಲ. ಇವತ್ತು ಇಲ್ಲಿ ಏನು ಮಾಡುತ್ತಿದ್ದೀರಿ ಎನ್ನುವುದು ಬಹಳ ಮುಖ್ಯ. ನಾನು ತಮಗೆ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಒಬ್ಬರು ಸ್ಪೋರ್ಟ್ ಕೌನ್ಸಿಲ್‌ನಲ್ಲಿದ್ದಾರೆ, ಅವರ ಹೆಸರು ಎಸ್. ವಿ. ಜಯರಾಮ್ ಎಂದು, ಇವರ ಬಗ್ಗೆ ನೋಡಿದ್ದೀರಾ? ಅವರ ಬಗ್ಗೆ ಪತ್ರಿಕೆಯಲ್ಲಿ ಏನು ಬಂದಿದೆ ಎನ್ನುವುದನ್ನು ಓದುತ್ತೇನೆ ಅದು ಈ ರೀತಿ ಇದೆ.

> "In another case of cheating and forgery registered with the Ulsoor Gate Police, an official of the Directorate of Youth Services alleged that one Jayaram, Hon. Secretary of Karnataka Basketball Association had produced a fictitious letter stating that he had been selected by the Basketball Federation of India as a technical delegate to visit Japan He demanded Rs. 16,000 for travel expenses, which was reportedly sanctioned. Later on the Federation wrote to the Directorate that they had not selected any Jayaram as the technical delegate.
>
> Yet another complaint of Forgery and cheating filed by the Diectorate against one P.S.B. Naidu. Hon. Secretary of the Karnataka Amateur Boxing Association, Rajajinagar alleged that the latter had claimed Rs 3,000 from the former on the pretext of holding a boxing tournament. Thereafter he reportedly presenthd "fictitious" accounts the money spent. The Ulsoor Police have registered this case. There are two cases of cheating. One relates to Jayaram and another against P.S.B. Naidu. Whate have you done in those cases? Let us know it first.

SRI JEEVARAJ ALVA.—I will come to that. Sir, with all the humility I would like to bring to the notice of this August House. ೧೬೦೦ ಕೋಟಿ ರೂಪಾಯಿಗಳನ್ನು ಏತಕ್ಕೋಸ್ಕರ ಖರ್ಚು ಮಾಡಿದ್ದೀರಿ ಅಂದರೆ ಇಂದ್ರಪ್ರಸ್ಥ ಇಂತಹ ಬೃಹತ್ ಕ್ರಿಡಾಂಗಣಗಳನ್ನು ಕಟ್ಟಿಸಲಿಕ್ಕೆ ಕೇಂದ್ರ ಸರ್ಕಾರ ಹಣವನ್ನು ವ್ಯಯ ಮಾಡಿದೆ. ನಮ್ಮ ರಾಜ್ಯದಲ್ಲಿ ೧೯ ಕ್ರಿಡಾಂಗಣಗಳನ್ನು ಕಟ್ಟಬೇಕಾಗಿದೆ, ಆ ಕಟ್ಟಡಗಳು ವಿವಿಧ ಹಂತಗಳಲ್ಲಿವೆ ನಾವು ಕಷ್ಟದಲ್ಲಿದ್ದೇವೆ, ನಮಗೆ ಹಣದ ಕೊರತೆಯಿಂದೆ. ನಾವು ೫ ಕ್ರೀಡಾಂಗಣಗಳನ್ನು ಪೂರ್ತಿ ಮಾಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ, ನಮಗೆ ಹಣದ ಸಹಾಯವನ್ನು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದಾಗ ಅವರು ಕೊಟ್ಟಂತಹ ಹಣ ಕೇವಲ ೧ ಲಕ್ಷ ರೂಪಾಯಿಗಳು ಮಾತ್ರ.

ಇತ್ತೀಚೆಗೆ ಮಂಗಳ ಸ್ಟೇಡಿಯಂನಲ್ಲಿ ಒಂದು ಸಮಾರಂಭ ನಡೆಯಿತು. ಆ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಉಪ-ಹಣಕಾಸು ಮಂತ್ರಿಗಳಾದ ಮಾನ್ಯ ಜನಾರ್ಧನ ಪೂಜಾರಿಯವರು ಉಪಸ್ಥಿತರಿದ್ದರು. ಅವರು ನನ್ನ ಕಿವಿಯಲ್ಲಿ ನೀವು ತೆಗೆದುಕೊಂಡಂತಹ ೧ ಲಕ್ಷ ರೂಪಾಯಿಗಳಿಗೆ ಯುಟಿಲೈಸ್‌ಷನ್ ಸರ್ಟಿಫಿಕೇಟ್ ಕೊಟ್ಟಿಲ್ಲವೆಂದು ಹೇಳಿದರು. ನೀವು ಇದನ್ನು ನಿಮ್ಮ ಭಾಷಣದಲ್ಲಿ ಹೇಳಬೇಕೆಂದು ಹೇಳಿದರು. ನಾನು ಅವರು ಆಪ್ತಮಿತ್ರರು ಅದು ಬೇರೆ. ನೀವು ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಡಬೇಕೆಂದು ಹೇಳಿದರು. ನಾವು ಒಂದೊಂದು ಕ್ರೀಡಾಂಗಣ ಕಟ್ಟಬೇಕಾದರೆ ೩೦ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಕ್ರೀಡಾಂಗಣ ಕಟ್ಟಬೇಕೆಂದು ಕೇಳಿದಾಗ ಅವರು ಕೊಟ್ಟಂತಹ ಹಣ ಕೇವಲ ೧ಲಕ್ಷ ರೂಪಾಯಿ. ನಾನು ಕೇಳುತ್ತೇನೆ ೧೬೦೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನೀವು ತೆಗೆದುಕೊಂಡಂತಹ ಮೆಡಲ್‌ಗಳು ಕೇವಲ ೮ ಮಾತ್ರ. ನಮಗೆ ೧೦ ಕೋಟಿ ರೂಪಾಯಿಗಳನ್ನು ಕೊಡಿ, ನಾವು ೧೦ ಮೆಡಲ್‌ಗಳನ್ನು ತೆಗೆದುಕೊಡುತ್ತೇವೆ. ಬಿಳಿ ಆನೆಗಳನ್ನು ಸಾಕಲಿಕ್ಕೆ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಎಂದು ಮಾಡಿಕೊಂಡಿದ್ದಾರೆ. They are nothing but White elephants—ಇದು ಏನಾಗಿದೆ? ಇವತ್ತು ಕ್ರೀಡೆ ಎನ್ನತಕ್ಕದ್ದು. ರಾಜ್ಯಕ್ಕೆ ಸಂಬಂಧ ಪಟ್ಟಿದ್ದು The Sports Authority of India has been created with a sole object to maintain these White elephants. ಯಾವುದೋ ಕಾರಣಕ್ಕೋಸ್ಕರ ಈ ಕ್ರೀಡೆಯನ್ನು ಕನ್ ಕರೆಂಟ್ ಲಿಸ್ಟ್‌ಗೆ ತೆಗೆದುಕೊಂಡು ಹೋಗುವಂತಹ ಪ್ರಯತ್ನ ನಡೆಯುತ್ತಿದೆ. There is an effort on the part of the Cetral Government to take away this sport from the State subject to the concurrent list. ಏತಕ್ಕೆ ಈ ರೀತಿ ರಾಜಕೀಯ ಮಾಡುತ್ತೀರಿ? ದೇಶದ ಸಮಗ್ರತೆಗೆ ಇದು ಒಂದು ಕೊಡುಗೆ ಎಂದು ಹೇಳಿ ಕ್ರೀಡೆಯನ್ನು ಕನ್ ಕರೆಂಟ್ ಲಿಸ್ಟ್‌ಗೆ ಹಾಕುತ್ತಿದ್ದಾರೆ. ಆಂಧ್ರಪ್ರದೇಶ, ಕಾಶ್ಮೀರ ಕ್ರೀಡಾಮಂತ್ರಿಗಳನ್ನು ಬಿಟ್ಟು ಇತರ ಐದಾರು ಜನ ಸೇರಿಕೊಂಡು ಈ ರೀತಿ ಮಾಡುತ್ತಿದ್ದಾರೆ.

SRI M. S. KRISHNAN.—It is beoause there is a feeling that States do not play their games properly.

ಶ್ರೀ ಜೀವರಾಜಆಳ್ವ.—ಈ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಇದನ್ನು ಮಾನ್ಯ ವಿರೋಧಪಕ್ಷದ ನಾಯಕರು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಕೇಂದ್ರ ಸರ್ಕಾರ ಸಮಗ್ರ ಹಿತಚಿಂತನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರ ಯುವಶಕ್ತಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿದೆ ಎನ್ನುವುದಕ್ಕೆ ಇದು ತಮ್ಮ ಕೊಡುಗೆಯೇನು? ಕೇಂದ್ರ ಸರ್ಕಾರ ನಮಗೆ ಹಣವನ್ನು ಕೊಡದೆ ಇರಬಹುದು. ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಅವರು ಏನು ಮಾಡುತ್ತಿದ್ದಾರೆ? ನಾವು ಕಳೆದ ಸಲ ಎರಡೂವರೆ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದರೆ, ಈ ಸಾರಿ ಮೂರೂವರೆ ಕೋಟಿ ರೂಪಾಯಿಗಳನ್ನು ತೆಗೆದಿರಿಸಿಕೊಂಡಿದ್ದೇವೆ ಆ ಒಂದು ಕೆಚ್ಚಿದೆ ನಮ್ಮಲ್ಲಿದೆ. ಮುಂಬರುವ ವರ್ಷಗಳಲ್ಲಿ ಕೇಂದ್ರದಿಂದ ಹಣವನ್ನು ಜಾಸ್ತಿ ಕೊಡಲಿಕ್ಕೆ ವಿರೋಧಪಕ್ಷದ ನಾಯಕರು ತಮ್ಮ ವರ್ಚಸ್ಸಿನಿಂದ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ೧೯ ಜಿಲ್ಲೆಗಳಲ್ಲಿಯೂ ಕ್ರೀಡಾಂಗಣಗಳನ್ನು ಕಟ್ಟಿಸಲಾಗುತ್ತದೆಂದು ನಾನು ಶಾಸಕರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ನನ್ನದು ಬಡ ಇಲಾಖೆ, ರಂಗಮಂದಿರಗಳನ್ನು ಕಟ್ಟಿಸಲಿಕ್ಕೆ ಹಣ ಕೇಳುತ್ತಿದ್ದಾರೆ. ಜಿಲ್ಲೆಗಳಲ್ಲಿ ಕ್ರೀಡಾಂಗಣಗಳನ್ನು ಕಟ್ಟಿಸಲಿಕ್ಕೆ ಆಗದಿರುವ ಪರಿಸ್ಥಿತಿ ಇರುವಾಗ ತಾಲ್ಲೂಕು ಕೇಂದ್ರಗಳಲ್ಲಿ ಯಾವ ರೀತಿಯಲ್ಲಿ ಕ್ರೀಡಾಂಗಣಗಳನ್ನು ಕಟ್ಟಿಸಲಿಕ್ಕೆ ಸಾಧ್ಯವಿದೆ? ೧೯ ಜಿಲ್ಲೆಗಳ ಪೈಕಿ ೫ ಕ್ರೀಡಾಂಗಣಗಳನ್ನು ಕಟ್ಟಿ ಮುಗಿಸಿದ್ದೇವೆ. ಇನ್ನು ೭ ಕ್ರೀಡಾಂಗಣಗಳ ಕಾರ್ಯ ಮುಗಿಯುವ ಮಟ್ಟದಲ್ಲಿದೆ. ಇತ್ತೀಚೆಗೆ ಗಣರಾಜ್ಯೋತ್ಸವದಂದು ಗುಲ್ಬರ್ಗಾ ಕ್ರೀಡಾಂಗಣವನ್ನು ಉದ್ಘಾಟನೆ ಮಾಡಿ ಅದಕ್ಕೆ "ಚಂದ್ರಶೇಖರ ಪಾಟೀಲ್ ಕ್ರೀಡಾಂಗಣ"ವೆಂದು ನಾಮಕರಣ ಮಾಡಲಾಗಿದೆ. ಈ ವರ್ಷ ಸಾಧ್ಯವಾದರೆ ಇನ್ನು ಕೆಲವು ಕ್ರೀಡಾಂಗಣಗಳನ್ನು ಕಟ್ಟಿ ಮುಗಿಸಬಹುದು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಿದ್ದೇನೆ. ಇದು ಯುವ ಸಂವತ್ಸರ ಈ ಸಂವತ್ಸರದಲ್ಲಿ ಒಂದು ರೀತಿಯ ಮಿನಿ ಸ್ಟೇಡಿಯಂಗಳನ್ನು ಸುಮಾರು ಮೂರ್ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮುಗಿಯುವ ಹಾಗೆ ಕಟ್ಟಲಾಗುತ್ತದೆ. ತಾಲ್ಲೂಕು ಕೇಂದ್ರಗಳಲ್ಲಿ ಸಂಘ ಸಂಸ್ಥೆಗಳ ಮುಖಾಂತರ ಈಕ್ವಲ್ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇವೆ. ಆ ಕೆಲಸವನ್ನು ಈ

ವರ್ಷ ಪ್ರಾರಂಭ ಮಾಡುತ್ತೇವೆ. ಮಾನ್ಯ ಸದಸ್ಯರಾದ ಪಂಪಾಪತಿಯವರು ಬಹಳ ವರ್ಷಗಳಿಂದಲೂ ದಾವಣಗೆರೆಯಲ್ಲಿ ಕ್ರೀಡಾಂಗಣ ಕಟ್ಟಿಸಬೇಕೆಂದು ಕೇಳುತ್ತಿದ್ದರು. ಈ ವರ್ಷ ದಾವಣಗೆರೆಯಲ್ಲಿ ಕ್ರೀಡಾಂಗಣವನ್ನು ಕಟ್ಟಿಸತಕ್ಕ ಒಂದು ವಿಶೇಷ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ವರ್ಷವೇ ಇದನ್ನು ಪೂರ್ಣಗೊಳಿಸುವ ವ್ಯವಸ್ಥೆ ಮಾಡುತ್ತೇವೆ. ಈ ಒಂದು ಕಾರ್ಯದಲ್ಲಿ ಜನತೆಯ ಕೊಡುಗೆಯಲ್ಲಿ ಯಾವುದೇ ರೀತಿಯಲ್ಲಿ ತೊಂದರೆಯಾಗಿಲ್ಲ. ಗುಲ್ಬರ್ಗಾದಲ್ಲಾಗಲೀ, ಮಂಡ್ಯದಲ್ಲಾಗಲೀ ಜನತೆ ಕೈ ಎತ್ತಿ ಕೊಟ್ಟಿದ್ದಾರೆ.

ಈ ಗುರುನಾನಕ್ ಕಟ್ಟಡ ಬಾಕಿ ಉಳಿದಿದೆ. ಮತ್ತು ರಾಜ್ಯ ಯುವಜನ ಮಂಡಳಿ ಕಛೇರಿ ಇರುವಲ್ಲಿ ಒಂದು ಥಿಯೇಟರ್ ಆಗುತ್ತದೆ. ಇದು ಸುಮಾರು ಏಳು ವರ್ಷಗಳಿಂದ ಹಾಗೆಯೇ ಬಿದ್ದಿತ್ತು. ಈಗ ಇದರ ಕೆಲಸ ಆರಂಭವಾಗಿದೆ. ಇನ್ನು ಮೂರೇ ತಿಂಗಳಲ್ಲಿ ಈ ಯುವಜನರಿಗೋಸ್ಕರ ಇರುವಂಥ ರಂಗಮಂದಿರಗಳು ಆರಂಭವಾಗುತ್ತವೆ. ಅದಕ್ಕೆ ಎಲ್ಲಾ ಶಾಸನಸಭಾಸದಸ್ಯರೂ ಬರಬೇಕು. ಒಳ್ಳೆಯ ಸಮಾರಂಭ ಏರ್ಪಾಡು ಮಾಡಿದ್ದೇವೆ. ಇದು ಯುವಜನ ಸಂವತ್ಸರಕ್ಕೆ ನಮ್ಮ ಕೊಡುಗೆಯಾಗಲಿ ಎಂದು ಹಾರೈಸುತ್ತೇನೆ.

ಇನ್ನು ನಮ್ಮ ರಾಜ್ಯದ ಬಹಳಷ್ಟು ಕ್ರೀಡಾಸಂಸ್ಥೆಗಳು ಕ್ರೀಡಾರಂಗಕ್ಕೆ ಕೊಟ್ಟಂಥ ಕೊಡುಗೆ, ಕ್ರೀಡೆಗೆ ಕೊಟ್ಟ ಪ್ರೋತ್ಸಾಹ ಬಹಳ ದೊಡ್ಡದು. ರಾಷ್ಟ್ರ ಹೆಮ್ಮೆ ಪಡುವಂಥ ಕ್ರೀಡಾ ಪಟುಗಳನ್ನು ಇವುಗಳು ರಾಷ್ಟ್ರಕ್ಕೆ ಕೊಟ್ಟಿವೆ. ಇವರು ಮಾಡಿದಂಥ ಕೆಲಸಕ್ಕೆ ಪ್ರೋತ್ಸಾಹ ಅಗತ್ಯ. ಈ ಕ್ರೀಡಾ ಪಟುಗಳಿಗೆ ಮನೆ ನಿವೇಶನ ಕೊಡಬೇಕೆಂದು ಒಂದು ಯೋಜನೆಯನ್ನು ಈ ವರ್ಷದಿಂದ ಹಾಕಿಕೊಂಡಿದ್ದೇವೆ. ಇನ್ನು ಇಡೀ ರಾಷ್ಟ್ರವೇ ಹೆಮ್ಮೆ ಪಡುವಂಥ ಬೆಂಗಳೂರು ನಗರದಲ್ಲಿ ಕ್ರೀಡಾಂಗಣ ಇದೆ. ಆದರೆ ಒಂದು ಸರ್ವಕಾಲದಲ್ಲಿ ಆಡಬಹುದಾದ ಸುಸಜ್ಜಿತ ಇಂಡೋರ್ ಸ್ಟೇಡಿಯಂ ಇಲ್ಲ. ಈ ವರ್ಷ ಇಂಡೋರ್ ಸ್ಟೇಡಿಯಂನ್ನು ನಮ್ಮ ಸರ್ಕಾರ ಮಾಡಬೇಕೆಂದು ಕಾರ್ಯಕ್ರಮ ಇದೆ. ಇದನ್ನು ಬೆಂಗಳೂರು ನಗರದಲ್ಲಿ ಮಾಡಬೇಕೆಂದು ನಮಗೆ ಆಸೆ ಇದೆ. ಇದನ್ನು ಈ ವರ್ಷ ಆರಂಭ ಮಾಡಿ ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವ ಹಂಬಲ ನಮ್ಮದು.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ರಾಜಾಜಿನಗರದಲ್ಲಿ ಮಾಡಿ.

ಶ್ರೀ ಜೀವರಾಜ ಆಳ್ವ.—ಜಾಗ ಕೊಡಿ ಮಾಡುತ್ತೇವೆ. ಇದು ಯಾರೂ ಮಾಡದಿರುವಂಥಾದ್ದು. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಎಲ್ಲಾ ತರಹದ ಚಟುವಟಿಕೆಗಳು, ನೃತ್ಯ, ಸಂಗೀತ, ಮತ್ತು ಕುಶಲಕಲೆಗಳ ಶಿಕ್ಷಣ ಕೇಂದ್ರವನ್ನು ಆರಂಭ ಮಾಡಬೇಕೆಂದು ಇದೆ. ನೃತ್ಯ, ಸಂಗೀತ, ಲಲಿತಕಲೆಗಳಲ್ಲಿ ಉಚಿತ ತರಗತಿಗಳನ್ನು ನಡೆಸುವುದು ಯಾವ ರಾಜ್ಯದಲ್ಲೂ ಇಲ್ಲ. ಇದನ್ನು ಕರ್ನಾಟಕದಲ್ಲಿ ಆರಂಭ ಮಾಡಿದ್ದೇವೆ. ಇದಕ್ಕೆ ಬಹಳಷ್ಟು ಪ್ರೋತ್ಸಾಹ ದೊರೆತಿದೆ. ಇದನ್ನು ಜಿಲ್ಲಾ ಕೇಂದ್ರದಲ್ಲೂ ಕೂಡ ಈ ವರ್ಷದಲ್ಲಿ ಮಾಡಬೇಕೆಂದು ಇದೆ. ಇದನ್ನು ಮಾಡುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸಾಮಾನ್ಯವಾಗಿ ಮಂತ್ರಿಗಳು ಹೊರಗಡೆಯಲ್ಲಿ ಆಶ್ವಾಸನೆ ಕೊಡುತ್ತಾರೆ. ತಾವು ಬರೇ ಸದನದ ಒಳಗಡೆಯೇ ಆಶ್ವಾಸನೆಯನ್ನು ಕೊಡುತ್ತೀರೋ ಹೇಗೆ ? ಬೆಂಗಳೂರು ನಗರದಲ್ಲಿ ಪ್ರಾರಂಭ ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಈ ವರ್ಷ ಐದು ಜಿಲ್ಲೆಗಳಲ್ಲಿ ಆದರೂ ರಂಗಮಂದಿರ ಮಾಡುತ್ತೀರೋ ಹೇಗೆ ? ಅಷ್ಟಾದರೂ ಹೇಳಿ ತಾಲ್ಲೂಕು ಮಟ್ಟದಲ್ಲೂ ಮಾಡಿ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಮಂತ್ರಿಗಳು ಬರೇ ಭರವಸೆ ಕೊಡುತ್ತಾರೋ ಅಥವಾ ಏನಾದರೂ ಮಾಡುತ್ತಾರೋ ?

ಶ್ರೀ ಜೀವರಾಜ ಆಳ್ವ.—ಇವತ್ತು ಯುವಜನ ಇಲಾಖೆ ಇದೆಯೆಂದು ತೋರಿಸುವಂಥ ಕೆಲಸಗಳನ್ನು ಮಾಡಿದ್ದೇವೆ. ಯುವಜನ ಸೇವಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೆಯೆಂದು ಜನರು ಎಚ್ಚೆತ್ತುಗೊಳ್ಳುವಂಥ ಕೆಲಸ ಮಾಡಿದ್ದೇವೆ ನಿಮ್ಮ ಸಹಕಾರದಿಂದ. ಕೆಲವು ಕಾರ್ಯಕ್ರಮಗಳನ್ನು ಮಾಡಿ ತೋರಿಸಿದ್ದೇವೆ. ಆದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಥಿಯೇಟರ್ ಕೆಲಸ ಇರಲಿ, ಫ್ರೀ ಕ್ಲಾಸಸ್ ಇರಲಿ, ಮಾಡಿ ತೋರಿಸಿದ್ದೇವೆಯೇ ಹೊರತು ಆಶ್ವಾಸನೆ ಕೊಡುವುದಕ್ಕೆ ಅಲ್ಲ. ಮಾನ್ಯ ಯಡಿಯೂರಪ್ಪನವರು ಜಿಲ್ಲೆಗೊಂದು ರಂಗಮಂದಿರ ಆಗಿಲ್ಲವೆಂದು ಹೇಳಿದರು. ಇದನ್ನು

ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದು ನಮ್ಮ ಸರ್ಕಾರದ ಜನತಾ ಸರ್ಕಾರದ ಕಾರ್ಯಕ್ರಮ ಅಲ್ಲದಿದ್ದರೂ ಕೂಡ ಬಹಳ ವೈಶಿಷ್ಟ್ಯಪೂರ್ಣವಾದ ಕಾರ್ಯಕ್ರಮ. ಇದನ್ನು ಮಾಡಬೇಕೆಂಬ ಬಯಕೆ ನಮ್ಮದಾಗಿದೆ. ಹಣದ ತೊಂದರೆ ಬಹಳವಾಗಿದೆ. ಆದರೂ ಪ್ರಯತ್ನ ಮಾಡಿದ್ದೇವೆ ಪ್ರತಿಯೊಂದು ಜಿಲ್ಲೆಗೆ ಅವರ ಕಲೆ ಮತ್ತು ಲಲಿತಕಲೆಗೋಸ್ಕರ ಜಾಗ ಇರಬೇಕೆಂಬುದು ನಮ್ಮ ಭಾವನೆ. ಅದು ಆದ ಮೇಲೆ ತಾಲ್ಲೂಕು ಮಟ್ಟದಲ್ಲಿ ಮಾನ್ಯ ಯಡಿಯೂರಪ್ಪನವರು ಹೇಳಿದ ರಂಗಮಂದಿರಗಳ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸ್ವಾಮಿ, ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಹೇಳುವುದಾದರೆ ಹೊಸ ಉತ್ಸಾಹದಿಂದ, ಲವಲವಿಕೆಯಿಂದ, ನವ ಚೈತನ್ಯದಿಂದ ಕೆಲಸ ಮಾಡಿದ್ದೇವೆ. ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಬಹಳಷ್ಟು ಟೀಕೆಗಳು ಬಂದವು. ಆದರೂ ಕೂಡ ಹಿಂದಿನ ಸರ್ಕಾರ ತೆಗೆದುಕೊಂಡ ಕಾರ್ಯಕ್ರಮ. ಯಾವುದೇ ಸರ್ಕಾರವಾದರೂ ಕೂಡ ಹಿಂದಿನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದಿಲ್ಲ. ಆದರೆ ನಾವು ಅದನ್ನು ಮಾಡುತ್ತೇವೆ. ಈ ಕಾರಣಕ್ಕೋಸ್ಕರ ಬಹಳಷ್ಟು ಸರಳತೆಯಿಂದ ಈ ವಿಶ್ವ ಕನ್ನಡ ಸಮ್ಮೇಳನವನ್ನು ೧೯೮೪ರ ನವೆಂಬರ್ ಒಂದರನ್ನು ನಾವು ಏರ್ಪಡಿಸಬೇಕೆಂದು ಮಾಡಿದ್ದೇವೆ. ಈ ಕಾರ್ಯಕ್ರಮಕ್ಕೆ ನಾವು ಈ ವರ್ಷ ಇಟ್ಟಂಥ ಹಣ ಒಂದು ಕೋಟಿ ಮೂವತ್ತೆಂಟು ಲಕ್ಷ ರೂಪಾಯಿಗಳು, ನಾವು ಕನ್ನಡ ಅಭಿಮಾನದ ಬಗ್ಗೆ ಬಹಳಷ್ಟು ಮಾತನಾಡುತ್ತೇವೆ. ಹೊರನಾಡ ಕನ್ನಡಿಗರು ಸುಮಾರು ೫೦ ಲಕ್ಷದಷ್ಟು ಜನರು ಕರ್ನಾಟಕದ ಹೊರಗೆ ಇದ್ದಾರೆ. ಅವರು ಬಹಳಷ್ಟು ಸಂಘ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದರೂ ಅವರಿಗೆ ಹೆಚ್ಚಿನ ಉತ್ತೇಜನ ಸಿಗುತ್ತಿಲ್ಲ. ಈ ವರ್ಷ ೨೫ ಲಕ್ಷ ರೂಪಾಯಿಗಳನ್ನು ಹಿಂದಿನ ವರ್ಷದ ಜೊತೆಗೆ ಹೊರನಾಡು ಕನ್ನಡ ಸಂಸ್ಥೆಗಳಿಗೆ ನೀಡಲಾಗಿದೆ. ಇನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಬಗ್ಗೆ ಹೇಳುವುದಾದರೆ ಇದು ರಾಜ್ಯದಲ್ಲೇ ಹೆಮ್ಮೆ ಪಡುವಂಥ ಕಲಾಕ್ಷೇತ್ರ. ಇಲ್ಲಿ ಧ್ವನಿ ಮತ್ತು ದೀಪದ ಸಂಯೋಜನೆ ಸರಿಯಿಲ್ಲವೆಂದು ಬಹಳಷ್ಟು ಕಲಾವಿದರು ಮತ್ತು ವಿಮರ್ಶಕಾರರಿಂದ ಟೀಕೆಗಳು ಬರುತ್ತಿತ್ತು. ಹಣ ಕೊಡುವ ವಿಚಾರದಲ್ಲಿ ನಮ್ಮಿಂದ ಏನೂ ತೊಂದರೆಯಾಗಲಿಲ್ಲ. ಒಂದೇ ಒಂದು ತೊಂದರೆ ಏನು ಬಂತು ಎಂದರೆ, ಈ ಡ್ರಾಮಾ ತಜ್ಞರು ಏನಿರುತ್ತಾರೆ ಅವರ ದೃಷ್ಟಿಕೋನ ಒಂದೇ ತರಹ ಇರುವುದಿಲ್ಲ. ಒಂದು ಸಲಹೆ ನೀಡಿದ ಮೇಲೆ ಅದನ್ನು ಬದಲಾಯಿಸುತ್ತಲೇ ಇರುತ್ತಾರೆ. ಆದ್ದರಿಂದ ಪ್ರತಿಯೊಂದು ನಾಟಕ ತಂಡದವರೂ ಒಪ್ಪಿಕೊಳ್ಳುವಂಥ, ಕಾರ್ಯಕ್ರಮ ಕೈಗೊಂಡಿದ್ದೇವೆ ಏಕೆಂದರೆ ಇದನ್ನು ಉಪಯೋಗ ಮಾಡಿಕೊಳ್ಳುವವರು ಕಲಾವಿದರು, ಸಾಹಿತಿಗಳು ಎಲ್ಲರಿಗೂ ಉಪಯೋಗವಾಗುವಂಥ ರೀತಿಯಲ್ಲಿ ಇದರ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಹಣದ ಕೊರತೆ ಯಾವುದೂ ಮಾಡಿಲ್ಲ. ಮೊನ್ನೆ ಜನವರಿ ೨೬ಕ್ಕೆ ಇದರ ಉದ್ಘಾಟನೆ ಮಾಡಬೇಕೆಂದು ಇತ್ತು. ಎಲ್ಲಾ ತಯಾರಾದಾಗ ಮುಂದಿನ ಭಾಗದಲ್ಲಿ ಬರುವಂಥ ಬೆಳಕು ಸಾಲದು ಅದನ್ನು ಬೇರೆ ಹಾಕಬೇಕು ಎಂದು ಸಲಹೆ ಕೊಟ್ಟರು. ಬಹಳಷ್ಟು ರಂಗಕಲಾವಿದರು ಇದರ ಬಗ್ಗೆ ಹೇಳಿದರು. ೧೨ ಲಕ್ಷ ಹೇಗಿದ್ದರೂ ಖರ್ಚು ಮಾಡಿದ್ದೇವೆ, ಇದನ್ನು ಏಕೆ ಮಾಡಬಾರದು ಎಂದು ಈ ಒಂದು ಕಾರಣಕ್ಕಾಗಿ ಇದರ ಪುನರಾರಂಭವನ್ನು ಮುಂದಕ್ಕೆ ಇಟ್ಟಿದ್ದೇವೆ. ಇನ್ನು ಬರೀ ಹದಿನೈದು ದಿವಸದೊಳಗೇ ಒಂದು ಸರ್ವಸುಸಜ್ಜಿತ ಇಡೀ ಹೆಮ್ಮೆ ದೇಶವೇ ಪಡುವಂಥ ರವೀಂದ್ರ ಕಲಾಕ್ಷೇತ್ರವನ್ನು ಕನ್ನಡ ಕಲಾಭಿಮಾನಿಗಳಿಗೆ ಕೊಡುಗೆಯಾಗಿ ಕೊಡುತ್ತೇವೆ.

ಆ ಮೇಲೆ ಅಕಾಡೆಮಿಗಳು. ಸ್ವಾಮಿ, ನಮ್ಮ ರಾಜ್ಯದಲ್ಲಿ ಉರ್ದು ಸೇರಿ ಆರು ಅಕಾಡೆಮಿಗಳಿವೆ ಇವುಗಳಿಗೆ ಸ್ವಂತ ಕಟ್ಟಡ ಇಲ್ಲ. ಆದರೆ ಹಣದ ಕೊರತೆಯನ್ನು ನಾವು ಯಾರಿಗೂ ಮಾಡಿಲ್ಲ. ಅವರು ಕೇಳಿದ್ದಕ್ಕಿಂತ ಜಾಸ್ತಿನೇ ಕೊಟ್ಟಿದ್ದೇವೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾದರೆ, ಅಕಾಡೆಮಿಗಳು ತಾವು ತಾವೇ ಕಾರ್ಯ ಕ್ರಮಗಳನ್ನು ಹಾಕಿಕೊಳ್ಳುವುದು, ತಮ್ಮವರಿಗೇ ಅವಕಾಶ ಕೊಡುವುದು ಆಗದೆ ಕಲಾವಿದರಿಗೆ, ರಂಗಭೂಮಿ ಕಲಾವಿದರಿಗೆ, ಸಾಹಿತಿಗಳಿಗೆ ಇದು ತಮ್ಮ ಅಕಾಡೆಮಿ ಎನ್ನುವ ಭಾವನೆ ಮೂಡಿಸುವಂತೆ ಅವುಗಳು ಇರಬೇಕು. They must be research oriented academies —————— ಎನ್ನುವ ಭಾವನೆ ಸರ್ಕಾರದ್ದು. ಆದರೆ ಈ ಅಕಾಡೆಮಿಗಳನ್ನು ಒಂದು ಕಟ್ಟಡದ ಒಳಗೆ ತರುವುದಕ್ಕೆ ಕೆಲವು ವರ್ಷಗಳಿಂದಲೂ ಆಗಿರಲಿಲ್ಲ. ಇದಕ್ಕೆ ಈ ವರ್ಷ ಸರ್ಕಾರ ಪ್ರಯತ್ನ ಮಾಡುತ್ತದೆ. ಬಜೆಟ್ ಹೆಡಿಂಗ್ಸ್‌ನಲ್ಲಿ ಒಂದು ಲಕ್ಷ ರೂಪಾಯಿ ಕೊಡುತ್ತಾರೆ. ಇದರಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಅಕಾಡೆಮಿಗಳನ್ನು ಒಂದೇ ಒಂದು ಛಾವಣಿ ಕೆಳಗೆ ತರಬೇಕೆಂಬ ಹಂಬಲ ಇಟ್ಟುಕೊಂಡು ಮೂವತ್ತು ಲಕ್ಷ ರೂಪಾಯಿಗಳನ್ನು ಸರ್ಕಾರ ಅಕಾಡೆಮಿಗಳ ಕಟ್ಟಡಕ್ಕೋಸ್ಕರ ಇಟ್ಟಿದೆ. ಇನ್ನು ಪಾರಿಭಾಷಿಕಗಳನ್ನು ಇಲಾಖೆಗಳಿಗೆ ಸಿದ್ಧ

ಪಡಿಸಲಾಗಿದ್ದು ಅದನ್ನು ಮುದ್ರಣ ಮಾಡಲಾಗುವುದು. ಪೂರಕ ಸಾಹಿತ್ಯವಾಗಿ ಎಂಟು ಪ್ರಕಟಣೆಗಳನ್ನು ಮಾಡುತ್ತೇವೆ. ಜನಪ್ರಿಯ ಬಾರ ಸಾಹಿತ್ಯಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದೇವೆ. ಇದಕ್ಕಾಗಿ ಹಿಂದಿನ ಸರ್ಕಾರವನ್ನು ಹೊಗಳಬೇಕಾಗಿ. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಬಹಳಷ್ಟು ವೈಶಿಷ್ಟ್ಯ ಪೂರ್ಣವಾದ ೧೧೪ ಪುಸ್ತಕಗಳನ್ನು ತಂದರು. ಇವುಗಳನ್ನು ವಿಶ್ವ ಕನ್ನಡ ಸಮ್ಮೇಳನ ಸಂದರ್ಭದಲ್ಲಿ ಬಿಡುಗಡೆ ಆಗಬೇಕೆಂದು ಕಾರ್ಯಕ್ರಮ ಇತ್ತು. ಒಟ್ಟು ೩೦೭ ರೂಪಾಯಿ ಬೆಲೆಯ ೧೧೪ ಪುಸ್ತಕಗಳನ್ನು ಈಗಾಗಲೇ ಸಾರ್ವಜನಿಕರಿಗೆ ವಿತರಿಸಿದ್ದೇವೆ. ಇದಕ್ಕೆ ಎಷ್ಟು ಬೇಡಿಕೆ ಇದೆಯೆಂದರೆ ೩೦೭ ರೂಪಾಯಿ ಬೆಲೆಯ ಪುಸ್ತಕಗಳು ಬ್ಲಾಕ್ ಮಾರ್ಕೆಟ್‌ನಲ್ಲಿ ಸಾವಿರಾರು ರೂಪಾಯಿಗೆ ಮಾರಾಟವಾಗಬಲ್ಲ ವೈಶಿಷ್ಟ್ಯಪೂರ್ಣ ಪುಸ್ತಕಗಳನ್ನು ಬಿಡುಗಡೆ ಮಾಡಿದ್ದೇವೆ. ಇವುಗಳ ತಲಾ ಐದು ಸಾವಿರ ಪ್ರತಿಗಳಲ್ಲಿ ಎರಡು ಸಾವಿರ ಪ್ರತಿಗಳನ್ನು ಇಟ್ಟುಕೊಂಡು, ಉಳಿದ ಮೂರು ಸಾವಿರ ಸೆಟ್ಟುಗಳನ್ನು ಈಗಾಗಲೇ ಮಾರಿಯಾಗಿದೆ. ಇವುಗಳ ಪುನರ್ ಮುದ್ರಣ ಆಗಬೇಕೆಂದು ಬೇಡಿಕೆಗಳು ಬಹಳ ಬಂದಿವೆ. ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಜ್ಯ ಸಾಂಸ್ಕೃತಿಕ ತಂಡಗಳ ವಿನಿಮಯಕ್ಕೆ ಪ್ರೋತ್ಸಾಹ ಕೊಟ್ಟಿದ್ದೇವೆ. ಒಂದು ಮಾತನ್ನು ಮಾತ್ರ, ದುರಹಂಕಾರವೆಂದು ಹೇಳುತ್ತಿಲ್ಲ. ಕರ್ನಾಟಕ ಸರ್ಕಾರದಲ್ಲಿ ಯಾವುದೇ ಕಲಾವಿದನಾಗಲೀ, ಕಲಾ ಸಂಸ್ಥೆಯಾಗಲೀ, ಸರ್ಕಾರದ ಸಹಾಯ ಕೇಳಿ ಬಂದವರು ವಾಪಾಸ್ಸು ಹೋಗಿಲ್ಲ. ಪ್ರತಿಯೊಂದು ಕಲಾಸಂಸ್ಥೆಗಳಿಗೆ ನಮಗೆ ಇದ್ದ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಕೂಡ ಸ್ವಲ್ಪವಾದರೂ ಸಹಾಯ ಕೊಟ್ಟು ಅವರನ್ನು ಸಂತೋಷ ಪಡಿಸಿದ್ದೇವೆ. ಈ ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಸಹಾಯ ಯಾಚಿಸಿ ಬಂದವರು ಯಾರನ್ನೂ ಕೂಡ ನಾವು ಬೇಜಾರು ಪಡಿಸಿಲ್ಲ. ಅವರು ವಿಧಾನಸೌಧದ ಮೆಟ್ಟಿಲು ತುಳಿಯದ ಹಾಗೆ ಅವರಿಗೆ ಸಾಧ್ಯವಾದಷ್ಟು ಸಹಾಯ ಕೊಟ್ಟು ಅವರ ಮನಸ್ಸನ್ನು ಸಂತೋಷಪಡಿಸಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಕಲಾವಿದರು, ಎಲ್ಲಾ ವಿಚಾರವಾದಿಗಳು ಈ ಸರ್ಕಾರದ ಬೆನ್ನೆಲುಬಾಗಿದ್ದಾರೆ. ನಾವು ಕೂಡ ಅವರ ಜೊತೆಗೆ ಇದ್ದೇವೆ. ಅವರು ಕೂಡ ನಮ್ಮ ಜೊತೆಗಿದ್ದಾರೆ. ಪ್ರಾಚ್ಯ ವಸ್ತು ಮತ್ತು ವಸ್ತು ಸಂಗ್ರಹಾಲಯ ಇಲಾಖೆಯದು ಈ ವರ್ಷ ಶತಮಾನೋತ್ಸವ. ಇದು ಇಡೀ ದೇಶದಲ್ಲೇ ಬಹಳ ಹಳೆಯ ಇಲಾಖೆ. ಈ ವರ್ಷ ಇದರ ಶತಮಾನೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಇದರ ಅಂಗವಾಗಿ ಅಕ್ಟೋಬರ್ ತಿಂಗಳಿನಲ್ಲಿ ಸಾಧ್ಯವಾದರೆ ವಿಶ್ವ ಕನ್ನಡ ಸಮ್ಮೇಳನ ಜೊತೆಯಲ್ಲೇ ವಿಶ್ವವಿಖ್ಯಾತ ಪ್ರಾಚ್ಯ ಸಂಶೋಧಕರು ಇತಿಹಾಸಕಾರರು, ಇವರ ದೊಡ್ಡ ಸಮ್ಮೇಳನ ನಡೆಸಬೇಕೆಂದು ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಐಹೊಳೆ, ಬಾದಾಮಿಯಲ್ಲಿ ಇದನ್ನು ನಡೆಸಬೇಕೆಂದು. ಈ ಸ್ಥಳಗಳನ್ನು ನಾನು ಹೋಗಿ ನೋಡಿಲ್ಲವೆಂದು ಅವರು ಹೇಳಿದ್ದಾರೆ.

ಒಂದು ಮಾತನ್ನು ವಿರೋಧ ಪಕ್ಷದ ನಾಯಕರು ಪ್ರವಾಸೋದ್ಯಮದ ಬಗ್ಗೆ ಹೇಳಿದರು. ಮಾನ್ಯ ರಘುಪತಿಯವರು ಅದಕ್ಕೆ ಉತ್ತರ ಹೇಳುತ್ತಾರೆ. ಮಂತ್ರಿಗಳಾದ ಜೀವರಾಜ್ ಆಳ್ವರವರು ಹಂಪೆಗೆ ಹೋಗಲಿಲ್ಲವೆಂದು ಹೇಳಿದರು. ನಾನು ಪ್ರಾಚ್ಯವಸ್ತು ಸಂಗ್ರಹಾಲಯದ ಇಲಾಖೆಯ ಮಂತ್ರಿಯಾದ ಮೇಲೆ ಕಾರಣಾಂತರದಿಂದ ಹೋಗಿಲ್ಲ. ಹಿಂದೆ ಮಂತ್ರಿ ಆದಮೇಲೆ ಬಹಳಷ್ಟು ಸಾರಿ ಭೇಟಿ ಮಾಡಿದ್ದೇನೆ. ಬೇಲೂರು, ಹಳೇಬೀಡು, ಹಂಪೆ ವಿರೋಧಪಕ್ಷದ ನಾಯಕರಿಗೆ ಎಷ್ಟು ಹತ್ತಿರವೋ, ನನಗೂ ಅಷ್ಟೇ ಹತ್ತಿರವೇ ಇದೆ. ಬಾದಾಮಿ, ಐಹೊಳೆಯಲ್ಲಿ ಬಹಳಷ್ಟು ಜಗದ್ವಿಖ್ಯಾತ ಗುಹೆಗಳಿವೆ. ಶಿಲ್ಪ ಕಲಾ ವೈಭವವಿದೆ. ಈ ಜಾಗದಲ್ಲಿ ಹಿಂದಿನ ಸರ್ಕಾರ ಪ್ರಾಚ್ಯ ಇಲಾಖೆಯ ಮ್ಯೂಸಿಯಂ ಮಂಜೂರು ಮಾಡಿ ಮೂರು ವರ್ಷಗಳಾದರೂ ಕೂಡ ಉದ್ಘಾಟನೆ ಮಾಡಲಿಲ್ಲ. ಅಲ್ಲಿನ ಸಂಶೋಧನೆ ಕೆಲಸ ಮಾಡತಕ್ಕವರು ಡಿಪ್ಲೋಮೋ ಇನ್ ಸಿವಿಲ್ ಇಂಜನಿಯರಿಂಗ್ ಮಾಡಿಕೊಂಡಿದ್ದಾರೆ. ಕೇವಲ ೨೧ ವರ್ಷದ ಹುಡುಗನನ್ನು ಅಲ್ಲಿ ಹಾಕಿದ್ದಾರೆ. ಕೆಳಗಿನ ದರ್ಜೆಯ ೩-೪ ನೌಕರರು ಆತನ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ಪ್ರಾಚ್ಯ ವಸ್ತುಗಳ ಬಗ್ಗೆ ಯಾವ ರೀತಿ ನಡೆದುಕೊಳ್ಳುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಬೇಲೂರು, ಹಳೇಬೀಡು, ಬಾದಾಮಿ, ಐಹೊಳೆ ಯಾವುದೇ ಆಗಿರಲಿ ಅಲ್ಲಿ ಒಬ್ಬ ಡಿಪ್ಲೋಮೋ ಇನ್ ಸಿವಿಲ್ ಇಂಜನಿಯರಿಂಗ್ ಆದಂಥ ಒಬ್ಬರನ್ನು ಇಟ್ಟಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗಿದ್ದಾರೆ. ಅವರು ಇದನ್ನು ಕಣ್ಣು ಬಿಟ್ಟು ನೋಡಿದ್ದಾರೋ ಇಲ್ಲವೋ! ಆದರೆ ನಮ್ಮ ಇಲಾಖೆಯಲ್ಲಿ ಏನು ಮಾಡುಲ್ಲ ಎಂದು ಹೇಳುತ್ತಿದ್ದಾರೆ. ಇವತ್ತು ಹಂಪೆ ಪುನರುತ್ಥಾನ ಬಗ್ಗೆ ಹೇಳಬೇಕಾದರೆ ವಿರೋಧಪಕ್ಷದ ನಾಯಕರು ಹಿಂದೆ ಮಂತ್ರಿಗಳಾಗಿ, ಪಕ್ಷದ ನಾಯಕರೂ ಆಗಿ ಕೆಲಸ ಮಾಡಿ ಬಹಳಷ್ಟು ಅನುಭವ ಅವರಿಗಿದೆ. ಅವರನ್ನು ಕಮಿಟಿಗೆ ಹಾಕಬೇಕೆಂದು

ಅವರ ಸಲಹೆ ಸಹಕಾರ ಬೇಕೆಂದು ಹೇಳಿದ್ದೇನೆ. ಹಂಪೆ ಪುನರುತ್ಥಾನ ಇರಲಿ, ಬೇಲೂರು ಹಳೇಬೀಡು ಗಳಲ್ಲಿ ಕೈಗೊಳ್ಳತಕ್ಕ ಹೊಸ ಸಾಂಸ್ಕೃತಿಕ ಕಾರ್ಯಕ್ರಮಗಳ ಇರಲಿ, ಇಲ್ಲಿ ಬಿ.ಎ., ಬಿ.ಎಸ್ಸಿ.. ಮಾಡಿಕೊಂಡಿರುವವರು ಅಧಿಕಾರಿಗಳಾಗಿರುತ್ತಾರೆ. ಅಲ್ಲಿ ಏನಾದರೂ ಸಾಂಸ್ಕೃತಿಕ ಕಾರ್ಯಕ್ರಮ ವನ್ನು ಏರ್ಪಡಿಸುತ್ತೇವೆಂದರೆ ಅಧಿಕಾರಿಗಳು ಮೈಸೂರಿನಿಂದ ಮಾಡಬೇಡಿ ಎಂದು ಹೇಳುವುದಕ್ಕೆ ಬರು ತ್ತಾರೆ. ಮಾಡಬೇಡಿ ಎಂದು ಏತಕ್ಕೆ ಹೇಳುತ್ತಾರೆಂದರೆ ಅಷ್ಟು ಹಳೆಯ ಕಲ್ಲುಕಟ್ಟಡಗಳು ಅಪಾಯ ಇದೆ ಎನ್ನುತ್ತಾರೆ. ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಪ್ರಾಚ್ಯವಸ್ತು ಇಲಾಖೆ ಇದೆ. ಹಂಪೆಯ ಪುನರುತ್ಥಾನ ಕಾರ್ಯಕ್ಕೆ ಈ ವರ್ಷ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬೃಂದಾವನ ಕಾರಂಜಿಯು ನಮ್ಮ ಕಾಲದಲ್ಲಿ ಮಾಡಿದ್ದು ನೀವು ಉದ್ಘಾಟನೆ ಮಾಡಿದ್ದೀರಿ ಎಂದು ಹೆಮ್ಮೆಯಿಂದ ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಹೇಳಿಕೊಂಡರು. ಮೈಸೂರು ಅರಮನೆಯಲ್ಲಿ ಕನ್ನಡ ವಿಶ್ವಸಮ್ಮೇಳನ ಮತ್ತು ಕನ್ನಡ ಸಾಂಸ್ಕೃತಿಕ ಸಮ್ಮೇಳನ ಮಾಡುವುದರಿಂದ ಕರ್ನಾಟಕ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಇದರಿಂದ ಮೇಲೆತ್ತರಕ್ಕೆ ಹೋಗುತ್ತದೆ. ಧ್ವನಿದೀಪ ಸಂಯೋಜನೆ ನಮ್ಮ ಮೈಸೂರು ಅರಮನೆಯಲ್ಲಿ ಮಾಡಬೇಕೆಂದು ಮಾಡಿದ್ದೇವೆ. ಇದು ಅತ್ಯಂತ ಆಕರ್ಷಣೀಯವಾಗಿರು ತ್ತದೆಂದು ನಂಬಿದ್ದೇವೆ.

ಇನ್ನು ವಿಮಾನ ತರಬೇತಿ ಶಾಲೆ ಬಗ್ಗೆ ಮಾನ್ಯ ಡಾ. ವಿ. ಎಸ್. ಆಚಾರ್ಯರವರು ಮಂಗಳೂರು ಫ್ಲೈಯಿಂಗ್ ಸ್ಕೂಲ್ ಆಗಲಿಲ್ಲವೆಂದು ಹೇಳಿದರು. ಅದಕ್ಕೆ ಕಾರಣ ಟೆಕ್ನಿಕಲ್ ಪ್ರಾಬ್ಲಮ್ಸ್ ಇತ್ತು. ಡಿ. ಜಿ. ಪಿಡ್ಸ್‌ಗೆ ಕೇಂದ್ರ ಸರ್ಕಾರದ ವಿಮಾನಯಾನ ಖಾತೆಯಿಂದ ಎನ್.ಒ.ಸಿ. ಬರಬೇಕಾಗಿತ್ತು. ಅದು ಈಗತಾನೇ ಬಂದಿದೆ. ಈ ಕಾರ್ಯವನ್ನು ಈ ವರ್ಷದ ಡಿಸೆಂಬರ್ ಒಳಗೆ ಪ್ರಾರಂಭ ಮಾಡುತ್ತೇವೆ. ಇನ್ನೊಂದು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಒಂದು ಸಂತೋಷದ ಸುದ್ದಿ. ಏನೆಂದರೆ ಫ್ಲೈಯಿಂಗ್ ಸ್ಕೂಲನ್ನು ಅಲ್ಲಿ ಈ ವರ್ಷ ಪ್ರಾರಂಭ ಮಾಡುತ್ತೇವೆ. ಇನ್ನೊಂದು ಸಂತೋಷದ ವಿಚಾರವೇನೆಂದರೆ ದೆಹಲಿ ಬಿಟ್ಟರೆ ದಕ್ಷಿಣಕನ್ನಡದಲ್ಲಿ ಆಲ್ ಇಂಡಿಯಾ ಏರ್ ರ್‍ಯಾಲಿ ಆಗಿರಲಿಲ್ಲ. ಏರೋಕ್ಲಬ್ ಆಫ್ ಇಂಡಿಯಾಕ್ಕೆ ಮಾನ್ಯ ರಾಜೀವ್ ಗಾಂಧಿಯವರು ಅಧ್ಯಕ್ಷರಾಗಿದ್ದಾರೆ. ನ್ಯಾಷನಲ್ ಏರ್ ರ್‍ಯಾಲಿ ಮತ್ತು ನ್ಯಾಷನಲ್ ಏರ್ ರೇಸನ್ನು ಕರ್ನಾಟಕದ ಬೆಂಗಳೂರು ನಗರದಲ್ಲಿ ಮಾಡಬೇಕೆಂದು ಇದ್ದೇವೆ. ಅದು ಮಾರ್ಚ್ ಏಪ್ರಿಲ್‌ನಲ್ಲಿ ಆಗಬೇಕಾಗಿತ್ತು. ಮಾನ್‌ಸೂನ್ ಗಾಳಿ ತೊಂದರೆ ಇದೆಯೆಂದು ಜೊತೆಗೆ ಟೆಕ್ನಿಕಲ್ ತೊಂದರೆ ಇದೆಯೆಂದು ಹೇಳಿರುವುದಕ್ಕೋಸ್ಕರ ಬರುವ ಅಕ್ಟೋಬರ್ ತಿಂಗಳಲ್ಲಿ ನ್ಯಾಷನಲ್ ಏರೋ ಕ್ಲಬ್ ಆಫ್ ಇಂಡಿಯ ಅವರ ಆಶ್ರಯದಲ್ಲಿ ನಾವು ಇದನ್ನು ಮಾಡುತ್ತಿದ್ದೇವೆ. ಇನ್ನೊಂದು ವಿಚಾರವೆಂದರೆ ವಿಮಾನಯಾನ ಖಾತೆ ಏನು ಇದೆ ಅದರಲ್ಲಿ ಫ್ಲೈಯಿಂಗ್ ಇನ್‌ಸ್ಟಿಟ್ಯೂಟ್ ಎಂದು ಮಾಡಿ ದ್ದಾರೆ. ನಮ್ಮಲ್ಲಿ ಸುಮಾರು ೧೨ ಏರ್‌ಸ್ಟ್ರಿಪ್ಸ್ ಇವೆ. ಆರು ಏರೋಕ್ರಾಫ್ಟ್ಸ್ ಇವೆ. ಒಂದು ಹೆಲಿ ಕಾಪ್ಟರ್ ಇದೆ. ಸರಿಯಾದ ಒಂದು ಮೇನ್‌ಟನೆನ್ಸ್ ಇಲ್ಲದೆ ಏರ್‌ಷಿಪ್‌ಗಳು ಏನಾಗಿವೆ ಎಂದರೆ ಮಣ್ಣು ತಿಂದುಕೊಂಡು ಹೋಗುತ್ತಿವೆ. ಅದರಿಂದ ತೊಂದರೆಯಾಗುತ್ತಿದೆ. ಅದಕ್ಕೋಸ್ಕರವಾಗಿ ಈ ಫ್ಲೈಯಿಂಗ್ ಇನ್‌ಸ್ಟಿಟ್ಯೂಟ್‌ಗಳನ್ನು ಪೂರ್ತಿ ಎಲ್ಲಾ ೧೨ ಏರ್‌ಷಿಪ್‌ಗಳನ್ನೊಳಗೊಂಡ ಒಂದು ವಿಮಾನಯಾನ ಖಾತೆ ಯನ್ನಾಗಿ ಮಾಡುವ ಯೋಜನೆ ಸರ್ಕಾರದ ಗಮನದಲ್ಲಿದೆ. ಇವನ್ನು ಮಾನ್ಯ ಸದಸ್ಯರು ಬಹಳ ಮಾತ ನಾಡಿದಾರೆ ಅವರಿಂದ ಬಹಳಷ್ಟು ಸೂಕ್ತ ಸಲಹೆಗಳು ಸರ್ಕಾರಕ್ಕೆ ಬಂದಿವೆ. ಆದರೆ ಒಂದೇ ಒಂದು ಮನಸ್ಸಿಗೆ ಬೇಸರ, ಏನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಕಮಿಟಿ ಬಗ್ಗೆ ಮಾತನಾಡಿದರು. ಒಬ್ಬ ಯುವಕ ಮಂತ್ರಿ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಬೆನ್ನು ತಟ್ಟುತ್ತಾರೆಂದು ನಾನು ತಿಳಿದು ಕೊಂಡಿದ್ದೆ. ಕೊನೆಗೆ ಒಂದು ವಿಚಾರ ಹೇಳಿದರು. ನಾನು ವ್ಯಕ್ತಿಗಳ ಬಗ್ಗೆ ಮಾತನಾಡುತ್ತಿಲ್ಲ. ಅವರು ಟೀಕೆ ಮಾಡುತ್ತ ಕೊನೆಗೆ ಒಂದು ಮಾತು ಸೇರಿಸಿ ರಾಜಕೀಯವಾಗಿ ಮಾಡಿದ್ದೀರಿ ಎಂದು ಹೇಳಿದರು. ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ, ಆರು ಅಕಾಡಮಿಗಳನ್ನು ಪುನರ್ರಚನೆ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ನಿಮ್ಮನ್ನು ಟೀಕೆ ಮಾಡಲಿಲ್ಲ ರಾಜಕೀಯವಾಗಿ ಮಾಡಿದ್ದೀರಿ ಎಂದು ಹೇಳಲೇ ಇಲ್ಲ ಈ ತರಹ ಹೇಳುವುದು ಸರಿಯಲ್ಲ ಯೋಗ್ಯರು ಇದ್ದಾರೆ. ಯೋಗ್ಯರ ಮೇಲೆ ಅಪವಾದ ಬರದ ಹಾಗೆ ಸಮಿತಿಗಳನ್ನು ಮಾಡಬೇಕೆಂದು ಹೇಳಿದ್ದೇನೆ ನಾನು ರಾಜಕೀಯ ಮಾಡಿದ್ದೀರೆಂದು ಹೇಳದೇ ಇರುವಾಗ, ನೀವು ಹೇಳುವುದು ಸರಿಯಲ್ಲ,

ನಾವು ಹೇಳಿದಂತಹ ವಾಕ್ಯಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಮಾತನಾಡಬೇಕು.

ಶ್ರೀ ಜೀವರಾಜ ಆಳ್ವ.—ನಾನು ಬಹಳ ಕಳಕಳಿಯಿಂದ ಈ ಸದನದ ಮುಂದೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ವಿಧಾನ ಸಭೆಯ ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನ ಬನ್ನಿಯವರು ಮತ್ತು ಇನ್ನಿತರ ಕೆಲವು ಸದಸ್ಯರು ಬಂದು ಸಾಹಿತ್ಯ ಅಕಾಡೆಮಿಯಲ್ಲಿ ಸದಸ್ಯರಾಗುವ ಆಸೆ ತೋರಿಸಿದರು. ತಾವು ನಾಟಕ ಕಾರರು ಇರಬಹುದು, ಸಾಹಿತಿಗಳು ಇರಬಹುದು, ಇದರಲ್ಲಿ ಯಾರೂ ರಾಜಕೀಯ ವ್ಯಕ್ತಿಗಳು ಇರ ಬಾರದು, ಇದರಲ್ಲಿ ಶ್ರೇಷ್ಠ ವ್ಯಕ್ತಿಗಳನ್ನು ಹಾಕಬೇಕೆಂಬುದು ಸರ್ಕಾರದ ಬಯಕೆ ಆಗಿದೆ. ಎಂಬುದನ್ನು ತಿಳಿಸಿದಾಗ ಇವರೂ ಒಪ್ಪಿಕೊಂಡಿದ್ದಾರೆ. ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಮಾತನಾಡಿದ್ದೀರಿ. ಹುಬ್ಬಳ್ಳಿ ಯಲ್ಲಿ ಕೆಲವರು ಸಾಹಿತಿಗಳು. ಕಲಾವಿದರು ಸೇರಿ ಅಕಾಡೆಮಿಗಳನ್ನು ಪುನರ್ ರಚನೆ ಮಾಡಬೇಕು ಎನ್ನುವ ಭಾವನೆ ವ್ಯಕ್ತಪಡಿಸಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಮನ್ಸೂರ ಅವರು ಸಂಗೀತ ಲೋಕದ ದಿಗ್ಗಜಗಳಲ್ಲಿ ಒಬ್ಬರು. ಈ ಸಂಗೀತ ಸಾಹಿತ್ಯ ಮತ್ತು ಸಾರಸ್ವತ ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿ ಗಳೂ ಸಹ ಶ್ರೇಷ್ಠ ಸಾಹಿತಿಗಳು ಹಾಗೂ ದಿಗ್ಗಜಗಳು ಆಗಿದ್ದಾರೆ. ಆದುದರಿಂದ ಎಲ್ಲರನ್ನೂ ಗಮನ ದಲ್ಲಿಟ್ಟುಕೊಂಡು ರೀಜನಲ್ ಇಂಬ್ಯಾಲೆನ್ಸ್ ಆಗಬಾರದು ಎನ್ನುವ ದೃಷ್ಟಿಯಿಂದ ಹಾಗೂ ಇದರಲ್ಲಿ ಜಾತೀಯತೆಯನ್ನು ಬೆಳೆಸಬಾರದು ಎನ್ನುವ ದೃಷ್ಟಿಯಿಂದ ಪ್ರಾಮಾಣಿಕವಾಗಿ ಅಕಾಡೆಮಿಯನ್ನು ಪುನರ್ ರಚನೆ ಮಾಡಿದ್ದೇನೆ. ನಾಟಕದಲ್ಲಿ, ಸಂಗೀತದಲ್ಲಿ, ಸಾಹಿತ್ಯದಲ್ಲಿ ಜಾತೀಯತೆಗೆ ಅವಕಾಶವಿಲ್ಲ ಎನ್ನುವ ಮಾತನ್ನು ಹಿರಿಯರು ಹೇಳಿದ್ದಾರೆ. ಅಕಾಡೆಮಿಗಳಲ್ಲಿ ಬ್ರಾಹ್ಮಣಿಕೆ ಇದೆ ಎನ್ನುವ ವಾದ ಬರುತ್ತಿತ್ತು. ಬ್ರಾಹ್ಮಣಿಕೆಯನ್ನು ತೆಗೆದು ಹಾಕುವ ದೃಷ್ಟಿಯಿಂದ ಸಾಹಿತ್ಯ ಅಕಾಡೆಮಿಯಲ್ಲೂ ಐದು ಜನ ಹರಿಜನ ಪ್ರತಿನಿಧಿಗಳನ್ನು ಹಾಕಿದ್ದೇವೆ. ಇದುವರೆಗೂ ಯಾವ ಸರ್ಕಾರವೂ ಕೂಡ ಇಂತಹ ಕೆಲಸವನ್ನು ಮಾಡಿರ ಲಿಲ್ಲ. ಈ ಮಾತನ್ನು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ, ಮಾನ್ಯ ಮೊಯ್ಲಿಯವರು, ಜೀವರಾಜ ಆಳ್ವ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ ಎನ್ನುವ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ,

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಟೀಕೆ ಮಾಡಿಲ್ಲ. ತಾವು ಕಾಲು ಕೆದರಿ, ಜಗಳ ಮಾಡುವ ಹಾಗೆ ಕಾಣುತ್ತದೆ. ತಾವು ಇನ್ನೂ ಯುವಕರು, ಮುಂದೆ ಬರುವವರು ಇದ್ದೀರಿ. ತಾವು ವಿರೋಧ ಪಕ್ಷದವರ ರೀತಿ ಮಾತನಾಡುತ್ತಿದ್ದೀರಿ. ಮಂತ್ರಿಗಳಾದ ಮೇಲೆ ಮಂತ್ರಿಗಳಾಗಿಯೇ ಮಾತ ನಾಡಬೇಕು. ವಿಚಾರವನ್ನು ಪೂರ್ತಿಯಾಗಿ ತಿಳಿದುಕೊಂಡು ಮಾತನಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಜೀವರಾಜ ಆಳ್ವ.— ಸಂತೋಷ, ನಾನು ಒಪ್ಪಿಕೊಂಡಿದ್ದೇನೆ. ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಮಾತನಾಡಿದ್ದೀರಿ. ಇದನ್ನು ನಾವು ಪೂರ್ಣವಾಗಿ ನೋಡಿದಾಗ ಹೌದು ಅನಿಸುತ್ತೆ. ಆದರೆ ಒಳಹೊಕ್ಕು ನೋಡಿದಾಗ, ನಿಜವಾದ ವಿಷಯ ಗೊತ್ತಾಗುತ್ತದೆ. ಮಾನ್ಯ ಚಂದ್ರಶೇಖರ ಕಂಬಾರ ಅವರು ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾರೆ. ಅವರು ಬೆಂಗಳೂರಿನಲ್ಲಿ ಉಳಿದಿದ್ದಾರೆ, ಬೆಂಗಳೂರು ವಿಳಾಸ ಇದೆ, ಅವರು ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ. ಗೋಧಿಗೆರೆ ಗ್ರಾಮದವರು. ಶ್ರೀ ಸೋಮಶೇಖರ ಸಾಲಿ ಅವರು ಶ್ರೇಷ್ಠ ಸಾಹಿತಿಗಳು, ಕಲಾವಿದರು. ಇವರಿಗೆ ೭೧ ವರ್ಷ ವಯಸ್ಸಾಗಿದೆ. ಇವರೂ ಬೆಂಗಳೂರಿನಲ್ಲಿದ್ದಾರೆ. ಇವರೂ ಕೂಡ ಬಿಜಾಪುರ ಜಿಲ್ಲೆಯವರು. ಈ ದಿಗ್ಗಜಗಳು ಸಾರಸ್ವತ ಲೋಕದಲ್ಲಿದ್ದು, ರಾಜಕಾರಣಿಗಳು ಯಾವ ರೀತಿ ಬೆಂಗಳೂರಿಗೆ ವಲಸೆ ಬರು ತ್ತಾರೋ, ಅದೇ ರೀತಿ ಇವರೂ ಕೂಡ ಬೆಂಗಳೂರಿಗೆ ಬಂದು ನೆಲೆಸುತ್ತಿದ್ದಾರೆ, ಬೆಂಗಳೂರು ವಿಳಾಸ ಕೊಡುತ್ತಿದ್ದಾರೆ. ಇದು ಎಲ್ಲಾ ಕ್ಷೇತ್ರಗಳಲ್ಲೂ ನಡೆದು ಬಂದಿದೆ. ಸೋಮಶೇಖರ ಸಾಲಿಯವರು ಬಿಜಾಪುರದವರು, ಅವರು ಬಿಜಾಪುರ ಜಿಲ್ಲೆಯನ್ನು ಪ್ರತಿನಿಧಿಸಿದಂತಾಗುವುದಿಲ್ಲವೇ ? ಚಂದ್ರಶೇಖರ ಕಂಬಾರ ಅವರು ಬೆಳಗಾಂ ಜಿಲ್ಲೆಯನ್ನು ಪ್ರತಿನಿಧಿಸಿದಂತಾಗುವುದಿಲ್ಲವೇ ! ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ನಾನು ಬಹಳ ಕಳಕಳಿಯಿಂದ ವಿಧಾನ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಳುತ್ತಿದ್ದೇನೆ. ಇದರಲ್ಲಿ ಕಿಂಚಿತ್ತೂ ಲೋಪ ಮಾಡಿಲ್ಲ. ಬಹಳಷ್ಟು ವ್ಯಕ್ತಿಗಳನ್ನು ಯಾವುದೇ ಜಾತೀಯತೆಯ ಲವಲೇಶವೂ ಇಲ್ಲದೆ, ಯಾವ ಪ್ರಭಾವಕ್ಕೂ ಒಳಗಾಗದೆ ಆರಿಸಿ, ಅಕಾಡೆಮಿಗಳನ್ನು ಪುನರ್ ರಚಿಸಿದೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೂ ಅವಕಾಶ ಮಾಡಿದೆ. ವಿವೇಕ ರೈ, ಲಕ್ಷ್ಮೀ ನಾರಾಯಣ ಹಾಗೂ ಕು. ಶಿ. ಹರಿದಾಸ ಭಟ್ಟರು ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಷ್ಟು ಜನ ಮಾತ್ರವೇ ಇರೋದು, ಅಲ್ಲಿ ವಿದ್ವಾಂಸರು, ಕಲಾ ವಿದರೂ ಬಹಳ ಜನ ಇದ್ದಾರೆ.

ಶ್ರೀ ಜೀವರಾಜ ಆಳ್ವ.—ಶ್ರೀ ವಿವೇಕ ರೈ ಮತ್ತು ಮಂಡ್ಯಾದ ಶ್ರೀ ಚಾಮಣ್ಣನವರನ್ನು ಜಾನಪದ ಅಕಾಡೆಮಿಗೆ ಹಾಕಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಧಾವಿ ಹಾಗೂ ಪ್ರಭಾವಿ ಪೂರ್ಣ

ಜನರು ಇದ್ದಾರೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲೂ ಕೂಡ ಹಾಕಿದ್ದೇವೆ. ಹೆಸರುಗಳ ಪೂರ್ತ ಪಟ್ಟಿ ಇಲ್ಲಿ ಇಲ್ಲ. ಸದಸ್ಯರಿಗೆ ನಂತರ ಒದಗಿಸಿ ಕೊಡುತ್ತೇನೆ. ರಾಯಚೂರು ಜಿಲ್ಲೆಯಿಂದ ಶ್ರೀ ಚೆನ್ನಣ್ಣ ವಾಲೀಕಾರ ಅವರನ್ನು ಹಾಕಿದ್ದೇವೆ. ಸಾಹಿತ್ಯ ಸಾರಸತ್ವ ಲೋಕದಲ್ಲಿ ಇರತಕ್ಕಂಥ ದಿಗ್ಗಜಗಳು ಬೆಂಗಳೂರಿನಲ್ಲಿರುವುದರಿಂದ, ಬೆಂಗಳೂರು ಪ್ರತಿನಿಧಿಗಳ ಸಂಖ್ಯೆ ಜಾಸ್ತಿ ಇದ್ದ ಹಾಗೆ ಕಾಣುತ್ತದೆ. ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀ ನಿಸಾರ ಅಹಮದ್ ಅವರು ಶ್ರೇಷ್ಠ ಸಾಹಿತಿಗಳು, ಇದು ಎಲ್ಲರೂ ಹೆಮ್ಮೆ ಪಡುವಂತಹ ವಿಚಾರ. ಬಹಳಷ್ಟು ಸಾಹಿತಿಗಳು ಬಂದು ಅವರಿನ್ನೂ ಯುವಕರಿದ್ದಾರೆ, ಇನ್ನೂ ಸ್ವಲ್ಪ ಕಾಲ ಆದ ಮೇಲೆ ಕೊಡಬಹುದಿತ್ತು ಎಂದು ಹೇಳಿದರು. ಅಂತರ ರಾಷ್ಟ್ರೀಯ ಯುವಕ ಸಂವತ್ಸರದಲ್ಲಿ ಒಬ್ಬರು ಯುವಕ ಸಾಹಿತಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ಬೇರೆಯವರು ತಾಳಿಕೊಳ್ಳಬೇಕು. ಇವರು ಮುಸ್ಲಿಂ ಜನಾಂಗದಲ್ಲಿ ಹುಟ್ಟಿ ಶ್ರೇಷ್ಠ ಸಾಹಿತಿಯಾಗಿ, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ, ಆದುದರಿಂದ ಇವರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು ಕೆಲವರಿಗೆ ಮುಜುಗರವಾಗಿರಬಹುದು. ಯಾರನ್ನೇ ಮಾಡಿದರೂ ಇದು ನಡೆಯುತ್ತದೆ. ಮಾನ್ಯ ಶಿವರುದ್ರಪ್ಪನವರನ್ನು ಮಾಡಿದ್ದರೂ ಕೂಡ ಇಂತಹ ಅಪಾದನೆ ಬರುತ್ತಿತ್ತು. ಕನ್ನಡ ಸಾಹಿತ್ಯದಲ್ಲಿ ಇರುವಷ್ಟು ರಾಜಕೀಯ ಎಲ್ಲೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ದಯ ಮಾಡಿ. ಪರ್ಸನಾಲಿಟೀಸ್ ವಿಚಾರ ಮಾತನಾಡಬೇಡಿ. ಶಿವರುದ್ರಪ್ಪನವರನ್ನು ಮಾಡಿದರೆ ಮಂತ್ರ್ಯೊಬ್ಬರಿಗೆ ಮುಜುಗರವಾಗುತ್ತದೆಂದು ಹೇಳುವುದು ಸರಿಯಲ್ಲ. ಅವರೂ ಕೂಡ ಶ್ರೇಷ್ಠ ಸಾಹಿತಿಗಳು, ಈ ರೀತಿಯಾಗಿ ಮಾತನಾಡುವುದರಿಂದ ಜಾತೀಯತೆಯನ್ನು ಎತ್ತಿ ಕಟ್ಟಿದ ಹಾಗೆ ಆಗುತ್ತದೆ.

ಶ್ರೀ—ಜೀವರಾಜ ಆಳ್ವ.—ಮಾನ್ಯ ಶಿವರುದ್ರಪ್ಪನವರೂ ಕೂಡ ಶ್ರೇಷ್ಠ ಸಾಹಿತಿಗಳು, ಸಾರಸ್ವತ ಲೋಕದ ದಿಗ್ಗಜಗಳು ಮತ್ತು ಶ್ರೇಷ್ಠ ಪುರುಷರು ಎನ್ನುವ ಮಾತನ್ನು ಹೇಳಿದ್ದೇನೆ. ಪುನರ್ ರಚಿತ ಅಕಾಡೆಮಿಗಳನ್ನು ಬಹಳ ಕಷ್ಟಪಟ್ಟು ಮಾಡಿದ್ದೇನೆ. ಇದನ್ನು ಈ ಸಭೆಯು ಒಪ್ಪುತ್ತದೆ ಎಂದು ನಂಬಿದ್ದೇನೆ, ಇನ್ನು ಕನ್ನಡ ಶೀಘ್ರಲಿಪಿ ಪುಸ್ತಕಗಳ ಬಗ್ಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಇದರಲ್ಲಿ ತಪ್ಪುಗಳು ಆಗಿದ್ದರೆ ಕೂಡಲೇ ಸರಿಪಡಿಸುತ್ತೇನೆ. ಕೆಲವು ಮಾನ್ಯ ಸದಸ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಮಾತನಾಡಿದ್ದಾರೆ. ಈ ವರ್ಷ ಹಣವನ್ನು ಕಡಿಮೆ ಇಟ್ಟಿದ್ದೀರಿ ಎನ್ನುವ ಆಪಾದನೆಯನ್ನು ಮಾಡಿದ್ದಾರೆ. ಇದಕ್ಕೆ ಹೆಚ್ಚಿನ ಹಣ ಸಹಾಯ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬಜೆಟ್ ಪ್ರಾವಿಷನ್‌ನಲ್ಲಿ ಏನೂ ಕೊಟ್ಟಿಲ್ಲ.

ಡಾ.—ಜೀವರಾಜ ಆಳ್ವ.—೧೫ ಲಕ್ಷ ರೂಪಾಯಿ ಕೊಡಲಾಗಿದೆ. ಇದು ಸ್ವಲ್ಪ ಕಡಿಮೆ ಆಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಅವುಗಳಿಗೆ ಸಮಂಜಾಯಿಷಿ ಉತ್ತರಗಳನ್ನು ಹೇಳಿದ್ದೇನೆ. ಮಾರ್ಚಿ ತಿಂಗಳೊಳಗಾಗಿ ಒಂದು ಪೈಸೆ ಕೂಡ ನಿಲ್ಲಿಸಿಕೊಳ್ಳದೆ ಪೂರ್ತಿ ಹಣವನ್ನು ಬಿಡುಗಡೆ ಮಾಡುತ್ತೇನೆ ಎನ್ನುವ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕನ್ನಡ ಕನ್ನಡ ನಿಘಂಟಿಗೆ ಬೇಕಾದಂತಹ ಹಣ ಬಿಡುಗಡೆ ಆಗಬೇಕು.

ಶ್ರೀ ಜೀವರಾಜ ಆಳ್ವ.—ಈ ಹಣವನ್ನೂ ಕೂಡ ಬಿಡುಗಡೆ ಮಾಡುತ್ತೇನೆ. ಮಾನ್ಯ ಸದಸ್ಯರಾದ ನಾಯಕ್‌ರವರೂ ಹಾಗೂ ರಾಮದೇವ್ ಅವರೂ ಯೂತ್ ಕ್ಲಬ್‌ಗಳ ಬಗ್ಗೆ ಮಾತನಾಡುತ್ತಾ, ರಾಜ್ಯದಲ್ಲಿ ೧೫ ಸಾವಿರ ಯೂತ್ ಕ್ಲಬ್‌ಗಳಿವೆಯೆಂದೂ, ಇವುಗಳಿಗೆ ಹೆಚ್ಚಿನ ಹಣ ಸಹಾಯ ಮಾಡಬೇಕೆಂದೂ ಕೇಳಿದ್ದಾರೆ.

ಇನ್ನು ನ್ಯಾಷನಲ್ ಫಿಟ್‌ನೆಸ್ ಮತ್ತು ಎನ್. ಎಸ್. ಎಸ್. ಸ್ಕೀಮ್‌ಗಳ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಇನ್ನು ಅವಾರ್ಡ್ಸ್ ಟು ರ್‍ಯಾಂಕ್ ಸ್ಟೂಡೆಂಟ್ಸ್ ಬಗ್ಗೆ ಹೇಳಬೇಕಾದರೆ ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ತರಗತಿಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಕೊಡುವ ಅವಾರ್ಡ್ ಅನ್ನು ನಾವು ಮುಂದುವರೆಸಿ ಕೊಂಡು ಹೋಗುತ್ತಿದ್ದೇವೆ. ಮೊದಲು ಇಂಡಿವಿಜುಯಲ್

ಈ ವೆಂಟ್ಸ್‌ಗೆ. ಫುಟ್ ಬಾಲ್‌ಗೆ ಮಾತ್ರ ಫಸ್ಟ್‌ಪ್ಲೇಸ್‌ನಲ್ಲಿ ಬಂದವರಿಗೆ ಅವಾರ್ಡ್ ಕೊಡುತ್ತಿದ್ದರು. ಆ ಮೇಲೆ ನಿಲ್ಲಿಸುತ್ತಿದ್ದರು. ನಾನು ಬಂದ ಮೇಲೆ ಎಲ್ಲಾ ಆಟಗಾರರಿಗೂ ಸಹ ಫಸ್ಟ್ ಪ್ಲೇಸ್ ಸೆಕೆಂಡ್‌ಪ್ಲೇಸ್. ಥರ್ಡ್ ಪ್ಲೇಸ್ ಬಂದವರಿಗೆಲ್ಲಾ ಅವಾರ್ಡ್ ಕೊಡುವ ವ್ಯವಸ್ಥೆ ಮಾಡಿದ್ದೇನೆ. ಎಲ್ಲಾ ಆಟಗಾರರಿಗೂ ಕೂಡ ಒಂದು ಸಾವಿರ ರೂಪಾಯಿ ಕೊಡುವುದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇನೆ.

ಇನ್ನು ಡಾ॥ ಆಚಾರ್ಯರವರು ತುಳು ನಿಘಂಟಿನ ಬಗ್ಗೆ ಹೇಳಿದರು. ಶ್ರೀಮಾನ್ ವೀರಪ್ಪ ಮೊಯ್ಲಿರವರು ಇದಕ್ಕೆ ಇನ್ನೂ ದುಡ್ಡು ಕೊಟ್ಟಿಲ್ಲ ಎಂದು ಹೇಳಿದರು. ಇದರ ಬಗ್ಗೆ ನಾವು ಹೆಡ್ ಆಫ್ ಅಕೌಂಟ್ ತೆರೆದಿದ್ದೇವೆ. ಇದು ೮ ಲಕ್ಷ ರೂಪಾಯಿಗಳ ಒಂದು ಯೋಜನೆ. ಈಗ ಅದಕ್ಕೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಇನ್ನು ಉಳಿದುದನ್ನು ಆಮೇಲೆ ರಿಲೀಸ್ ಮಾಡುತ್ತೇವೆ.

ಶ್ರೀ ಆಚಾರ್ಯರವರು ಅಕಾಡೆಮಿಯ ವಿಷಯ ಹೇಳಿದ್ದಾರೆ. ಅದಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಇನ್ನು ವೇಲಾಪುರಿ ವೈಭವದ ಬಗ್ಗೆ ಅಲ್ಲಿ ಒಂದು ಲಲಿತ ಕಲಾ ವಿಶ್ವವಿದ್ಯಾನಿಲಯ ಮಾಡಬೇಕೆಂದು ಹೇಳಿದ್ದಾರೆ.

SRI M. VEERAPPA MOILY.—There is some controversy and dispute about its completion of 1000 years.

ಶ್ರೀ ಜೀವರಾಜ ಆಳ್ವ.—ತಮಗೆ ಹೇಳಬೇಕಾದರೆ ಶಾಂತಲಾ–ವಿಷ್ಣುವರ್ಧನರ ಕಾಲವೇ ೮೦೦ ವರ್ಷ ಹಿಂದಿನದು ಹಾಗಿದ್ದ ಮೇಲೆ ಇದಕ್ಕೆ ಒಂದು ಸಾವಿರ ವರ್ಷ ಆಗೇ ಇರುತ್ತದೆ. ಇದು ಬಹುಶಃ ೧೨ ನೇ ಶತಮಾನದ್ದು ಇರಬಹುದು. ಬೇಲೂರಿನಲ್ಲಿ ಈ ಒಂದು ಲಲಿತ ಕಲಾ ವಿಶ್ವವಿದ್ಯಾನಿಲಯ ಮಾಡಬೇಕಾದರೆ ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಅಗತ್ಯ. ಅಲ್ಲಿ ಒಂದು ಸ್ಕೂಲ್ ಆಫ್ ಸ್ಕಲ್ಪ್ಚರ್ ಮಾಡಬೇಕೆಂದು ನಾನು ಈಗಾಗಲೇ ಡೈರೆಕ್ಟರ್ ಕಮಲಾಪುರ್‌ರವರಿಗೆ ಹೇಳಿದ್ದೇನೆ. ಬೇಲೂರು ಶಿಲ್ಪಕಲೆಯ ತವರೂರು ಎನ್ನುವುದು ತಮಗೆ ಗೊತ್ತಿದೆ. ಅಲ್ಲಿ ಶಿಲ್ಪ ಕಲೆಯ ಪ್ರತಿಭಾವಂತರು ಇದ್ದರು. ಆದುದರಿಂದ ಬೇಲೂರಿನಲ್ಲಿ ಈ ಶಿಲ್ಪಕಲಾ ಶಾಲೆಯನ್ನು ಗುರುಕುಲ ಮಾದರಿಯಲ್ಲಿ ಬೆಳೆಸುವ ಮೂಲಕ „ವೇಲಾಪುರ ವೈಭವ" ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದನ್ನು ಇನ್ನು ೫ ವರ್ಷದೊಳಗೆ ಒಂದು ಪೂರ್ಣ ಮಟ್ಟದ ವಿಶ್ವವಿದ್ಯಾನಿಲಯವನ್ನಾಗಿ ಮಾಡಬೇಕೆನ್ನುವ ಒಂದು ಆಸೆ ಇದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಎಂ. ಮಹದೇವ್ ಅವರು ನಂಜನಗೂಡಿಗೆ ಒಂದು ಸ್ಟೇಡಿಯಂ, ರಂಗಮಂದಿರ, ಯುವಕ ಸಂಘ ಆಗಬೇಕು ಎಂದು ಹೇಳಿದರು. ಮತ್ತು ಇದು ರೂರಲ್ ಓರಿಯೆಂಟ್‌ಡ್‌ಗೆ ಆಗಬೇಕು ಅನ್ನುವ ಮಾತನ್ನೂ ಸಹ ಹೇಳಿದ್ದರು. ಅದರ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಇನ್ನು ಮಾನ್ಯ ದೊಡ್ಡ ಮೇಟಿಯವರು ಸಾಹಿತ್ಯ ಪರಿಷತ್ತಿನ ಬಗ್ಗೆ ಟೀಕೆ ಮಾಡಿದ್ದಾರೆ. ಈ ಬಗ್ಗೆ ಏನೋ ರಾಜಕೀಯ ಇದೆ, ಇದು ತನಿಖೆಯಾಗಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಅದರ ವಿವರಣೆಯನ್ನು ಕೇಳಿದ್ದಾರೆ. ಆ ವಿವರಗಳು ಸರ್ಕಾರಕ್ಕೆ ಬಂದ ಕೂಡಲೇ ಮಾರ್ಚಿ ತಿಂಗಳೊಳಗೆ ಆ ವರದಿಯನ್ನು ಈ ಸದನದ ಮುಂದೆ ಇಡುತ್ತೇನೆ. ನಂತರ ಆ ಸಂಸ್ಥೆಗೆ ನೀಡಬೇಕಾದ. ಹಣವನ್ನು ಪಾವತಿ ಮಾಡಲಾಗುವುದು.

ಇನ್ನು ದೇವನಹಳ್ಳಿ ಹನುಮಂತಾಚಾರ್ಯ ಏನು ಇದ್ದಾರೆ ಅವರು ಒಬ್ಬರು ಶ್ರೇಷ್ಠ ಶಿಲ್ಪಿಗಳು. ನಮ್ಮ ಕರ್ನಾಟಕಕ್ಕೆ ಒಳ್ಳೆಯ ಹೆಸರನ್ನು ತಂದುಕೊಟ್ಟಂಥಾ ವ್ಯಕ್ತಿ. ಹಾಗೆಯೇ ಶಿವಾರಪಟ್ಟಣ. ಕಾರ್ಕಳ ಇವೂ ಕೂಡ ಶಿಲ್ಪಕಲೆಗೆ ಹೆಸರುವಾಸಿಯಾದಂಥಾ ಸ್ಥಳಗಳು ಈ ದೇವನಹಳ್ಳಿ ಹನುಮಂತಾಚಾರ್ಯ ಅವರು ಸಂಗ್ರಹ ಮಾಡಿದಂಥಾ ಶಿಲ್ಪಿಗಳು ಏನು ಇವೆ ಅವುಗಳನ್ನು ಒಂದು ವಸ್ತು ಪ್ರದರ್ಶನದಲ್ಲಿ ಇಡಲು ಸೂಕ್ತ ಕಟ್ಟಡ ನಿರ್ಮಾಣಕ್ಕಾಗಿ ನನಗೆ ಎಲ್ಲಾದರೂ ಒಂದು ನಿವೇಶನ ನೀಡಿದರೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ನಾವು ಒಂದು ಸ್ಥಳವನ್ನು ನೀಡಿದ್ದೇವೆ. ಅದೂ ದೇವನಹಳ್ಳಿ ಮೇನ್ ರೋಡಿನಲ್ಲೇ ಇದೆ. ನಾವು ಅದನ್ನು ಸ್ವೀಕರಿಸಿ ಒಂದು ವಸ್ತು ಪ್ರದರ್ಶನದಲ್ಲಿ

ಇಡಲು ವ್ಯವಸ್ಥೆ ಮಾಡುತ್ತೇವೆ. ಇನ್ನು ೩-೪ ತಿಂಗಳಿನಲ್ಲಿ ದೇವನಹಳ್ಳಿಯಲ್ಲಿ ಒಂದು ಶಿಲ್ಪಕಲಾ ಮತ್ತು ವಸ್ತು ಸಂಗ್ರಹಾಲಯವನ್ನು ಪ್ರಾರಂಭ ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ,

ಇನ್ನು ನಮ್ಮ ಕರ್ನಾಟಕದಲ್ಲಿ ಹೆಸರುವಾಸಿಯಾಗಿದ್ದಂಥಾ ಬಿ. ಎಂ. ಶ್ರೀಕಂಠಯ್ಯನವರು ಏನು ಇದ್ದರು ಅವರ ಶತಮಾನೋತ್ಸವಕ್ಕಾಗಿ, ಬಿ. ಎಂ. ಶ್ರೀ ಪ್ರತಿಷ್ಠಾನಕ್ಕೆ ನಾವು ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆ. ಹಾಗೆಯೇ ಇವರ ಸ್ವಂತ ಊರಾದ ಬೆಳ್ಳೂರಿನಲ್ಲಿ ಇವರ ಬಗ್ಗೆ ಒಂದು ಸ್ಮಾರಕವನ್ನು ನಿರ್ಮಿಸಬೇಕು ಎನ್ನುವ ಸಲಹೆ ಕೊಟ್ಟಿದ್ದಾರೆ ಅದನ್ನೂ ಸಹ ಪರಿಶೀಲನೆ ಮಾಡುತ್ತೇವೆ

ಇನ್ನು ಗುಳೆದಗುಡ್ಡದ ಕಂದಗಲ್ ಹನುಮಂತರಾಯರು ಏನು ಇದ್ದರು ಅವರು ಒಬ್ಬರು ಶ್ರೇಷ್ಠ ಕಲಾಕಾರರಾಗಿದ್ದರು. ಅವರ ಒಂದು ನೆನಪಿಗಾಗಿ ಅಲ್ಲಿ ಒಂದು ರಂಗಮಂದಿರವನ್ನು ಕಟ್ಟಬೇಕೆಂದು ಇದ್ದೇವೆ.

ಇನ್ನು ನಂದಾ ಲೇಕ್ ಬಗ್ಗೆ ಹೇಳಿದರು. ಅದನ್ನೂ ಸಹ ಅಭಿವೃದ್ಧಿ ಮಾಡಬೇಕು ಅನ್ನುವ ಯೋಜನೆ ಇಟ್ಟುಕೊಂಡಿದ್ದೇವೆ. It is a comprehensive project that was visualised by our Hon. Leader of the opposition. ಇದು ಒಂದು ದೊಡ್ಡ ಪ್ರಾಜೆಕ್ಟು. ಇದಕ್ಕೆ ೩೦ ಲಕ್ಷ ರೂಪಾಯಿ ಬೇಕಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಇನ್ನು ಬೆಂಗಳೂರಿನಲ್ಲಿ ಬಹಳ ಹೆಸರುವಾಸಿಯಾದಂಥಾ ಹಾಗೂ ಶ್ರೇಷ್ಠ ನಾಟಕಕಾರರಾದ ಗುಬ್ಬಿ ವೀರಣ್ಣನವರು ಏನು ಇದ್ದರು ಅವರ ನೆನಪಿಗಾಗಿ ಬೆಂಗಳೂರು ಗಾಂಧಿನಗರದಲ್ಲಿರುವ ಅದರ ಜಾಗದಲ್ಲಿ ಒಂದು ರಂಗಮಂದಿರವನ್ನು ಕಟ್ಟಬೇಕೆನ್ನುವ ಪ್ರಯತ್ನ ಬಹಳ ದಿವಸದಿಂದಲೂ ನಡೆಯುತ್ತಾ ಇದೆ. ಅದರಲ್ಲಿ ಸ್ವಲ್ಪ ಮಟ್ಟಿಗೆ ವಿಫಲರಾಗಿದ್ದೇವೆ. ಅಲ್ಲಿ ಸುತ ಮುತ್ತ ಕೊಳಚೆ ಪ್ರದೇಶ ಏನು ಇತ್ತು ಅದನ್ನು ಮೊದಲು ನಿರ್ಮೂಲ ಮಾಡಿದೆವು. ನಂತರ ಮತ್ತೆ ಅದು ನಿರ್ಮಾಣವಾಯಿತು. ಅಲ್ಲೂ ಒಂದು ರಂಗಮಂದಿರವನ್ನು ನಾವು ಮಾಡುತ್ತೇವೆ ಒಂದೊಂದು ಸಲ ಸರ್ಕಾರದವರು ಈ ಬಗ್ಗೆ ಎಕ್ಸ್‌ಪರ್ಟ್ ಒಪಿನಿಯನ್ ಕೇಳುತ್ತಾರೆ. ಅವರ ಒಪಿನಿಯನ್ ಸರಿಯಾಗಿ ಬರುವುದಿಲ್ಲ. ಒಂದೊಂದು ಸಾರಿ ನನಗೂ ಸಹ ಅನಿಸುತ್ತದೆ ಇಂಥಾದ್ದನ್ನೆಲ್ಲಾ ಶಾಸನಸಭೆಗೆ ಬಿಟ್ಟು ಬಿಟ್ಟರೆ ಪರವಾಯಿಲ್ಲಾ ಎಂದು. ಹಾಗಾಗುವುದಿಲ್ಲ. ಒಂದೊಂದು ಸಾರಿ ಅವರ ಒಪಿನಿಯನ್ ಕೂಡ ಕೇಳಬೇಕಾಗಿ ಬರುತ್ತದೆ. ಇದರಿಂದ ನಿಧಾನವಾಗುತ್ತದೆ. ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಒಂದು ರಂಗಮಂದಿರವನ್ನು ಕಟ್ಟುತ್ತೇವೆ ಅದರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಸಂಶೋಧನಾ ಪೀಠವನ್ನೂ ಸಹ ಆರಂಭ ಮಾಡಬೇಕೆಂದು ಇದ್ದೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತಾವು ಈಗಾಗಲೇ ಹೇಳಿದ ಹಾಗೆ ಹನುಮಂತರಾಯರ ಹೆಸರಿನಲ್ಲಿ ಒಂದು ರಂಗಮಂದಿರವನ್ನು ಕಟ್ಟುವುದು ಬಹಳ ಸಂತೋಷ, ಆದರೆ ಕಲಾಕ್ಷೇತ್ರದಲ್ಲಿ ಚೆನ್ನಾಗಿ ಬಲ್ಲವರು ಯಾರಾದರೂ ಇದ್ದರೆ ಅವರು ಪಬ್ಲಿಕ್ ಆಗಿ ಕಟ್ಟಿದರೆ ಅವರಿಗೆ ಮ್ಯಾಚಿಂಗ್ ಗ್ರಾಂಟ್ ಕೊಡುವುದಕ್ಕೆ ಸಹಾಯ ಮಾಡುತ್ತೀರಾ ? ಹೇಗೆ ?

ಶ್ರೀ ಕೆ. ಚನ್ನಬಸವನಗೌಡ.—ಹಾಗೇ ಉತ್ತಂಗಿ, ಬಳ್ಳಾರಿ ಇಲ್ಲೂ ಸಹ ರಂಗಮಂದಿರವನ್ನು ಕಟ್ಟುವುದಕ್ಕೆ ಸಹಾಯ ಮಾಡುತ್ತೀರಾ ?

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ನಗರ ಅನ್ನುವುದು ಇತ್ತೀಚೆಗೆ ಬಹಳ ಬೆಳೆದಿರತಕ್ಕಂಥಾ ನಗರವಾಗಿದೆ. ಅಲ್ಲಿ ಯಾವ ಕ್ರೀಡಾಂಗಣವೂ ಇಲ್ಲ. ಕಲಾಭವನವೂ ಇಲ್ಲ. ೧೯೭೭ ರಲ್ಲಿ ಇಲ್ಲಿಗೊಂದು ಕಲಾಭವನ ಕಟ್ಟುತ್ತೇವೆ ಎಂದು ಹೇಳಿದ್ದರು. ಅದಕ್ಕಾಗಿ ಅಲ್ಲಿಯ ದಾನಿಯೊಬ್ಬರು ಒಂದು ಲಕ್ಷ ರೂಪಾಯಿಗಳನ್ನೂ ಸಹ ಕೊಟ್ಟಿದ್ದಾರೆ. ಆದರೆ ಅಲ್ಲಿಯ ನಗರಸಭೆಯ ಹಣದ ಕೊರತೆಯಿಂದ ಆ ಕಲಾಭವನ ಅರ್ಧಕ್ಕೆ ನಿಂತಿದೆ, ಈ ಕಟ್ಟಡವನ್ನು ಆದಷ್ಟು ಜಾಗ್ರತೆ ಪೂರೈಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ನಾನು ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ನಮ್ಮದು ಬಡ ಇಲಾಖೆ. ಆದರೂ ಸಹ ಒಳ್ಳೊಳ್ಳೆಯ ಕೆಲಸಗಳನ್ನು ಹಾಕಿಕೊಂಡು ಸಾಧನೆ ಮಾಡಿಕೊಂಡು ಬರಬೇಕೆ

ನ್ನುವ ಆಸೆ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಹೆಚ್ಚಿನ ಸಹಾಯ ಮಾಡಿದರೆ ಈ ಬಗ್ಗೆ ಹೆಚ್ಚಿನ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಒಂದು ಕ್ರೀಡಾಭವನವನ್ನು ಕಟ್ಟುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಅದು ಪೂರ್ಣವಾಗುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ ಎಂದು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ನಾನು ಮೊದಲೇ ಹೇಳಿದ ಹಾಗೆ ಮೈಸೂರು ಯೂನಿವರ್ಸಿಟಿಯಲ್ಲಿ ಗುಬ್ಬಿ ವೀರಣ್ಣನವರ ಒಂದು ಸಂಶೋಧನಾ ವಿಭಾಗವನ್ನೂ ಸಹ ಆರಂಭ ಮಾಡಬೇಕು ಎನ್ನುವ ಯೋಚನೆಯೂ ಇದೆ. ಈಗ ಒಟ್ಟು ೭ ಕ್ರೀಡಾಂಗಣಗಳ ಕೆಲಸ ಮುಗಿದಿದೆ, ಇನ್ನೂ ೧೨ ಪ್ಲೇ ಗ್ರೌಂಡ್ಸ್ ಕೆಲಸ ಮುಗಿಸಬೇಕಾಗಿದೆ. ಮತ್ತು ಮಂಗಳೂರು ವಿಶ್ವವಿದ್ಯಾನಿಲಯದಲ್ಲೂ ಸಹ ಒಂದು ತುಳು ಸಂಶೋಧನಾ ಪೀಠವನ್ನು ಆರಂಭ ಮಾಡಬೇಕು ಎನ್ನುವ ಯೋಚನೆ ಇದೆ. ನಾನು ಈಗಾಗಲೇ ಎಲ್ಲಾ ವಿಚಾರಗಳಿಗೂ ಉತ್ತರ ಕೊಟ್ಟಿದ್ದೇನೆ. ಕೊನೆಯದಾಗಿ ತಮಗೆ ಹೇಳಬೇಕಾದರೆ ೩ ವರ್ಷದ ಹಿಂದೆ ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಕೂಡ ಕ್ರೀಡಾ ಪರಿಷತ್ತು ಎಂಬುದು ಇರಲಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ತುಳು ಖಲಿಸ್ಥಾನ ಬೇರೆ, ತುಳುನಾಡು ಬೇರೆ. ಆದುದರಿಂದ ಈ ಪ್ರದೇಶದಲ್ಲಿ ತುಳುನಾಡು ಬಂತು ಎಂದರೆ, ತುಳು ಮಾತನಾಡುವವರೂ ಇಂಡಿಯಾ ದೇಶದ ಒಳಗಡೆ ಇದ್ದು, ಸಮಗ್ರತೆ ಕಾಪಾಡುತ್ತಾರೆಂದು ಹೇಳಿದರೆ ತಪ್ಪೇನೂ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಮಾನ್ಯ ಸೂರ್ಯನಾರಾಯಣರಾವ್ ಅವರು ಹೇಳಿದರು. ನಾವು ಇದನ್ನು ಮಾನ್ಯ ಮಂತ್ರಿಗಳಿಂದ ನಿರೀಕ್ಷೆ ಮಾಡುತ್ತೇವೆ, ಮಾನ್ಯ ಸೂರ್ಯನಾರಾಯಣರಾಯರಿಂದ ಅಲ್ಲ.

ಶ್ರೀ ಜೀವರಾಜ್ ಆಳ್ವ.—ಕ್ರೀಡಾಪರಿಷತ್ತನ್ನು ನಾವು ಮೂರು ವರ್ಷದ ನಂತರ ಆರಂಭ ಮಾಡಿದ್ದೇವೆ. ಈ ಕ್ರೀಡಾಪರಿಷತ್ತಿನ ಅಧ್ಯಕ್ಷರಾಗಿ, ನಮ್ಮ ಹೆಮ್ಮೆಯ ಸದಸ್ಯರಾದ, ಹಿರಿಯ ಸದಸ್ಯರಾದ, ಮತ್ತು ಕ್ರೀಡಾಭಿಮಾನಿಗಳಾದ ಶ್ರೀ ರಾಮದೇವ್ ಅವರನ್ನು ನೇಮಕ ಮಾಡಿದ್ದೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅಧ್ಯಕ್ಷರೇ, ರಾಮದೇವ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಆದರೆ ಅವರಿಗೆ ಆಫೀಸ್ ಇಲ್ಲ, ಸ್ಟಾಫ್ ಇಲ್ಲ, ಏನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆಫೀಸ್ ಇಲ್ಲ, ಜವಾನ ಇಲ್ಲ, ಒಂದು ಕಾರು ಕೊಟ್ಟುಬಿಟ್ಟು ಅದರೊಳಗಡೆ ಕುಳಿತುಕೊಳ್ಳಿ ಎಂದರೆ ಆಯಿತೇ?

ಶ್ರೀ ಮಲ್ಲಾರಿಗೌಡ ಶಂಕರಗೌಡ ಪಾಟೀಲ್.—ಸ್ಪೋರ್ಟ್ಸ್‌ಗೆ ದುಡ್ಡೇ ಇಲ್ಲ. ಇಷ್ಟೆಲ್ಲಾ ಕೊಟ್ಟು ದುಡ್ಡೇ ಇಲ್ಲದೇ ಹೋದರೆ ಅವರು ಏನು ಮಾಡುತ್ತಾರೆ?

ಶ್ರೀ ಜೀವರಾಜ್ ಆಳ್ವ.—ಸ್ವಾಮಿ ಈ ಸಾರಿ ಕ್ರೀಡಾ ಪ್ರೋತ್ಸಾಹಕ್ಕೆ ಸರಕಾರ ೬೫ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಕ್ರೀಡಾ ಪರಿಷತ್ತಿಗೆ ಒಂದು ಕೋಟಿ ರೂಪಾಯಿ ಬೇಡಿಕೆ ಇದೆ ಎಂದು ಶ್ರೀ ರಾಮದೇವ್ ಅವರು ಕೇಳಿದರು, ಅದನ್ನು ಆಮೇಲೆ ಬೇಕಾದರೆ ರಿ-ಅಪ್ರೋಪ್ರಿಯೇಟ್ ಮಾಡಲಿ ಎಂದು ಹೇಳಿದರು. ಅವರ ಬೇಡಿಕೆ ಒಳ್ಳೆಯ ಬೇಡಿಕೆ. ಇದನ್ನು ಸರಕಾರದ ಮುಂದೆ ಮಂಡಿಸೋಣ, ಮುಖ್ಯ ಮಂತ್ರಿಯವರನ್ನು ಒಪ್ಪಿಸೋಣ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಚಾರ್ಜ್ ವಹಿಸಿಕೊಳ್ಳಬೇಕೆಂದು ಅವರು ಹೋದರೆ, ಒಂದು ಆಫೀಸ್ ಇರಲಿಲ್ಲವಂತೆ, ಇವರೇ ಬೇಗ ತೆಗೆದು ಸೈನ್ ಮಾಡಿದರು ಎಂದು ಒಂದು ಟೀಕೆ ಇದೆ.

ಶ್ರೀ ಜೀವರಾಜ್ ಆಳ್ವ.—ಈ ಟೀಕೆ ಸರಿಯಲ್ಲ. ಹಿಂದಿನ ರಾತ್ರಿ ಆರ್ಡರ್ ಆಗಿತ್ತು. ಮಾನ್ಯ ರಾಮದೇವ್ ಅವರು ಅಲ್ಲಿರತಕ್ಕ ಅಧಿಕಾರಿಗಳಿಗೆ ತಿಳಿಸಿ ಹೋಗಲಿಲ್ಲ. ಕ್ರೀಡಾ ಪರಿಷತ್ತಿಗೆ ದೊಡ್ಡ ಆಫೀಸ್ ಇದೆ. ಮಾನ್ಯ ರಾಮದೇವ್ ಅವರು ಅಧ್ಯಕ್ಷರಾಗಿ ಹೋದಾಗ, ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಹೋಗಲಿಲ್ಲ. ನನ್ನ ಚೇಂಬರ್‌ಗಿಂತ ದೊಡ್ಡ ಚೇಂಬರ್ ಕ್ರೀಡಾ ಪರಿಷತ್ತಿನ ಚೇರ್ಮನ್‌ರಿಗಿದೆ. ಸುಸಜ್ಜಿತವಾಗಿದೆ ಚೆನ್ನಾಗಿದೆ. ಆದರೆ ಹಣದ ಬಗ್ಗೆ ಕೊರತೆ ಇದೆ. ಒಂದು ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾವು ಎಲ್ಲಾ ಸೇರಿ ರೆಕಮೆಂಡ್ ಮಾಡಿ, ಸರಕಾರದ ಮುಂದಿಡೋಣ, ಒಂದು ಕೋಟಿ

ರೂಪಾಯಿಗಳನ್ನು ಪೂರ್ತಿಯಾಗಿ ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿ, ಸಲಹೆಗಳನ್ನು ಕೊಟ್ಟ ಪ್ರತಿಯೊಬ್ಬ ಸದಸ್ಯರನ್ನೂ ವಂದಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟ ೫ ಕೋಟಿ ರೂಪಾಯಿಗಳ ಬೇಡಿಕೆಯನ್ನು ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಇಲ್ಲಿ ನಾನು ಆಗಲೇ ಓದಿದೆ. ಸ್ಪೋರ್ಟ್ಸ್ ಕೌನ್ಸಿಲ್ ಸದಸ್ಯರ ವಿರುದ್ಧ ಇಷ್ಟೊಂದು ಸೀರಿಯಸ್ ಆಗಿ ಅಲಿಗೇಷನ್ಸ್ ಬಂದಿರಬೇಕಾದರೆ ಅವರನ್ನು ಕೂಡಲೇ ತೆಗೆದುಹಾಕಿ.

ಶ್ರೀ ಜೀವರಾಜ್ ಆಳ್ವ.—ಸ್ವಾಮಿ, A person is not guilty unless proved, otherwise. ತಪ್ಪು ಪೂರ್ತಿ ರುಜುವಾತಾಗುವವರೆಗೆ ಅವರು ತಪ್ಪುಗಾರರಲ್ಲ. ಕ್ರೀಡಾ ಸಂಸ್ಥೆ ಪದಾಧಿಕಾರಿ ಎಂದು ಕೊಟ್ಟಿದ್ದಾರೆ. ಜಯರಾವ್ ಎಂದು ಆರೋಪ ಕೊಟ್ಟಿಲ್ಲ. ಕ್ರೀಡಾ ಸಂಸ್ಥೆ ಪದಾಧಿಕಾರಿ ಸ್ಥಾನದಲ್ಲಿರುವವರು ಎಂದು ಕೊಟ್ಟಿದ್ದಾರೆ. ಅವರಲ್ಲಿ ತಪ್ಪು ಕಂಡರೆ ಅವರೇ ರಾಜೀನಾಮೆ ಕೊಡುತ್ತಾರೆ. ಅದರಿಂದ ಏನೂ ತೊಂದರೆಯಾಗುವುದಿಲ್ಲ. ನನ್ನ ಬೇಡಿಕೆಗಳನ್ನು ಮಂಜೂರು ಮಾಡಬೇಕೆಂದು ಮತ್ತೊಮ್ಮೆ ನಾನು ಕೋರುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಜನವರಿ ೨೬ ರಿಂದ ಪ್ರಾರಂಭವಾಗುವಂತೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೀರಿ, ಅದರ ಬಗ್ಗೆ ಏನು ಮಾಡಿದ್ದೀರಿ?

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಗಲೇ ಹೇಳಿದ್ದಾರೆ, ತಾವು ತಡವಾಗಿ ಬಂದಿದ್ದೀರಿ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಯುವಜನ ಮತ್ತು ಕನ್ನಡ ಅಭಿವೃದ್ಧಿ ಸಚಿವರು ಸಾಕಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಮಾತನಾಡುವಾಗ ಅವಕಾಶ ಸಿಗಲಿಲ್ಲ.

ಸಭಾಧ್ಯಕ್ಷರು.—ಪೀಠಿಕೆ ಬೇಡ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಹಿಂದೆ ಏಷಿಯನ್ ಗೇಮ್ಸ್ ದೆಹಲಿಯಲ್ಲಿ ನಡೆದಂಥ ಸಂದರ್ಭದಲ್ಲಿ ಸರಕಾರ ಒಂದು ಘೋಷಣೆ ಮಾಡಿತ್ತು. ಮೊದಲ ಮೂರು ಸ್ಥಾನ ಪಡೆದ ರಾಜ್ಯದ ಕ್ರೀಡಾಪಟುಗಳಿಗೆ, ಒಂದು ಲಕ್ಷ, ೫೧ ಸಾವಿರ, ೨೫ ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಅದನ್ನು ಕೊಟ್ಟರೋ ಇಲ್ಲವೋ ಎಂಬ ವಿಚಾರವನ್ನು ಮಾನ್ಯ ಸಚಿವರು ತಿಳಿಸಬೇಕು. ಇವತ್ತು ಸಾಮಾನ್ಯ ಕ್ರೀಡಾಪಟುವಿನ ಅನಿಸಿಕೆ ಏನು ಇದೆ. ಎಂದರೆ ಸರಕಾರ ಕೇವಲ ಕ್ರಿಕೆಟ್ ಆಡತಕ್ಕವರಿಗೆ ಮಾತ್ರ ಮಹತ್ವ ಕೊಡುತ್ತಿದೆ, ಸಾಮಾನ್ಯ ಆಟಗಾರರಿಗೆ ಮಹತ್ವ ಕೊಡುತ್ತಿಲ್ಲ ಎಂದು ಇದು ಎಲ್ಲಾ ಕ್ರೀಡಾಪಟುಗಳಲ್ಲೂ ಇದೆ. ಈ ಒಂದು ಅಂತರವನ್ನು ಕಡಿಮೆ ಮಾಡಿ ಎಲ್ಲರನ್ನೂ ಸರಿ ಸಮಾನವಾಗಿ ನೋಡತಕ್ಕಂಥ ವ್ಯವಸ್ಥೆಯನ್ನು ಸಚಿವರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು, ಇಂತಹ ಅನಿಸಿಕೆಗಳನ್ನು ಹೋಗಲಾಡಿಸಿ ಎಂಬ ಮಾತನ್ನು ಹೇಳುತ್ತೇನೆ.

ವಿಶ್ವಕನ್ನಡ ಸಮ್ಮೇಳನದಲ್ಲಿ ಖ್ಯಾತಸಾಹಿತಿಗಳಿಗೆ ಪ್ರಾಧಾನ್ಯತೆ ಕೊಡಲಿಲ್ಲ, ಎನ್ನತಕ್ಕ ಮಾತು ಹಿಂದಿನಿಂದಲೂ ಇದೆ. ಅಂತಹ ಖ್ಯಾತ ಸಾಹಿತಿಗಳನ್ನು ಹುಡುಕಿ ಅವರಿಗೆ ಪ್ರಾತಿನಿಧ್ಯ ಕೊಡತಕ್ಕ ಏರ್ಪಾಡನ್ನು ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಶಾಸಕರ ವಾರ್ಷಿಕೋತ್ಸವ ಈ ಸಂದರ್ಭದಲ್ಲಿ ಕ್ರೀಡಗಳನ್ನು, ಮನರಂಜನಾ ಕಾರ್ಯಕ್ರಮಗಳನ್ನು ಮಾಡುತ್ತಿದ್ದುದನ್ನು ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೆವು. ಈ ಶಾಸನಸಭೆ ಅಸ್ತಿತ್ವಕ್ಕೆ ಬಂದು ಒಂದು ವರ್ಷದ ಮೇಲಾಯಿತು. ಮಾನ್ಯ ಯುವಜನ ಸಚಿವರು ಇದನ್ನು ಏತಕ್ಕೆ ಪ್ರಾರಂಭ ಮಾಡಲಿಲ್ಲ? ನಮ್ಮ ಶಾಸನಸಭಾ ಸದಸ್ಯರಲ್ಲಿ, ದೇಶದ ಉಳಿದ ಎಲ್ಲಾ ಶಾಸನಸಭೆಗಿಂತ ಹೆಚ್ಚು ಯುವಕರು ಇರತಕ್ಕಂಥ ವಿಚಾರ ಗೊತ್ತಿದ್ದರೂ, ಮಾನ್ಯ ಯುವಜನ ಸಚಿವರೂ ಸಹ ಯುವಕರಾಗಿದ್ದಾರೆ, ಆದರೂ ಸಹ ಅವರು ಏತಕ್ಕೆ ಇದನ್ನು ಪ್ರಾರಂಭ ಮಾಡಲಿಲ್ಲ ಎಂಬ ಮಾತನ್ನು ನಾವು ಇವತ್ತು ಕೇಳಬೇಕಾಗುತ್ತದೆ. ಅದನ್ನು ಮಾಡತಕ್ಕಂಥ ಏರ್ಪಾಡನ್ನು ಮಾಡಲಿ ಎಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯಕ್ಷಗಾನ ಕಲಾವಿದರಿಗೆ ಪ್ರೋತ್ಸಾಹ ಕೊಡಬೇಕು. ನಮ್ಮೆದುರಿಗೆ, ಕಣ್ಣಿಗೆ ಕಾಣತಕ್ಕಂಥ ನಗರದಲ್ಲಿರತಕ್ಕಂಥ ಜನರಿಗೆ ಮಾಸಾಶನ ಕೊಡತಕ್ಕಂಥ ಪ್ರವೃತ್ತಿ ಇವತ್ತು

ಸರ್ಕಾರದಲ್ಲಿ ಬೆಳೆದಿದೆ. ಅದು ಹೋಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕಲಾವಿದರಿಗೆ ಪ್ರೋತ್ಸಾಹ ಕೊಡಬೇಕು.

ಸಭಾಧ್ಯಕ್ಷರು.—ಮಲ್ಲಪ್ಪನವರೇ, ಇದು ಭಾಷಣ ಅಲ್ಲ, ಕೇವಲ ಕ್ಲಾರಿಫಿಕೇಷನ್ಸ್ ಇದ್ದರೆ ಮಾತ್ರ ಕೇಳಿ.

ಶ್ರೀ ಎಂ. ಮಲ್ಲಪ್ಪ.—ಜನವರಿ ೨೬ ರಂದು ಕೆಲವು ಕ್ರೀಡಾಪಟುಗಳಿಗೆ ಹಣವನ್ನು ಕೊಡುವ ಮೂಲಕ ಪ್ರೋತ್ಸಾಹಿಸಿದರು. ಆದರೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪಾಲುಗೊಂಡವರಿಗೆ ಗುರುತಿಸಲಿಲ್ಲ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದಂಥ ಕ್ರೀಡಾಪಟುಗಳಿಗೂ ಗೌರವಧನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶ್ಯಾಣಪ್ಪ.—ಮಾನ್ಯ ಮಂತ್ರಿಗಳ ಹತ್ತಿರ ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಅವರು ಮಾತನಾಡುವಾಗ, ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಒಂದೊಂದು ಸ್ಟೇಡಿಯಂ ಕೊಡುತ್ತೇವೆ. ತಾಲೂಕಿಗೂ ಒಂದೊಂದು ಸ್ಟೇಡಿಯಂ ಕೊಡುವ ಯೋಜನೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ನಮ್ಮ ಶಹಾಬಾದ್‌ನ ಜನಸಂಖ್ಯೆ ೫೦ ಸಾವಿರ ವಾದರೂ ಇದು ಒಂದು ಊರು. ತಾಲೂಕ್ ಸಹ ಅಲ್ಲ. ತಾಲೂಕ್ ಹೆಡ್‌ಕ್ವಾರ್ಟರ್ ಚಿತ್ತಾಪುರ ಇದ್ದು ಇದರ ಜನಸಂಖ್ಯೆ ಕೇವಲ ೨೦ ಸಾವಿರ. ಶಹಾಬಾದ್‌ನಲ್ಲಿ ಇರತಕ್ಕಂಥ ಪೊಟೆನ್‌ಷಿಯಾಲಿಟಿ ಚಿತ್ತಾಪುರದಲ್ಲಿ ಇಲ್ಲ. ಇದು ಇಂಡಸ್ಟ್ರಿಯಲ್ ಪ್ಲೇಸ್. ಇಲ್ಲಿರತಕ್ಕ ಶಾಲಾ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಏನಿದ್ದಾರೆ. ಅವರಿಗೆ, ಮತ್ತು ಅಲ್ಲಿರತಕ್ಕ ಮಕ್ಕಳಿಗೆ ಒಂದು ಸ್ಟೇಡಿಯಂ ಕಟ್ಟಿಕೊಡತಕ್ಕಂಥ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಅಕಾಡೆಮಿಗಳ ಬಗ್ಗೆ ಹೇಳಿದರು. ತಾವು ಅದರ ಬಗ್ಗೆ ಬರತಕ್ಕ ಟೀಕೆಗಳ ಬಗ್ಗೆ ಗಮನ ಕೊಡಬೇಕು. ನಾನು ವಿರೋಧ ಪಕ್ಷದ ನಾಯಕನಾಗಿ ವೇದಿಕೆ ಮೇಲೆ ಟೀಕೆಗಳನ್ನು ಮಾಡಿರಬಹುದು. ಆದರೆ ನಾನು ಇತ್ತೀಚೆಗೆ ಪ್ರವಾಸ ಹೋಗಿದ್ದೆ, ಹುಬ್ಬಳ್ಳಿ-ಧಾರವಾಡಕ್ಕೆ ಹೋದಾಗ, ಅಲ್ಲಿ ಸಾರ್ವತ್ರಿಕವಾಗಿ ಒಂದು ರೀತಿಯ ಅಸಮಾಧಾನ ಬಂದಿದೆ. ಅದನ್ನು ತಾವು ಗಮನಿಸಬೇಕು. ಇದನ್ನು ನಾನು ರಾಜಕೀಯ ನಾಯಕನಾಗಿ ಆರೋಪ ಮಾಡಿದೆ ಎಂದು ತಾವು ತಪ್ಪು ತಿಳಿದುಕೊಳ್ಳಬಾರದು. ಈ ಬಗ್ಗೆ ತಾವು ಆಲೋಚನೆ ಮಾಡಬೇಕು. ಹೆಚ್ಚಾಗಿ ಬೆಂಗಳೂರಿನವರಿಗೆ ಮಾಸಾಶನ ಕೊಟ್ಟಿದ್ದೀರಿ ಎಂದು ಇದೆ. ಇಲ್ಲಿರತಕ್ಕಂಥವರೆಲ್ಲರೂ ಹೊರಗಿನಿಂದ ಬೆಂಗಳೂರಿಗೆ ಬಂದವರೇ, ಬೆಂಗಳೂರು ಹೊಸದಾಗಿ ಬೆಳೆಯತಕ್ಕಂಥ ಕಾಲದಲ್ಲಿ ಹೊರಗಿನಿಂದ ಬಂದವರು. ಮೊದಲು ಇಲ್ಲಿ ಓಲ್ಡ್ ಮೈಸೂರ್ ಏರಿಯಾದವರು ಇದ್ದರು. ಓಲ್ಡ್ ಮೈಸೂರ್ ಏರಿಯಾದವರಿಗೆ ಕೊಟ್ಟಿದ್ದಾರೆ ಎಂಬ ಅಭಿಪ್ರಾಯ ಬಂದಿದೆ. ಇದರ ಬಗ್ಗೆ ಆಲೋಚನೆ ಮಾಡುವುದು ಒಳ್ಳೆಯದು. ಡಾ. ಮಲ್ಲಿಕಾರ್ಜುನ ಮನ್ಸೂರ್‌ರವರು, ಶೆಣೈರವರು ರಾಜೀನಾಮೆ ಕೊಟ್ಟಿದ್ದಾರೆ. ಏತಕ್ಕೆ ಈ ಪ್ರತಿಕ್ರಿಯೆ ಬಂದಿದೆ ಎಂಬುದನ್ನು ನಾವು ಆಲೋಚನೆ ಮಾಡುವುದು ಒಳ್ಳೆಯದು. ಎರಡನೆಯ ವಿಚಾರ ಸ್ಪೋರ್ಟ್ಸ್ ಬಗ್ಗೆ ಪ್ರತಿಯೊಂದು ಜಿಲ್ಲೆಗಳಿಗೆ ಸ್ಟೇಡಿಯಂ ಕೊಡಬೇಕೆಂದು ಅನೇಕರು ಹೇಳಿದ್ದಾರೆ. ತಾವು ಅಧಿಕಾರಕ್ಕೆ ಬಂದ ಮೇಲೆ ಲೋಕಲ್ ಆಗಿ ೧೦-೧೫ ಸ್ಟೇಡಿಯಂ ಕೆಲಸಗಳು ನಡೆಯುತ್ತಿವೆ. ತಾವು ಅಧಿಕಾರಕ್ಕೆ ಬಂದ ಮೇಲೆ ಯಾವ ಯಾವ ಸ್ಟೇಡಿಯಂಗೆ ಎಷ್ಟೆಷ್ಟು ಸಾರ್ವಜನಿಕ ಹಣ ವಸೂಲು ಮಾಡಿದ್ದೀರಿ, ಸರಕಾರ ಎಷ್ಟು ಹಣ ಕೊಟ್ಟಿದೆ, ಇದನ್ನು ಹೇಳಬೇಕು? ಈ ಸ್ಟೇಡಿಯಂ ಬಗೆಗಿನ ಬೇಡಿಕೆಗಳಿಗೆ, ವಿಶೇಷವಾಗಿ ಹಣ ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಯಾವ ಯಾವ ಸಂದರ್ಭದಲ್ಲಿ, ಯಾವ ಯಾವ ಸ್ಟೇಡಿಯಂ ಬಗ್ಗೆ ಪ್ರಪೋಸಲ್ಸ್ ಕಳುಹಿಸಿದ್ದೀರಿ ಎಂಬುದನ್ನು ಹೇಳಬೇಕು?

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಸಭಾಧ್ಯಕ್ಷರೇ, ಸೆಕೆಂಡರಿ ಸ್ಕೂಲ್ಸ್‌ನಲ್ಲಿ ಕ್ರಾಫ್ಟ್ಸ್ ಎಂದರೆ ಡ್ರಾಮಾಗಳನ್ನು ಮಾಡುವುದಕ್ಕೆ ಉಪಾಧ್ಯಾಯರಿದ್ದರು. ಈಗ ಅದು ನಿಂತು ಹೋಗಿದೆ. ಈಗ ಹಳ್ಳಿ ಕಡೆ ರಂಗಭೂಮಿಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ, ವಿದ್ಯಾರ್ಥಿಗಳಲ್ಲಿ ಈ ಡ್ರಮಾಟಿಸ್ಟ್ಸ್ ಯಾರಿದ್ದಾರೆ ಅವರನ್ನು ಡೆವಲಪ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಪ್ರತಿಯೊಂದು ಜಿಲ್ಲೆಯಲ್ಲೂ ರಂಗಭೂಮಿಗೆ ಪ್ರೋತ್ಸಾಹ ಕೊಡುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ವಿಧಾನಸಭೆ ನಡೆಯುವ ಕಾಲಕ್ಕೆ ಕ್ರಿಕೆಟ್ ಆಟ ನಿಲ್ಲಿಸಬೇಕು. ಅಥವಾ ಕ್ರಿಕೆಟ್ ಆಟ ನಡೆಯುವ ಕಾಲಕ್ಕೆ ವಿಧಾನಸಭೆ ನಿಲ್ಲಿಸಬೇಕು. ಇದು ಸೂಕ್ತ ಎಂದು ಕಾಣುತ್ತದೆ. ಕೆಲವು ಸಾರಿ ವಿಧಾನಸಭೆ ನಡೆಯುವಾಗ ನಮ್ಮ ಶಾಸಕರು, ಮಂತ್ರಿಗಳು ಮತ್ತು ಮುಖ್ಯ ಸ್ಥಾನದಲ್ಲಿರತಕ್ಕಂಥ ಅಧಿಕಾರಿಗಳು ಸ್ಟೇಡಿಯಂನಲ್ಲಿ ಕಾಣುತ್ತಿದ್ದರು. ಟಿ.ವಿ.ಯಲ್ಲಿ ತೋರಿಸಿದಾಗ ನಾವು ಅವರನ್ನು ನೋಡಿದ್ದೇವೆ. ಅದಕ್ಕೋಸ್ಕರ ಈ ಒಂದು ತಿದ್ದುಪಡಿ ಮಾಡಿದರೆ ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಸಂಗಮೇಶ್ವರ ಸರದಾರ್ (ರಾಯಚೂರು).—ಸ್ಕೌಟ್ ತರಬೇತಿ ಕೇಂದ್ರಗಳಿಗೆ ಸಂಬಂಧಪಟ್ಟಂತೆ ಆನ್ ಗೋಯಿಂಗ್ ಸ್ಕೀಮಿನಲ್ಲಿ ಹಣ ಒದಗಿಸಲಾಗಿದೆಯೇ ? ಪ್ರತಿಯೊಂದು ಶಾಲೆಗಳಲ್ಲಿಯೂ ಕಡ್ಡಾಯವಾಗಿ ಸ್ಕೌಟ್ ಯೂನಿಟ್ ಮಾಡಬೇಕೆಂದು ಹಿಂದಿನ ಸರ್ಕಾರದವರು ಮಾಡಿದ್ದರು. ತಾವು ಬಂದಮೇಲೆ ತರಬೇತಿ ಕೇಂದ್ರಗಳಿಗೆ ಹಣ ರಿಲೀಸ್ ಮಾಡಿರುವುದಿಲ್ಲ; ಕೂಡಲೇ ಹಣ ಬಿಡುಗಡೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಸ್ವಾಮಿ, ಮಾನ್ಯ ಮಂತ್ರಿಗಳು ಕನ್ನಡ ಬೆಳವಣಿಗೆಗಾಗಿ ಕೆಲಸ ಮಾಡಿದಂಥವರ ಹೆಸರಿನಲ್ಲಿ ಸ್ಮಾರಕಗಳನ್ನು ರಚನೆ ಮಾಡುವುದು; ಸಂಶೋಧನೆಗಳನ್ನು ಮಾಡುವುದನ್ನು ಮುಂದಿಟ್ಟಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಕರ್ನಾಟಕ ರಾಜ್ಯದಲ್ಲಿ ಕನ್ನಡ ಬೆಳವಣಿಗೆಗೋಸ್ಕರ ಯಾರು ಯಾರು ಕನ್ನಡ ಸಾಹಿತ್ಯ ರಚನೆ ಮಾಡುತ್ತಾರೆ; ಅವರು ರಚಿಸಿದಂಥ ಕಾವ್ಯಗಳನ್ನು ಪ್ರಕಟಣೆ ಮಾಡುವುದಕ್ಕೆ ಅನುಕೂಲ ಇಲ್ಲ. ಕೇರಳದಲ್ಲಿ ಸಹಕಾರ ಸಂಘದ ಮೂಲಕ ಸಾಹಿತ್ಯವನ್ನು ಹೊಸದಾಗಿ ಬರೆಯುವುದಕ್ಕೆ ಪ್ರಾರಂಭ ಮಾಡಿದವರಿಗೆ ಸಾಲ ಕೊಟ್ಟು; ಪ್ರಕಟಣೆಗಳನ್ನು ಮಾಡಿ; ಸಣ್ಣಪುಟ್ಟ ಬರಹಗಾರರು ಮೇಲೆ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಂಥ ಒಂದು ಅನುಕೂಲವನ್ನು ಇಲ್ಲೂ ಕೂಡ ಮಾಡಿಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಹೋದ ವರ್ಷ ಮಾಲೂರಿಗೆ ಬಂದಾಗ, ಬಯಲು ರಂಗ ಮಂದಿರ ಕಟ್ಟುತ್ತೇವೆಂಬ ಘೋಷಣೆ ಮಾಡಿದರು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಶಿವಾರ ಪಟ್ಟಣದಲ್ಲಿ ಶಿಲ್ಪಿಗಳು ಇದ್ದಾರೆ. ಈ ಒಂದು ಕಲೆಯನ್ನು ಉಳಿಸಿ, ಕಷ್ಟದಲ್ಲಿರುವಂಥ ಶಿಲ್ಪಿಗಳಿಗೆ ಮಾಸಾಶನ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬದಾಮಿ).—೧೯೭೫ರಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಸಂಸ್ಥೆಯಿಂದ ೨೫ ಲಕ್ಷ ರೂಪಾಯಿ ಮಂಜೂರಾಗಿತ್ತು. ಅದರಲ್ಲಿ ೭೭ನೇ ಇಸವಿಯವರೆಗೂ ಒಂದು ಪೈಸೆಯನ್ನು ಕೂಡ ಖರ್ಚು ಮಾಡಿಲ್ಲ; ಅದನ್ನು ಕಲ್ಕತ್ತಾಕ್ಕೆ ವರ್ಗ ಮಾಡುವಂಥ ಯೋಚನೆ ಇತ್ತು. ೮೪ನೇ ಇಸವಿ ಬಂದರೂ ಇನ್ನು ಕೆಲಸ ಪ್ರಾರಂಭ ಮಾಡಿಲ್ಲ. ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಕ್ರಮ ತೆಗೆದುಕೊಂಡು ತನಿಖೆ ಮಾಡಿಸುತ್ತೀರಾ? ಅದೇರೀತಿ ೧೯೭೫ರಲ್ಲಿ ೧.೨೦ ಲಕ್ಷ ರೂಪಾಯಿಗಳನ್ನು ಕುಸ್ತಿ ಆಡುವವರಿಗೆ ಬಿಡುಗಡೆ ಮಾಡಿದ್ದರೂ, ಮೂರು ಜನ ಕುಸ್ತಿ ಪಟುಗಳಿಗೆ ಮಂಜೂರು ಮಾಡಿದ್ದರು; ಅದು ಕೂಡ ಹಾಗೆ ಉಳಿದಿದೆ; ಈ ಎರಡು ವಿಷಯಗಳ ಬಗ್ಗೆ ವಿಚಾರಣೆ ಮಾಡುತ್ತೀರಾ ?

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಕ್ರೀಡಾ ಪರಿಷತ್ತಿಗೆ ೨೦ ಲಕ್ಷ ಇಟ್ಟಿದ್ದಾರೆ. ಅದು ಸಾಕಾಗುವುದಿಲ್ಲ; ಅದನ್ನು ಒಂದುಕೋಟಿಗೆ ಜಾಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ಅಂತರಾಷ್ಟ್ರೀಯ ಯುವಕರ ವರ್ಷವೆಂದು ಕರೆಯುವ ಈ ವರ್ಷದಲ್ಲಿ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಇದಕ್ಕಾಗಿ ಎಷ್ಟು ಹಣ ಇಟ್ಟಿದ್ದೀರಿ ?

ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಕರ್ನಾಟಕ ಕ್ರೀಡಾ ಪರಿಷತ್ತಿನಲ್ಲಿ ೩೧ ಜನರಿದ್ದು; ಸುಮಾರು ೨೯ ಜನ ಮೈಸೂರಿನವರೇ ಇದ್ದಾರೆ. ಬಿಜಾಪುರ ಜಿಲ್ಲೆ ಜಮಖಂಡಿ ತಾಲ್ಲೂಕು ಸಾಹಿತ್ಯ ಮತ್ತು ಕುಸ್ತಿಯಲ್ಲಿ ಇಡೀ ಕರ್ನಾಟಕಕ್ಕೆ ಮೊದಲನೇ ಸ್ಥಾನ ಪಡೆದುಕೊಂಡು ಬಂದಿದೆ. ಮೊದಲನೇ ಸ್ಥಾನ ಪಡೆದಂಥ ತಾಲ್ಲೂಕಿಗೆ ಪ್ರಾಶಸ್ತ್ಯ ಕೊಡುತ್ತೀರಾ ? ಕುಸ್ತಿಪಟುಗಳಿಗೆ ಬಹುಮಾನ ಕೊಡುವಾಗ ಮತ್ತು ಮಾಸಾಶನ ಕೊಡುವಾಗ ಬರೀ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ.

ಕಾಲೇಜಿಗೆ ಹೋಗದೇ ಇದ್ದಂಥ ಬಡ ಕುಸ್ತಿಪಟುಗಳಿಗೂ ಕೂಡ ಮಾಸಾಶನ ಕೊಡುವಂಥ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಭಾರತ ಸೇವಾದಳಕ್ಕೆ ೫ ಲಕ್ಷ ಕೊಟ್ಟಿದ್ದೀರಿ ; ಇದು ಯಾವುದಕ್ಕೂ ಸಾಕಾಗುವುದಿಲ್ಲ. ಒಂದು ಕಾಲದಲ್ಲಿ ಮಹತ್ತರ ಸೇವೆಯನ್ನು ಮಾಡಿಕೊಂಡು ಬಂದಿದೆ. ಗಾಂಧೀಜಿಯವರ ತತ್ವಕ್ಕನುಸಾರವಾಗಿ ಸಾಮಾಜಿಕ ಸೇವೆಗಳನ್ನು ಮಾಡಿಕೊಂಡು ಬರುವಂಥ ಇಂಥ ಸಂಸ್ಥೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಿ ; ಯುವಶಕ್ತಿ ಮುಂದೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಜಿ. ಸತ್ಯನಾರಾಯಣ (ನೆಲಮಂಗಲ).– ಹರಿದಾಸರ ಪರಂಪರೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಕೀರ್ತನ ಕಾಲೇಜನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಿದ್ದೀರಿ. ಭದ್ರಗಿರಿ ಕೇಶವ ದಾಸರು ಕೀರ್ತನೆ ಕಾಲೇಜು ಪ್ರಾರಂಭಮಾಡಿ ಕೀರ್ತನೆಗಳನ್ನು ಪ್ರಚಾರ ಮಾಡುವುದಕ್ಕೆ ಪ್ರೋತ್ಸಾಹ ಕೊಡುತ್ತೀರಾ ? ತಾವು ನೆಲಮಂಗಲಕ್ಕೆ ಬಂದಿದ್ದಾಗ ಬಯಲು ರಂಗಮಂದಿರ ಕಟ್ಟಿಸಿ ಕೊಡುತ್ತೇವೆಂದು ಹೇಳಿದ್ದಿರಿ ; ಈ ವರ್ಷದಲ್ಲಿಯೇ ಪ್ರಾರಂಭ ಮಾಡುವುದಕ್ಕೆ ಸಹಾಯ ಮಾಡುತ್ತೀರಾ ?

ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ ರಾಜ ಮಹಾರಾಜರ ಕಾಲದಲ್ಲಿ ಕುಸ್ತಿಪಟುಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಗರಡಿ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದರು. ಇವತ್ತು ಗರಡಿ ಮನೆಗಳೆಲ್ಲಾ ನಶಿಸಿ ಹೋಗುತ್ತಿವೆ ಇವತ್ತು ಗರಡಿ ಮನೆಗಳನ್ನು ಕಟ್ಟಿಸಿ ; ಕುಸ್ತಿಯಂಥ ಕ್ರೀಡೆಗಳಿಗೆ ಪ್ರೋತ್ಸಾಹ ಕೊಡುತ್ತೀರಾ ?

ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).–ಬೆಂಗಳೂರು ನಗರದಲ್ಲಿ ಫುಟ್‌ಬಾಲ್ ಸ್ಟೇಡಿಯಂ ನಿರ್ಮಾಣದಲ್ಲಿ ಅವ್ಯವಹಾರ ನಡೆದಿದ್ದು ; ಇದರ ಬಗ್ಗೆ ತನಿಖೆ ಮಾಡಿಸುತ್ತೀರಾ ?

ಶ್ರೀ ಪಂಪಾಪತಿ (ದಾವಣಗೆರೆ).—ದಾವಣಗೆರೆಯಲ್ಲಿ ಕಲಾಭವನ ಅರ್ಧ ಆಗಿದೆ. ದಾನಿಗಳೂ ಕೂಡ ಸಹಾಯ ಮಾಡಿದ್ದಾರೆ. ದಯವಿಟ್ಟು ೫ ಲಕ್ಷ ರೂಪಾಯಿ ಸಹಾಯಮಾಡಿ ಕಲಾಭವನವನ್ನು ಮುಗಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಶಿಕಾರಿಪುರ ತಾಲ್ಲೂಕಿನಲ್ಲಿ ಒಂದು ಬಯಲು ರಂಗಮಂದಿರವನ್ನು ಕಟ್ಟಲು ಸಾರ್ವಜನಿಕರಿಂದ ೫೦,೦೦೦ ಸಂಗ್ರಹ ಮಾಡುತ್ತೇವೆ ; ಸರ್ಕಾರದಿಂದ ಹಣ ಮಂಜೂರು ಮಾಡಿಸುವ ಭರವಸೆ ಕೊಡುತ್ತೀರಾ ?

ಶ್ರೀ ಜೀವರಾಜ್ ಆಳ್ವ.—ಸ್ವಾಮಿ, ಅನೇಕ ಸದಸ್ಯರುಗಳು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಮಲ್ಲಪ್ಪನವರು ಕರ್ನಾಟಕದ ಅತ್ಯುತ್ತಮ ಆಟಗಾರರಿಗೆ ಬಹುಮಾನದ ಹಣ ಕೊಟ್ಟಿರುವ ಬಗ್ಗೆ ಕೇಳಿದ್ದಾರೆ. ಮಾಚಯ್ಯನವರಿಗೆ ಬಾಕ್ಸಿಂಗ್‌ನಲ್ಲಿ ಉತ್ತಮ ಸ್ಥಾನ ಪಡೆದಿದ್ದಕ್ಕಾಗಿ ೧೦,೦೦೦ ರೂಪಾಯಿ ಕೊಡಲಾಗಿದೆ. ಅಥ್ಲೆಟಿಕ್‌ನಲ್ಲಿ ಉತ್ತಮ ಆಟಗಾರರಾದ ಸೀತಾರಾಮುರವರಿಗೆ ೧೦,೦೦೦ ರೂಪಾಯಿ ಕೊಡಲಾಗಿದೆ. ಮತ್ತೆ ಸೂರ್ಯನಾರಾಯಣರವರು ಶಾಲೆಗಳಲ್ಲಿ ಕ್ರಾಪ್ಸ್ ಸಬ್ಜೆಕ್ಟ್ ತೆಗೆದುಕೊಳ್ಳುವಂಥ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಇನ್ನು ಫುಟ್‌ಬಾಲ್ ಸ್ಟೇಡಿಯಂ ವಿಚಾರದಲ್ಲಿ ಹೇಳುವುದಾದರೆ ; ಫುಟ್‌ಬಾಲ್ ಅಸೋಸಿಯೇಷನ್‌ಗೆ ಸೇರಿದ ಪಕ್ಕದ ಜಾಗವನ್ನು ಸಬ್ ಲೀಸ್‌ಗೆ ಕೊಟ್ಟರೆ, ಸುಮಾರು ಒಂದು ಕೋಟಿ ರೂಪಾಯಿ ಬರುತ್ತದೆ ; ಅದರಿಂದ ಪ್ರಥಮ ಹಂತದ ಕಾರ್ಯವನ್ನು ಮುಗಿಸುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಮಾನ್ಯ ನಗರಾಭಿವೃದ್ಧಿ ಮಂತ್ರಿಯವರೂ ಮತ್ತು ಮುಖ್ಯಮಂತ್ರಿಯವರೂ ಒಪ್ಪುತ್ತಾರೆ. ಒಂದು ಕೋಟಿ ರೂಪಾಯಿ ಬಂದರೇ ಫುಟ್‌ಬಾಲ್ ಸ್ಟೇಡಿಯಂ ಈ ವರ್ಷವೇ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ.

ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಅಕಾಡಮಿಗಳ ಬಗ್ಗೆ ಮಾತನಾಡುತ್ತಾ ಅದರ ಬಗ್ಗೆ ಸರಿಯಾದ ಉತ್ತರ ಸರ್ಕಾರದಿಂದ ಬರಲಿಲ್ಲ, ಅವುಗಳ ಬಗ್ಗೆ ಪರಿಶೀಲನೆ ಮಾಡಿ ಎಂದು ಹೇಳಿದರು. ನಾನು ಅದರ ಬಗ್ಗೆ ಇಷ್ಟು ಮಾತ್ರ ಹೇಳಬಲ್ಲೆ, ಕಾರಣಾಂತರಗಳಿಂದ ಇಂಬ್ಯಾಲೆನ್ಸ್ ಆಗಿದೆ ಅದನ್ನು ಸರಿಪಡಿಸಲಿಕ್ಕೆ ಪರಿಶೀಲನೆ ಮಾಡುತ್ತೇನೆಂದು ಹೇಳಬಯಸುತ್ತೇನೆ. ಆಮೇಲೆ

ಶಹಬಾದ್ ಕ್ರೀಡಾಂಗಣದ ಬಗ್ಗೆ ಹೇಳಿದ್ದಾರೆ ಎಲ್ಲಾ ತಾಲ್ಲೂಕ್ ಕೇಂದ್ರಗಳಲ್ಲೂ ಇದು ಆಗಬೇಕೆಂದು ನಮ್ಮ ಪಾಲಿಸಿ ಇದೆ. ಇನ್ನು ಡಾ. ಸಂಗಮೇಶ್ವರ್‌ರವರು ಸ್ಕೌಟ್‌ನಲ್ಲಿ on-going schemesಗೆ grants ಕೊಡಲಿಲ್ಲ ಅದನ್ನು ತಡೆಹಿಡಿದಿದ್ದೀರಿ ಎಂದು ಹೇಳಿದರು. ಅವರು ಸ್ಕೌಟ್ ಮೂವ್‌ಮೆಂಟ್ ಬಗ್ಗೆ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ ಈ ಸಂಸ್ಥೆಗೆ ಹಣವನ್ನು ಕೊಡುವ ಬಗ್ಗೆ ಎ.ಜಿ.ಯವರಿಂದ ಅಬ್ಜೆಕ್ಷನ್ ಬಂದಿತ್ತು, ಅದು ಪೂರ್ತಿ ಆದ ತಕ್ಷಣವೇ ಹಣವನ್ನು ಪೂರ್ತಿಯಾಗಿ ಕೊಡುವಂಥಾ ವ್ಯವಸ್ಥೆ ಮಾಡುತ್ತೇವೆ. ಇನ್ನು ಶ್ರೀ ವೈ.ಕೆ. ರಾಮಯ್ಯನವರು ಸಣ್ಣ ಸಣ್ಣ ಬರಹಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ, ಅವರ ಸಲಹೆಯನ್ನು ಕೂಡ ಒಪ್ಪುತ್ತೇನೆ. ಇನ್ನು ಶ್ರೀ ನಾಗರಾಜ್‌ರವರು ಮಾಲೂರಿನಲ್ಲಿ ಬಯಲು ರಂಗಮಂದಿರದ ಬಗ್ಗೆ ಹೇಳಿದ್ದಾರೆ ನಮಗೆ ಹಣ ಸಿಕ್ಕರೆ ಖಂಡಿತವಾಗಿಯೂ ಅವರಿಗೂ ಸಹ ಒಂದು ರಂಗ ಮಂದಿರವನ್ನು ಮಾಡಿಸಿಕೊಡುತ್ತೇವೆ. ನಮಗೆ ಹೆಚ್ಚಿನ ಹಣವನ್ನು ದೊರಕಿಸಿ ಕೊಟ್ಟರೆ ಎಲ್ಲಾ ಕಡೆಗಳಲ್ಲೂ ಕ್ರೀಡಾಂಗಣ ಮತ್ತು ರಂಗಮಂದಿರಗಳನ್ನು ಕಟ್ಟಿಸುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಶಿವಾರಪಟ್ಟಣದ ಬಗ್ಗೆ ಕೆಲವು ಸದಸ್ಯರುಗಳು ಹೇಳಿದ್ದಾರೆ. ಆದರೆ ಮೊದಲು ದೇವನ ಹಳ್ಳಿಯದು ಮಾಡಿ ಆ ನಂತರ ಬೇಲೂರು, ಶಿವಾರ ಪಟ್ಟಣದು ತೆಗೆದುಕೊಳ್ಳಬೇಕೆಂದು ಇದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಈ ಕರಕುಶಲ ಶಿಲ್ಪಗಾರರು ಏನಿದ್ದಾರೆ ಅವರಲ್ಲಿ ವಯಸ್ಸಾಗಿ ವೃದ್ಧರಾಗಿರತಕ್ಕವರು ಬಹಳ ಕಷ್ಟದ ಜೀವನದಲ್ಲಿದ್ದಾರೆ ಅಂಥವರಿಗೂ ಮಾಸಾಶನ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಡಾ. ಜೀವರಾಜ್ ಆಳ್ವ.— ಅಂಥವರಿಗೂ ಮಾಸಾಶನ ಕೊಡತಕ್ಕದರ ಬಗ್ಗೆ ವ್ಯವಸ್ಥೆ ಮಾಡೋಣ. ಈ ವರ್ಷ ಕೆಲವರಿಗೆ ಮಾಸಾಶನ ಕೊಟ್ಟಿದ್ದೇವೆ. ಇನ್ನು ಕೆಲವರ ಹೆಸರುಗಳು ಇದ್ದರೆ ಕಳುಹಿಸಿ ಕೊಡಿ ಅದನ್ನು ಪರಿಶೀಲನೆ ಮಾಡುತ್ತೇನೆ. ಇನ್ನು ಶ್ರೀ ಚಿಮ್ಮನ ಕಟ್ಟಿಯವರು ೧೯೭೯ರಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ ಎಂದು ಹೇಳಿದರು, ಅವರು ಹೇಳಿದ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಚಾರ ನನ್ನ ಹತ್ತಿರವಿಲ್ಲ. ಆ ಸಂಸ್ಥೆಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದರೂ ಸಹ ಅವು ಬೆಂಗಳೂರಿನಲ್ಲಿಯೇ ಇವೆ, ಬೆಂಗಳೂರು ಬಿಟ್ಟು ಹೋಗುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಶ್ರೀ ಪಿ. ರಾಮದೇವ್‌ರವರು "ಅಂತರ್‌ರಾಷ್ಟ್ರೀಯ ಯುವಕರ ವರ್ಷ"ದಲ್ಲಿ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂದು ಕೇಳಿದ್ದಾರೆ. ಜಾಗತಿಕ ಸಂಸ್ಥೆಗಳ ಒಂದು ಕಾರ್ಯಕ್ರಮವನ್ನು ಯು.ಎನ್.ಒ.ದವರು ನಡೆಸುತ್ತಿದ್ದಾರೆ. ನಾನು ಅಲ್ಲಿಗೆ ಹೋಗಬೇಕಾಗಿತ್ತು ಆದರೆ ಕಾರಣಾಂತರಗಳಿಂದ ಮತ್ತು ಇಲ್ಲಿ ವಿಧಾನ ಸಭೆ ನಡೆಯುತ್ತಿರುವುದರಿಂದ ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ. ಆದುದರಿಂದ ಅಂತರ್‌ರಾಷ್ಟ್ರೀಯ ಯುವಕರ ವರ್ಷದಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದಕ್ಕೆ ಹೆಚ್ಚಿಗೆ ಹಣವನ್ನು ಪಡೆದುಕೊಂಡು ಈ ಕೆಲಸ ಮಾಡೋಣವೆಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಇನ್ನು ಅಕಾಡಮಿಗಳಲ್ಲಿ ಬೇರೆ ಬೇರೆ ಭಾಗದ ಜಿಲ್ಲೆಯವರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲವೆಂದು ಹೇಳಿದ್ದಾರೆ ಆದುದರಿಂದ ಅಂಥವರಿಗೂ ಸಹ ಕೋ ಆಪ್ಷನ್ ಮಾಡುವ ಮೂಲಕ ಅವಕಾಶವನ್ನು ಕಲ್ಪಿಸಿ ಕೊಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಇನ್ನು ಸ್ಪೋರ್ಟ್ಸ್ ಕೌನ್ಸಿಲ್ ಬಗ್ಗೆ ೧೦೦ ಕೋಟಿ ರೂ. ಗಳನ್ನು ಕೊಡಬೇಕೆಂದು ಸರ್ಕಾರದವರು ನಾನು ಮತ್ತು ನೀವು ಎಲ್ಲರೂ ಸೇರಿ ಒಟ್ಟಿಗೆ ಕೇಳೋಣ. ಇನ್ನು ಸೇವಾದಳಕ್ಕೆ ಕೊಟ್ಟಿರತಕ್ಕ ಹಣ ಸಾಲದು ಎಂದು ಹೇಳಿದ್ದಾರೆ ಇದೇ ರೀತಿ ಇನ್ನು ಕೆಲವು ಸಂಸ್ಥೆಗಳಿಂದ ಕಂಪ್ಲೇಂಟ್ ಬಂದಿದೆ. ಆದುದರಿಂದ ಇದಕ್ಕೂ ಸಹ ಹೆಚ್ಚಿಗೆ ಹಣವನ್ನು ಒದಗಿಸುವುದಕ್ಕೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಇನ್ನು ಶ್ರೀ ಸತ್ಯನಾರಾಯಣ ರವರು ಕೀರ್ತನಕಾರರಿಗೆ ಏನೂ ಮಾಡಿಲ್ಲವೆಂದು ಹೇಳಿದರು, ಮತ್ತು ಭದ್ರಗಿರಿ ಅಚ್ಯುತ್ ದಾಸ್ ಮತ್ತು ಕೇಶವ ದಾಸರು ಒಂದು ಕೀರ್ತನಾ ಕಾಲೇಜ್‌ನ್ನು ಮಾಡಲು ಮುಂದೆ ಬಂದಿರುವುದರಿಂದ ಅದಕ್ಕೆ ತಾವು ಸಹಾಯ ನೀಡುತ್ತೀರಾ ಎಂಬುದಾಗಿ ಸಲಹೆ ಮಾಡಿದ್ದಾರೆ. ಆ ಸಲಹೆಯನ್ನು ಸಹ ಸರ್ಕಾರ ಗಮನದಲ್ಲಿಟ್ಟು ಕೊಳ್ಳಲಾಗುತ್ತದೆ.

ಇನ್ನು ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟು ಕೊಂಡು ಮಾಡಲಾಗುವುದು. ಮತ್ತು ಇದಕ್ಕಾಗಿ ಹೆಚ್ಚಿಗೆ ಹಣವನ್ನು ಒದಗಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಸಹ ಮನವಿ ಮಾಡಿಕೊಳ್ಳುತ್ತೇನೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Demand No. 25

Tourism, Information And Publicity

Mr. Speaker.—Reply by the Hon'ble Minister for Information.

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಮಾನ್ಯ ಸಭಾಧ್ಯಕ್ಷರೇ, ನನ್ನ ಬೇಡಿಕೆಗಳ ಮೇಲೆ ಮೊದಲು ವಿರೋಧ ಪಕ್ಷದ ನಾಯಕರು ಭಾಷಣವನ್ನು ಪ್ರಾರಂಭ ಮಾಡಿದ್ದಾರೆ ಇದು ನನಗೆ ನಿಜಕ್ಕೂ ಸಂತೋಷದ ಸಂಗತಿ.

(ವೈಸ್ ಛೇರ್ಮನ್ ಶ್ರೀ ಪಿ. ರಾಮದೇವ್ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ವರ್ಷದಲ್ಲಿ ನಮ್ಮ ವಾರ್ತಾ ಇಲಾಖೆಯಲ್ಲಿ ಬಹಳಷ್ಟು ಮಟ್ಟಿಗೆ ಸಾಧನೆಗಳನ್ನು ಮಾಡಿದ್ದೇವೆ ಮೊದಲನೆಯದಾಗಿ ಅಧಿಕಾರ ಸ್ವಲ್ಪ ವಿಕೇಂದ್ರೀಕರಣವಾಗಬೇಕು ಎನ್ನುವ ಮೊದಲು ಹೆಜ್ಜೆ ಇಟ್ಟು ಅದಕ್ಕಾಗಿ ಎರಡು ಡಿವಿಜನ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಒಂದು ಬೆಳಗಾಂ ಡಿವಿಜನ್ ಮತ್ತೊಂದು ಮೈಸೂರು ಡಿವಿಜನ್. ಅಲ್ಲಿಗೆ ಇಬ್ಬರು ಜಾಯಿಂಟ್ ಡೈರೆಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ. ಅವರು ಯಾವುದೇ ವಿಷಯವನ್ನು ಪತ್ರಿಕೆಗಳಿಗೆ ಕೊಡುವುದಾಗಲೀ, ಅಥವಾ ಇನ್ನು ಯಾವುದೇ ಆಫೀಸಿಗೆ ಸಂಬಂಧಪಟ್ಟ ವಿಷಯಗಳಬಗ್ಗೆ ಅವರು ಬೆಂಗಳೂರಿನವರೆಗೂ ಬರುವ ಹಾಗಿಲ್ಲ. ಅಲ್ಲಿ ಅವರೇ ಚರ್ಚೆ ಮಾಡಿ, ತನ್ಮೂಲಕ ಅವರ ಅಧಿಕಾರವನ್ನು ಉಪಯೋಗಿಸಿ ಆ ಕೆಲಸಗಳನ್ನು ನಿಭಾಯಿಸುವುದಕ್ಕೆ ಅವಕಾಶವಾಗಲೀ ಎಂದು ಮಾಡಿದ್ದೇವೆ. ಅದಕ್ಕೋಸ್ಕರವಾಗಿ ಎರಡು ವಿಭಾಗಗಳನ್ನು ಮಾಡಿ ಇಬ್ಬರು ಅಧಿಕಾರಿಗಳಿಗೆ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ತಮಗೆ ಹೇಳಬೇಕೆಂದರೆ ಹಿಂದೆ, ಶ್ರೀ ರಾಮಕೃಷ್ಣ ಹೆಗಡೆಯವರು ವಾರ್ತಾ ಇಲಾಖೆಯ ಮಂತ್ರಿಗಳಾಗಿದ್ದು, ಶ್ರೀ ದೇವರಾಜ್ ಅರಸ್‌ರವರು ವಾರ್ತಾ ಇಲಾಖೆಯ ಮಂತ್ರಿಗಳಾಗಿದ್ದರು ಶ್ರೀ ಮಾನ್ ಗುಂಡೂರಾಯರು ಸ್ವಲ್ಪ ದಿವಸ ವಾರ್ತಾ ಇಲಾಖೆಯ ಮಂತ್ರಿಗಳಾಗಿದ್ದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಾರ್ತಾ ಇಲಾಖೆಯ ಮಂತ್ರಿಗಳೆಲ್ಲಾ ಮುಖ್ಯಮಂತ್ರಿಗಳಾಗಿ ಬಿಟ್ಟಿದ್ದಾರೆ ಎಂಬುದನ್ನು ಸ್ವಲ್ಪ ನೆನಪಿನಲ್ಲಿಟ್ಟು ಕೊಳ್ಳಿ.

ಶ್ರೀ ಎಂ. ರಘುಪತಿ.—''ಬಡವ ನೀನು ಮಡಗಿದ ಹಾಗೆ ಇರು'' ಎನ್ನುವ ಗಾದೆ ಪ್ರಕಾರ ನನಗೆ ಅದೆಲ್ಲಾ ವಿತಕ್ಕೆ ಸ್ವಾಮಿ. ಇನ್ನು ಶ್ರೀ ಕೆ.ಎಚ್. ಶ್ರೀನಿವಾಸ್‌ರವರು ವಾರ್ತಾ ಇಲಾಖೆಯ ಮಂತ್ರಿಗಳಾಗಿದ್ದರು. ಅನಂತರ ಶ್ರೀ ಗಂಗಾಧರ ಗೌಡರವರು ದಕ್ಷಿಣಕನ್ನಡ ಜಿಲ್ಲೆಯವರು ಅವರೂ ಸ್ವಲ್ಪ ದಿವಸಗಳ ಕಾಲ ವಾರ್ತಾ ಮಂತ್ರಿಯಾಗಿದ್ದರು. ಅಧ್ಯಕ್ಷರೇ, ನಾನು ಕಳೆದ ಬಾರಿ ಈ ಬೇಡಿಕೆಯ ಮೇಲೆ ಉತ್ತರ ಕೊಡುತ್ತಾ ಏನು ಉತ್ತರ ಕೊಟ್ಟಿದ್ದೇನೆ ಎನ್ನತಕ್ಕದರ ಬಗ್ಗೆ ವರದಿಯನ್ನು ಸಂಪೂರ್ಣವಾಗಿ ತರಿಸಿ ಕೊಂಡು ನೋಡಲಿ. ಆ ನನ್ನ ಭಾಷಣ ಪೂರ್ಣ ಪಾಠವನ್ನು ಓದಿದರೆ.........

ಹೋದವರ್ಷ ಏನೇನು ಹೇಳಿದೆವು, ಹೇಳಿರುವುದಕ್ಕಿಂತ ಜಾಸ್ತಿ ಮಾಡಿದ್ದೇವೆಯೋ ಹೊರತು ಕಡಿಮೆ ಮಾಡಿಲ್ಲ. ಮೊದಲನೆಯದಾಗಿ, ಮಾನ್ಯ ವೀರಪ್ಪ ಮೊಯಿಲಿಯವರು ಪತ್ರಿಕಾಕರ್ತರಿಗೆ ಮಾಸಾಶನ ಮತ್ತು ವೈದ್ಯಕೀಯ ಸೌಲಭ್ಯ ಕೊಡುವ ಬಗ್ಗೆ ಹೇಳಿದರು ಈ ಎರಡೂ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವ ಪ್ರಪ್ರಥಮ ಸರ್ಕಾರ ಅಂದರೆ ಭಾರತದೇಶದಲ್ಲಿ ಕರ್ನಾಟಕ ಸರ್ಕಾರ. ಇನ್ನು ಯಾವ ಸರ್ಕಾರವೂ ತಂದಿಲ್ಲ. ಇದರಿಂದ ಎಷ್ಟು ಜನರಿಗೆ ಲಾಭವಾಗುತ್ತದೆ ಎಂದು ಮಾನ್ಯ ಮೊಯಿಲಿಯವರು ಕೇಳಿದರು. ಬೇಡಿಕೆ ಬಂದಿರುವ ಪ್ರಕಾರ ೧೨೦ ಜನ ಮಾಸಾಶನವನ್ನು ಕೋರಿದ್ದಾರೆ. ಇದರಲ್ಲಿ ದುರುಪಯೋಗವಾಗಬಹುದು ಎಂಬ ಶಂಕೆಯನ್ನು ಅವರು ವ್ಯಕ್ತಪಡಿಸಿದರು. ಇದರ ಬಗ್ಗೆ ಸ್ಕ್ರೀನಿಂಗ್ ಮಾಡಿ ಅದರ ಮೂಲಕ ದುರುಪಯೋಗವಾಗದ ಹಾಗೆ ನೋಡಿಕೊಳ್ಳುವುದು ನನ್ನ ಕರ್ತವ್ಯ. ಅದನ್ನು ಅವರು ದುರುಪಯೋಗ ಮಾಡಿಕೊಳ್ಳುವುದಿಲ್ಲ ಎಂಬ ಸಂಪೂರ್ಣವಾದ ನಂಬಿಕೆ ಇದೆ. ಪತ್ರಿಕಾಕರ್ತರ ಮೇಲೆ ನಂಬಿಕೆ ಇರುವ ಕಾರಣ ದುರುಪಯೋಗ ನಡೆಯುವುದಿಲ್ಲ ಎಂದು ನಂಬುತ್ತೇನೆ. ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿ ತದನಂತರ ಪತ್ರಿಕಾಗೋಷ್ಠಿಯಲ್ಲಿ ಹೇಳುವಾಗ ಕೆಲವರು ಇದರಲ್ಲಿ ಇನ್ನೂ ಸ್ವಲ್ಪ ಸುಧಾರಣೆಗಳನ್ನು ತರಬೇಕು ಎಂದು ಸೂಚನೆ ಮಾಡಿದರು. ನಾನು ಅವರಿಗೆ ಹೇಳಿದೆ, ಒಂದು ವರ್ಷ ಕಾದು ನೋಡೋಣ ; ಫಲಿತಾಂಶ ನೋಡೋಣ, ಪ್ರಪ್ರಥಮವಾಗಿ

ಯಾವುದೇ ಒಂದು ಯೋಜನೆ ಜಾರಿಗೆ ತಂದಾಗ ಕೆಲವು ಲೋಪದೋಷಗಳು ಇರುತ್ತವೆ, ಲೋಪರಹಿತವಾದ ಕಾರ್ಯಕ್ರಮಗಳನ್ನು ತರುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿದೆ. ಮತ್ತೆ ವೈದ್ಯಕೀಯ ಸೌಲಭ್ಯವನ್ನು ಕೊಡುವಂಥ ಕಾರ್ಯಕ್ರಮವನ್ನು ಭಾರತದೇಶದಲ್ಲಿ ನಾವು ಪ್ರಪ್ರಥಮವಾಗಿ ತಂದಿದ್ದೇವೆ; ಇದನ್ನು ಏತಕ್ಕೋಸ್ಕರ ತಂದಿದ್ದೇವೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುತ್ತೇನೆ. ಯಾರು ಕಷ್ಟದಲ್ಲಿದ್ದಾರೆ, ಯಾರು ತಮ್ಮ ಜೀವನದಲ್ಲಿ ಒಂದು ೧೧ ರೂಪಾಯಿ ಸಂಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುತ್ತಾರೆ ಅಂತಹವರಿಗೋಸ್ಕರ ಇದನ್ನು ತಂದಿದ್ದೇವೆ. ನಾನು ಪ್ರವಾಸ ಹೋದಂಥ ಕಾಲದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತಿಯೊಂದು ಪ್ರದೇಶದಲ್ಲೂ, ನನ್ನ ಮುಂದೆ ಒಂದು ಬೇಡಿಕೆಯನ್ನು ಇಡುತ್ತಿದ್ದರು ಅದೇನೆಂದರೆ, ನಮಗೆ ಹಣದ ಕೊರತೆ ಇದೆ, ಬಹಳ ಕಷ್ಟದಲ್ಲಿದ್ದೇವೆ, ನಮಗೆ ಪತ್ರಿಕಾಲಯದಲ್ಲಿ ಕೊಡುವ ಸಂಬಳ ಸಾಲುವುದಿಲ್ಲ, ನಾವು ಬಹಳ ಕಷ್ಟದಲ್ಲಿದ್ದೇವೆ ಎಂದು ಸಣ್ಣ ಪತ್ರಿಕೆಗಳನ್ನು ನಡೆಸುವವರು ಮತ್ತು ದೊಡ್ಡ ಪತ್ರಿಕೆಗಳಲ್ಲಿ ಕೆಲಸಮಾಡುವವರು, ಗ್ರಾಮಾಂತರ ಪ್ರದೇಶಗಳಲ್ಲಿರುವವರು ಹೇಳಿದರು. ತಮಗೆ ನಿಜಾಂಶ ಹೇಳುವುದಾದರೆ, ಒಂದು ಕಾಲಂ ಬರೆದಾಗ, ಆ ಕಾಲಂ ಪ್ರಿಂಟಾದರೆ ಮಾತ್ರ ಇಷ್ಟು ಹಣ ಕೊಡಬೇಕು ಎಂಬ ಪರಿಪಾಠವಿದೆ. ಅದರ ಪ್ರಕಾರ ಅಷ್ಟು ಹಣ ಅವರಿಗೆ ಸಿಗುತ್ತದೆ. ಒಂದು ತಿಂಗಳಿಗೆ ೫೦–೬೦ ರೂಪಾಯಿ ಸಿಕ್ಕಿದರೆ ಬಹಳ ಜಾಸ್ತಿ. ಆದುದರಿಂದ ಈ ಕಷ್ಟವೆಲ್ಲಾ ನಿವಾರಿಸಬೇಕು ಎಂದು ಈ ಎರಡು ಕಾರ್ಯಕ್ರಮಗಳನ್ನು ಪ್ರ ಪ್ರ ಥ ಮ ವಾ ಗಿ ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಕೇರಳದಲ್ಲಿ ಮಾಸಾಶನ ಕಾರ್ಯಕ್ರಮ ಮಾತ್ರ ಇದೆ. ಮ್ಯಾನೇಜ್‌ಮೆಂಟ್‌ನವರು ಇಷ್ಟು ಕಾಂಟ್ರಿಬ್ಯೂಷನ್ ಕೊಡಬೇಕು ಮತ್ತು ಪತ್ರಿಕಾಲಯದವರು ಇಷ್ಟು ಕಾಂಟ್ರಿಬ್ಯೂಷನ್ ಕೊಡಬೇಕು, ಆ ಕಾಂಟ್ರಿಬ್ಯೂಷನ್‌ನಿಂದ ಬಂದ ಹಣದಲ್ಲಿ ಮಾಸಾಶನ ಕೊಡಬೇಕು ಎಂದು ಇದೆ. ಯಾರಾದರೂ ಮ್ಯಾನೇಜ್‌ಮೆಂಟಿನವರು ಕೊಡದೇ ಹೋದರೆ ಒತ್ತಾಯ ತರುವುದಕ್ಕೆ ಅವಕಾಶವಿಲ್ಲ; ಕೊಡದೇ ಹೋದರೆ ನಿವೃತ್ತಿಯಾದವರಿಗೆ ಸಿಕ್ಕುವುದಿಲ್ಲ. ಅಂತಹ ಕಾರ್ಯಕ್ರಮ ತರುವ ಬದಲು ಇಂತಹ ಉಪಯುಕ್ತವಾದ ಕಾರ್ಯಕ್ರಮ ತಂದರೆ ತಿಂಗಳಿಗೆ ೩೦೦ ರೂಪಾಯಿ ಅವರಿಗೆ ಸಿಗುತ್ತದೆ. ಯಾರು ನೊಂದಿರುತ್ತಾರೆ ಅವರಿಗೆ ಅನುಕೂಲವಾಗುತ್ತದೆ. ಮೇಲಾಗಿ ಅವರಿಗೆ ಮೇಜರ್ ಆಗಿರತಕ್ಕ ದುಡಿಯುವಂಥ ಮಕ್ಕಳು ಇದ್ದರೆ ಇದರ ಅನುಕೂಲ ತೆಗೆದುಕೊಳ್ಳಕೂಡದು ಎಂದು ಇದೆ. ಅದಕ್ಕೂ ಇದಕ್ಕೂ ಲಿಂಕ್ ಮಾಡಬಾರದು ಡೀಲಿಂಕ್ ಮಾಡಿ ಪರಿಗಣಿಸಬೇಕು ಎಂದು ಅದರಲ್ಲಿ ಈ ಕ್ಲಾಸ್‌ನ್ನು ಹಾಕಿದ್ದೇವೆ. ಮತ್ತೇ ಇನ್ನೊಂದು ಬದಲಾವಣೆಯನ್ನು ತರುತ್ತಾ ಇದ್ದೇವೆ. ಅದು ಏನೆಂದರೆ, ಪತ್ರಿಕಾಕರ್ತರು ಕೆಲಸದಲ್ಲಿದ್ದಾಗ ತೀರಿಹೋದರೆ, ಅವಧಿಯನ್ನು ಮುಗಿಸದೇ ತೀರಿಹೋದರೆ, ತೀರಿ ಹೋದ ಕಾಲದಲ್ಲಿ ಅವರ ಕುಟುಂಬಕ್ಕೆ ನಾವು ಸ್ವಲ್ಪ ಪರಿಹಾರ ಕೊಡಬೇಕು ಎಂದು ಮಾರ್ಪಾಟು ತರುತ್ತಾ ಇದ್ದೇವೆ. ಇದರ ಆಜ್ಞೆ ಕೆಲವೇ ದಿನದಲ್ಲಿ ಹೊರಗಡೆ ಬರುತ್ತದೆ, ಮತ್ತೆ ವೈದ್ಯಕೀಯ ಸೌಲಭ್ಯದ ಬಗ್ಗೆ ಹೇಳುವುದಾದರೆ, ಯಾರು ಇ. ಎಸ್. ಐ. ನಲ್ಲಿ ಕವರ್ ಆಗುತ್ತಾರೋ ಅವರಿಗೆ ಇದು ಅನ್ವಯಿಸುವುದಿಲ್ಲ. ಪಾಲೇಕರ್ ಅವಾರ್ಡ್ ಪ್ರಕಾರ ವೈದ್ಯಕೀಯ ಸೌಲಭ್ಯ ಕೊಡುತ್ತಿರುವ ಕಾರಣ ಅಂತಹವರಿಗೆ ಇದು ಅನ್ವಯಿಸುವುದಿಲ್ಲ. ಯಾರಿಗೆ ಹಣದ ಮುಗ್ಗಟ್ಟಿನಿಂದ ವೈದ್ಯಕೀಯ ಸೌಲಭ್ಯ ಪಡೆಯುವುದಕ್ಕೆ ಕಷ್ಟವಾಗುತ್ತದೆ, ಅಂಥವರಿಗೆ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಇದನ್ನು ತಾವು ಸಂಪೂರ್ಣವಾಗಿ ಪ್ರಶಂಸಿಸುತ್ತೀರಿ ಎಂದು ನಂಬಿದ್ದೇನೆ. ಕೆಲವು ಪತ್ರಿಕೆಯವರಿಗೆ ಅಸಮಾಧಾನ ಇರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೋಸ್ಕರ ನಾನು ಹೇಳಿದೆ; ಒಂದು ವರ್ಷ ಕಾದು ನೋಡೋಣ, ಮುಂದಿನ ವರ್ಷದಲ್ಲಿ ಈ ಬಗ್ಗೆ ಹೆಚ್ಚಿನ ಬದಲಾವಣೆ ತರಬೇಕು, ಈ ಯೋಜನೆಗೆ ಇನ್ನೂ ಹೆಚ್ಚು ಜನರನ್ನು ಸೇರಿಸಿಕೊಳ್ಳಬೇಕು ಅಂದರೆ ಸೇರಿಸಿಕೊಳ್ಳೋಣ. ಮತ್ತೆ ಪಾಸ್‌ಗಳ ಬಗ್ಗೆ ಹೇಳಿದ್ದಾರೆ. ಈಗ ಮುದ್ರಣವಾಗಿ ಬಂದಿದೆ, ಕೊಡುತ್ತಾ ಇದ್ದೇವೆಂದು ಸರ್ಕ್ಯುಲರ್ ಕಳಿಸಿದ್ದೇವೆ. ಎಲ್ಲರೂ ಪಾಸ್‌ಗಳನ್ನು ತೆಗೆದುಕೊಳ್ಳಬಹುದು. ಈ ಬಗ್ಗೆ ಕಳೆದ ಬಡ್ಜೆಟ್‌ನಲ್ಲಿ ಹೇಳಿತ್ತು; ಸ್ವಲ್ಪ ತಡವಾಗಿದೆ, ಅದಕ್ಕಾಗಿ ವಿಷಾದಿಸುತ್ತೇನೆ. ತಡವಾದ ಕಾರಣ ವಿಷಾದಿಸುತ್ತೇನೆಯೇ ಹೊರತು ಅದನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ. ಈ ವರ್ಷ ಪ್ರತಿಯೊಬ್ಬರೂ ಈ ಒಂದು ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳುತ್ತಾ ಇದ್ದೇನೆ. ಈ ಮಾತನ್ನು ಹೇಳುವಾಗ ಮಾನ್ಯ ವಿರೋಧಪಕ್ಷದವರಿಗೆ ಒಂದು ವಿಷಯವನ್ನು ತಿಳಿಸುತ್ತೇನೆ. ಪತ್ರಿಕಾ ಸಂಪಾದಕರ ಮಂಡಲಿ ಮತ್ತು ಪತ್ರಿಕೆಗಳಿಗೆ ಸಂಬಂಧಪಟ್ಟ ವ್ಯಕ್ತಿಗಳ ಹತ್ತಿರ ಚರ್ಚೆ ಮಾಡಿದಮೇಲೆ ಈ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ನಾನು ಅವರನ್ನು ಸಂಪೂರ್ಣವಾಗಿ ಅಭಿನಂದಿಸುತ್ತೇನೆ. ಈ ಕೆಲಸವನ್ನು ಮಾಡುವಾಗ

ವರ್ಕಿಂಗ್ ಜರ್ನಲಿಸ್ಟ್ಸ್ ಅಸೋಸಿಯೇಷನ್‌ನವನ್ನು ಸಂಪೂರ್ಣವಾಗಿ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಮಾಡಿದ್ದೇನೆ. ಈ ವೈದ್ಯಕೀಯ ಸೌಲಭ್ಯ ಎಷ್ಟು ಜನರಿಗೆ ಸಿಗಬಹುದು ಅಂದರೆ ಸುಮಾರು ೩೦೦೦ ಜನರಿಗೆ ಸಿಗುವ ಅವಕಾಶವಿದೆ. ಮಾನ್ಯ ಅಧ್ಯಕ್ಷರೆ, ಈ ವರ್ಷ ಒಂದು ಕ್ರಾಂತಿಕಾರಕವಾದ ಯೋಜನೆಯನ್ನು ಜಾರಿಗೆ ತರುತ್ತಾ ಇದ್ದೇವೆ. ಇಡೀ ಭಾರತ ದೇಶದಲ್ಲಿ ಯಾರೂ ಇಂತಹ ಯೋಜನೆಯನ್ನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ನನ್ನ ಇಲಾಖೆಯಲ್ಲಿ ೩೦ ಜನ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಅಪ್ರೆಂಟಿಶಿಪ್ ಕೋರ್ಸನ್ನು ಮಾಡಿದ್ದೇವೆ. ಅವರು ಪತ್ರಿಕಾಲಯಗಳಲ್ಲಿ ಅಪ್ರೆಂಟಿಶಿಪ್ ಪಡೆಯಬಹುದು. ಈ ಅಪ್ರೆಂಟಿಶಿಪ್ ಪಡೆಯುವ ಕಾಲದಲ್ಲಿ ಅವರಿಗೆ ತಿಂಗಳಿಗೆ ೫೦೦ ರೂಪಾಯಿ ಮಾಸಾಶನ ಕೊಡುತ್ತೇವೆ. ಈ ವಿಷಯವಾಗಿ ಪತ್ರಿಕಾ ಮಾಲೀಕರ ಜೊತೆ ಸಹ ಮಾತನಾಡಿದ್ದೇನೆ, ಅವರೂ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಇದ್ದೇನೆ. ಈ ಯೋಜನೆ ಈ ವರ್ಷದಿಂದ ಪ್ರಾರಂಭವಾಗುತ್ತದೆ. ಈ ೩೦ ಜನ ಅಭ್ಯರ್ಥಿಗಳ ಪೈಕಿ ೫ ಜನ ಮಹಿಳೆಯರಿಗೆ ಮೀಸಲಾಗಿಟ್ಟಿದೆ. ಈ ೩೦ ಜನ ವಿದ್ಯಾರ್ಥಿಗಳಲ್ಲಿ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆಯುವುದಕ್ಕೆ ೧೦ ಜನರಿಗೆ ಮತ್ತು ಪತ್ರಿಕಾಲಯಗಳಲ್ಲಿ ತರಬೇತಿ ಪಡೆಯುವುದಕ್ಕೆ ೨೦ ಜನರಿಗೆ ಅವಕಾಶ ಮಾಡಿಕೊಡುತ್ತಾ ಇದ್ದೇವೆ. ಈ ಒಂದು ಯೋಜನೆಯನ್ನು ಏಕೆ ಜಾರಿಗೆ ತರುತ್ತಿದ್ದೇವೆಂದರೆ ಹಿಂದುಳಿದ ವರ್ಗಗಳು, ಶೋಷಣೆಗೆ ಈಡಾದ ವರ್ಗಗಳು, ಹರಿಜನ ಗಿರಿಜನರು, ನೊಂದವರು ಏನಿದ್ದಾರೆ ಇವರುಗಳ ಬಗ್ಗೆ ಪತ್ರಿಕಾಲಯಗಳಲ್ಲಿ ಪಟ್ಟಿಯನ್ನು ತರಿಸಿಕೊಂಡು ನೋಡಿದಾಗ ಶೇಕಡ ಒಂದರಷ್ಟು ಕೂಡ ಇವತ್ತಿನವರೆಗೆ ಸಿಕ್ಕಿಲ್ಲ. ಆದುದರಿಂದ ಈ ಒಂದು ತರಬೇತಿ ಕೊಡುವುದರ ಮೂಲಕ ಪತ್ರಿಕೆಗಳಲ್ಲಿ ಆ ವರ್ಗದವರಿಗೆ ಅವಕಾಶ ಸಿಕ್ಕಬಹುದು ಎಂದು ಮತ್ತು ನಾಲ್ಕನೇ ಎಸ್ಟೇಟಿನವರ ಕೂಗು ಏನಿದೆ ಅದನ್ನು ಬೆಂಬಲಿಸಬೇಕು, ಎಂದು ಶೋಷಣೆಗೆ ಈಡಾದ ಜನತೆ ಏನಿದ್ದಾರೆ ಅವರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಸಂಪೂರ್ಣ ಸಹಕಾರಿಯಾದ ಈ ಕ್ರಾಂತಿಕಾರಿ ಯೋಜನೆಯನ್ನು ಜಾರಿಗೆ ತರುತ್ತಾ ಇದ್ದೇವೆ.

ಮತ್ತೆ ಇದರಲ್ಲಿ ಯಾರಾದರೂ ತರಬೇತಿಯನ್ನು ಪಡೆದ ಮೇಲೆ ತಾವೇ ಸ್ವಂತ ಪತ್ರಿಕೆಯನ್ನು ಪ್ರಾರಂಭ ಮಾಡುತ್ತೇವೆಂದರೆ, ಅವರಿಗೆ ೫ ಸಾವಿರ ರೂಪಾಯಿಗಳ ಮುಂಗಡ ಹಣವನ್ನು ಕೊಟ್ಟು ಪತ್ರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಂದರೆ ಅಪ್ರೆಂಟಿಷಿಪ್ ಆದ ಮೇಲೆ ಕೆಲಸ ಸಿಕ್ಕದೇ ಇರತಕ್ಕಂತಹವರಿಗೆ ಹಣಕಾಸಿನ ನೆರವನ್ನು ಕ್ರಿಯೇಟ್ ಮಾಡಿದ್ದೇವೆ. ಈ ಕೆಲಸವನ್ನು ಇಡೀ ಭಾರತದಲ್ಲಿ ಯಾರೂ ಮಾಡಿಲ್ಲ. ಇಂತಹ ಕ್ರಾಂತಿಕಾರಕವಾದ ಬದಲಾವಣೆಯನ್ನು ಇವತ್ತು ನಮ್ಮ ಸರ್ಕಾರ ಜಾರಿಗೆ ತರುತ್ತಿದೆ. ಮತ್ತೆ ಪತ್ರಿಕಾಕರ್ತರಿಗೆ ಆದ್ಯತೆಯ ಮೇಲೆ ಸೈಟುಗಳನ್ನು ಕೊಡಬೇಕೆಂಬ ಒಂದು ಕಾರ್ಯಕ್ರಮವನ್ನು ಈಗಾಗಲೇ ಕೈಗೆ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಪತ್ರಿಕಾ ಮಂಡಲಿಯವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅಲ್ಲಿ ತೀರ್ಮಾನ ಮಾಡಿದ ಮೇಲೆ ನಾನು ಖಂಡಿತವಾಗಿ ಅದನ್ನು ಜಾರಿಗೆ ತರುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡುತ್ತೇನೆ. ಇದು ಸಂಪೂರ್ಣವಾಗಿ ನನ್ನ ಇಲಾಖೆಗೆ ಸಂಬಂಧಪಟ್ಟದ್ದು ಅಲ್ಲ. ಬೇರೆ ಇಲಾಖೆಯವರ ಜೊತೆಯಲ್ಲಿ ಚರ್ಚೆ ಮಾಡಬೇಕಾಗಿದೆ. ಆ ಬಗ್ಗೆ ಕೂಡ ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇನೆ. ಮುಖ್ಯಮಂತ್ರಿಗಳ ಸಮ್ಮುಖದಲ್ಲೇ ಚರ್ಚೆಯಾಗಿ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಆ ನಿರ್ಣಯವನ್ನು ಜಾರಿಗೆ ತರುವ ಹಂತದಲ್ಲಿದ್ದೇವೆ. ಆ ನಿರ್ಣಯ ಜಾರಿಗೆ ಬರುತ್ತದೆಂದು ನನಗೆ ಸಂಪೂರ್ಣವಾದ ನಂಬಿಕೆ ಇದೆ. ಶ್ರೀಮಾನ್ ಮೊಯಿಲಿಯವರು ಒಂದು ವಿಷಯವನ್ನು ಅಂದರೆ ಪ್ರೆಸ್ ಅಕಾಡೆಮಿಯ ಬಗ್ಗೆ ಪ್ರಸ್ತಾಪ ಮಾಡಿದರು. ಈ ಪ್ರೆಸ್ ಅಕಾಡೆಮಿಯ ಬಗ್ಗೆ ಅವರು ಏನು ಹೇಳಿದರು ಅಂದರೆ ಪತ್ರಿಕಾ ಮಂಡಲಿಯವರಿಗೆ ಕಾರನ್ನು ಕೊಟ್ಟಿದ್ದೀರಿ ಅಂತ. ಮತ್ತೆ ಅವರಿಗೆ ಸಂಬಳ ಸಾರಿಗೆಯನ್ನೂ ಕೊಡಬೇಕೆಂದಿದ್ದೀರಿ ಅಂತ ಹೇಳಿದರು. ಇಲ್ಲ. ಕಾರನ್ನು ಕೊಡುತ್ತಿಲ್ಲ. ಸಂಬಳವನ್ನೂ ಕೊಡುತ್ತಿಲ್ಲ. ಎಲ್ಲಾ ಅಕಾಡೆಮಿಯ ಅಧ್ಯಕ್ಷರಿಗೂ ಕೊಡುತ್ತಿಲ್ಲ. ಇವರಿಗೂ ಕೊಡುತ್ತಿಲ್ಲ. ಎಲ್ಲ ಅಕಾಡೆಮಿಯ ಅಧ್ಯಕ್ಷರುಗಳಿಗೂ ಕಾರನ್ನು ಕೊಟ್ಟರೆ ಇವರಿಗೂ ಕೊಡುತ್ತೇವೆ. ಇಲ್ಲದಿದ್ದರೆ ಇಲ್ಲ. ಎಲ್ಲ ಅಕಾಡೆಮಿಯ ಅಧ್ಯಕ್ಷರು ಕೇಳಿದರೆ ನಾವು ಇಲ್ಲ ಅಂತ ಹೇಳುವುದಕ್ಕಾಗುವುದಿಲ್ಲ. ಕೊಟ್ಟರೂ ಕೊಡಬಹುದು. ಅದು ಯಾವುದನ್ನೂ ಸಧ್ಯದಲ್ಲಿ ಹೇಳುವಂತಹ ಸ್ಥಿತಿಯಲ್ಲಿಲ್ಲ. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗಿದೆ. ಪತ್ರಿಕಾ ಮಂಡಲಿಯನ್ನು ಪುನರ್ ರಚನೆ ಮಾಡಿದ ಮೇಲೆ ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ನನಗೆ ಇರುವ ಅವಕಾಶ ಬಹಳ ಕಡಿಮೆ. ಕೇವಲ

೩-೪ ಜನರನ್ನು ಮಾತ್ರ ನಾಮಕರಣ ಮಾಡುವಂತಹ ಅವಕಾಶ ಇದೆ. ಅವರ ಪೂರ್ಣ ವಿವರಗಳು ಪತ್ರಿಕಾ ಮಂಡಲಿಯ ಮೂಲಕ, ಪತ್ರಿಕಾ ಸಾಂಸ್ಕೃತಿಕ ಮಂಡಲಿಯ ಮೂಲಕ ಬರಬೇಕು. ಆದರಲ್ಲೂ ಸ್ವಲ್ಪ ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎಂದು ತಿಳಿದು ಮೂರು ಜನರನ್ನೂ ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಆ ಭಾಗದಿಂದ ಬರತಕ್ಕಂತಹವರನ್ನೇ ಸೂಚನೆ ಮಾಡಬೇಕೆಂದು ಕೇಳಿದ್ದೇನೆ. ಅವರೂ ಅದಕ್ಕೆ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದರಲ್ಲಿ ರೀಜನಲ್ ಇಂಬ್ಯಾಲೆನ್ಸ್ ಆಗುವುದಿಲ್ಲ. ಅತಿ ಶೀಘ್ರದಲ್ಲೇ ಪತ್ರಿಕಾ ಅಕಾಡೆಮಿ ತನ್ನ ಕಾರ್ಯವನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದೇನೆ. ಅವರಿಗೆ ಇದುವರೆಗೂ ಕಛೇರಿ ಇರಲಿಲ್ಲ ಪ್ರಪ್ರಥವಾಗಿ ನಾವು ಅವರಿಗೆ ಕಛೇರಿಯನ್ನೂ ಕೂಡ ಒದಗಿಸಿದ್ದೇವೆ. ಈ ಪತ್ರಿಕಾ ಮಂಡಲಿ ಯಾವಾಗ ರಚನೆಯಾಯಿತು ಎಂದರೆ, ೧೬-೩-೧೯೭೨ ರಲ್ಲಿ. ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದ್ದಾರೆ ಎಂದರೆ, ೨೪-೯-೭೨ರಲ್ಲಿ ಒಂದು ಸಭೆಯನ್ನು ರಚನೆಯಾದ ೬ ತಿಂಗಳಲ್ಲಿ ನಡೆಸಿದ್ದಾರೆ. ಆದರೆ, ನಾವು ಅದನ್ನು ರಚನೆಮಾಡಿದ ಒಂದು ತಿಂಗಳೊಳಗಾಗಿ ಕಛೇರಿಯನ್ನು ಒದಗಿಸಿದ್ದೇವೆ. ಮತ್ತೆ ಇನ್ನೊಂದು ಸಭೆಯನ್ನು ೧೫-೧೨-೭೨ರಲ್ಲಿ ನಡೆಸಿದ್ದಾರೆ. ಒಟ್ಟು ೨ ಸಭೆಗಳು ಮಾತ್ರ ನಡೆದಿದೆ. ಈ ೨ ಸಭೆಗಳನ್ನು ಬಿಟ್ಟರೆ ಬೇರೆ ಏನೇನೂ ನಡೆಯಲಿಲ್ಲ. ಏನೇನೂ ಕೆಲಸಗಳೂ ಆಗಲಿಲ್ಲ ದುರಾದೃಷ್ಟವಶಾತ್ ಆ ಅಧ್ಯಕ್ಷರು ತೀರಿಕೊಂಡರು, ಅದನ್ನು ನಾವು ಪುನರಚನೆ ಮಾಡಿದ ಮೇಲೆ ಉತ್ತಮವಾದ ಪತ್ರಿಕಾ ಸಂಪಾದಕರನ್ನು ಹಾಕಿದ್ದೇವೆ. ಅದರ ಬಗ್ಗೆಯೂ ಟೀಕೆ ಮಾಡಿದ್ದಾರೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನು ಪತ್ರಿಕಾಕರ್ತರಲ್ಲಿ ಯಾರ ಬಗ್ಗೆಯೂ ಸಾಧಾರಣವಾಗಿ ಟೀಕೆ ಮಾಡುವುದಿಲ್ಲ. ಏಕೆಂದರೆ ಅವರು ಸ್ವತಂತ್ರವಾಗಿ ಕೆಲಸ ಮಾಡುವವರು. ಅವರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಬಾರದು ಎನ್ನುವ ಒಂದೇ ಒಂದು ಉದ್ದೇಶದಿಂದ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಮಾಡುವುದೂ ಇಲ್ಲ. ಅವರು ಸ್ವಾತಂತ್ರ್ಯವಾಗಿರತಕ್ಕಂತಹವರು. ಮತ್ತು ಯೋಗ್ಯರೂ ಕೂಡ. ಈಗ ಅಧ್ಯಕ್ಷರಾಗಿರತಕ್ಕವರು ಸ್ವಾತಂತ್ರ್ಯ ಚಳುವಳಿಯಲ್ಲಿ ಬಹಳಷ್ಟು ಸಾರಿ ಜೈಲಿಗೆ ಹೋಗಿದ್ದವರು. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಸಂಪೂರ್ಣವಾದ ದೃಢ ನಿಲುವನ್ನು ಇಟ್ಟುಕೊಂಡಿದ್ದಾರೆ. ಇಂತಹ ಉತ್ತಮವಾದ ವ್ಯಕ್ತಿಯನ್ನು ನೇಮಕ ಮಾಡಿದ್ದೇವೆ. ಅವರಿಗೆ ಅರ್ಹತೆ ಇಲ್ಲ ಅಂತ ಯಾರೂ ಹೇಳುವುದಕ್ಕೆ ಸಾಧ್ಯ ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಅದನ್ನು ಹೇಳಲಿಲ್ಲವಲ್ಲ,

ಶ್ರೀ ಎಂ. ರಘುಪತಿಯವರು,—ನೀವು ಅಲ್ಲ. ನಿಮ್ಮ ಹಿಂದೆ ಕೂತಿರತಕ್ಕಂತಹವರು ಹೇಳಿದ್ದಾರೆ.

ಶ್ರೀ ಮಾಣಿಕ್ ರಾವ್ ಪಾಟೀಲ್.—ನಾನೇ ?

ಶ್ರೀ ಎಂ. ರಘುಪತಿ.—ನೀವಲ್ಲ, ಶ್ರೀಮಾನ್ ಬಂಗಾರಪ್ಪನವರು.

ಶ್ರೀ ಎಂ. ವೀರಪ್ಪಮೊಯ್ಲಿ.—ನಿಮ್ಮ ಅಭಿಪ್ರಾಯದ ಪ್ರಕಾರ ಒಳ್ಳೆಯವರನ್ನೇ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಅದರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ರಘುಪತಿ.—ಅವರು ಕಂಳಿತುಕೊಂಡೇ ಮಾತನಾಡಿದರು. ಅದು ರೆಕಾರ್ಡಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅದು ಅವರ ಅಭಿಪ್ರಾಯ. ಅದು ತಪ್ಪಲ್ಲ. ಆದರೆ ಪತ್ರಿಕಾ ಅಫಿಲಿಯೇಷನ್ ಕಮಿಟಿ ಪುನರಚನೆ ಮಾಡಿದ್ದೇವೆ. ಅದರಲ್ಲಿ ಎಲ್ಲ ವರ್ಗದವರಿಗೂ, ಎಲ್ಲಾ ಸ್ಥಳಗಳಿಗೂ ನಾವು ಅವಕಾಶವನ್ನು ಕೊಟ್ಟಿದ್ದೇವೆ. ಈ ಪತ್ರಿಕಾ ಮಂಡಲಿಯಲ್ಲಿ ಪ್ರಪ್ರಥಮವಾಗಿ ಒಬ್ಬ ಹರಿಜನರನ್ನು ಹಾಕಿದ್ದೇವೆ. ಒಬ್ಬ ಹಿಂದುಳಿದವರ್ಗದವರನ್ನೂ ಹಾಕಿದ್ದೇವೆ. ವರದಿಗಾರರನ್ನೂ ಕೂಡ ಹಾಕಿದ್ದೇವೆ. ಫೋಟೋಗ್ರಾಫರ್ ಒಬ್ಬರನ್ನೂ ಕೂಡ ಹಾಕಿದ್ದೇವೆ. ವ್ಯಂಗ್ಯ ಚಿತ್ರಕಾರರನ್ನೂ ಕೂಡ ಹಾಕಿದ್ದೇವೆ. ಸಣ್ಣಪತ್ರಿಕೆಗಳ ಪ್ರತಿನಿಧಿಯೊಬ್ಬರನ್ನು ಹಾಕಿದ್ದೇವೆ. ಹೀಗೆ ಎಲ್ಲ ವರ್ಗದವರಿಗೂ ಪ್ರಾತಿನಿಧ್ಯವನ್ನು ಕೊಟ್ಟಿದ್ದೇವೆ. ಸಾಧ್ಯವಾದ ಮಟ್ಟಿಗೆ ಸಮರ್ಪಕವಾದ ಮಟ್ಟಿಗೆ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಜಾಹಿರಾತಿನ ಪಾಲಿಸಿ ಬಗ್ಗೆ ಹೇಳಿ.

ಶ್ರೀ ಎಂ. ರಘುಪತಿ.—ಶ್ರೀಮಾನ್ ಎಂ.ಬಿ. ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಏನು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಸಮಿತಿಯ ಕಾರ್ಯವನ್ನು ಬೇಗ ಪ್ರಾರಂಭ ಮಾಡಿ ಅಂತ ಕೂಡ ಹೇಳಿದ್ದೇವೆ. ಅವರಿಗೆ ಇನ್ನೂ ಕೆಲವು ಸದಸ್ಯರು ಬೇಕು ಎಂದು ಕೇಳಿದರೆ ಅವರು ಕೇಳಿದಂತಹ

ಸದಸ್ಯರನ್ನು ಕೊಡಬೇಕೆಂದಿದ್ದೇವೆ. ಇದು ಒಂದು ವರ್ಷಗಳ ಕಾಲ ನನ್ನ ಕೈಯಲ್ಲೇ ಇತ್ತು. ಇಡೀ ರಾಜ್ಯವನ್ನೇ ಪ್ರವಾಸ ಮಾಡಿಕೊಂಡು ಇದನ್ನು ಮಾಡುವುದಕ್ಕೆ ನನ್ನ ಕೈಯ್ಯಲ್ಲಿ ಸಾಧ್ಯವಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದೆ. ಇದಕ್ಕಾಗಿ ಬೇರೆ ವ್ಯಕ್ತಿಗಳನ್ನು ನೇಮಕ ಮಾಡುವುದು ಒಳ್ಳೆಯದು ಅಂತ ಹೇಳಿದ ಮೇಲೆ, ಅದರ ಪ್ರಕಾರ ಶ್ರೀಮಾನ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಇದು ಪುನರಚನೆಯಾಗಿದೆ. ಅವರು ಉತ್ತಮ ಪತ್ರಿಕೋದ್ಯಮಿಗಳು. ಹೆಸರುವಾಸಿಯಾದ ಪತ್ರಿಕೋದ್ಯಮಿಗಳೂ ಕೂಡ ಅಂತಹವರು ಅಧ್ಯಕ್ಷರಾಗಿದ್ದಾರೆ. ಅವರು ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಕೆಲವು ನೀತಿಯನ್ನೂ ಕೂಡ ರೂಪಿಸಬೇಕೆಂದು ಅವರಿಗೆ ಹೇಳಿದ್ದೇವೆ. ನೀವು ಹಿಂದೆ ಏನೊಂದು ನೀತಿಯನ್ನು ಹಾಕಿದ್ದೀರೋ ಅದನ್ನು ಬಿಟ್ಟು ಬೇರೆ ಬದಲಾವಣೆ ಮಾಡುವುದಕ್ಕೆ ಇನ್ನೂ ನಾನು ಹೋಗಿಲ್ಲ. ಜಾಹಿರಾತಿನ ಬಗ್ಗೆ ಕೂಡ ಏನೇನು ಬದಲಾವಣೆ ಮಾಡಿಲ್ಲ. ಒಂದೇ ಒಂದನ್ನು ಬದಲಾವಣೆ ಮಾಡಿದ್ದೇನೆ. ಅದೇನೆಂದರೆ, ಒಂದೊಂದು ಪತ್ರಿಕೆಗಳಿಗೆ ೩-೪ ಜಾಹಿರಾತನ್ನು ಕೊಟ್ಟು ಕೆಲವೊಂದು ಪತ್ರಿಕೆಗಳಿಗೆ ಒಂದೊಂದು ಜಾಹಿರಾತನ್ನು ಕೊಡುತ್ತಿದ್ದರು. ಇದು ನನ್ನ ಗಮನಕ್ಕೆ ಬಂತು. ಆಗ ನಾನು ಹೇಳಿದೆ, ೩-೪ ಜಾಹಿರಾತನ್ನು ಕೊಡುವುದಾಗಿದ್ದರೆ ಎಲ್ಲರಿಗೂ ಆ ರೀತಿ ಕೊಡಿ. ಎಂದು. ಅದು ಸಾಧ್ಯವಾಗುವುದಿಲ್ಲವೆಂದು ತಿಳಿದ ಮೇಲೆ ಎಲ್ಲರಿಗೂ ಒಂದೇ ಒಂದು ಜಾಹಿರಾತನ್ನು ಕೊಡುತ್ತಿದ್ದೇವೆ. ಅಷ್ಟನ್ನು ಬಿಟ್ಟರೆ ಬೇರೆ ಯಾವುವನ್ನೂ ಬದಲಾವಣೆಯನ್ನು ಮಾಡಿಲ್ಲ. ಒಂದು ವರ್ಷ ಕಾದು ನೋಡುತ್ತೇನೆ. ನೋಡಿ ಆ ಮೇಲೆ ಬದಲಾವಣೆ ಮಾಡುತ್ತೇನೆ. ಅಲ್ಲಿಯವರೆಗೂ ಕೈಹಾಕುವುದಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದೆ. ಆ ಪ್ರಕಾರ ಒಂದು ವರ್ಷ ಕಾದು ನೋಡಿದ್ದೇನೆ. ಪ್ರೆಸ್ ಅಕಾಡಮಿಯನ್ನು ಮಾಡಿದ ಮೇಲೆ ಇದಕ್ಕಾಗಿ ಪ್ರತ್ಯೇಕವಾಗಿ ಫೈನಾನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅನ್ನು ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ. ಪತ್ರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ, ಅದಕ್ಕೆ ಬೇಕಾದಂತಹ ಮುದ್ರಣ ಕಾಗದವನ್ನು ಪರ್ಚೇಸ್ ಮಾಡುವುದಕ್ಕೆ ಫೈನಾನ್ಸ್ ಕಾರ್ಪೊರೇಷನ್ ಮಾಡುವುದಕ್ಕೆ ಸಾಧ್ಯ ಎಂಬುದ ಇದ್ದರೆ ಅದನ್ನು ತಾವು ಶಿಫಾರಸ್ಸು ಮಾಡಿ. ನಾವು ಅದನ್ನು ಮಾಡುತ್ತೇವೆಂದು ಅವರ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲೇ ಹೇಳಿದ್ದೇವೆ. ಅವರಿಂದ ಆ ಬಗ್ಗೆ ಶಿಫಾರಸ್ಸು ಬಂದರೆ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ ಅನ್ನು ಸ್ಥಾಪನೆ ಮಾಡುವುದಕ್ಕೆ ತಯಾರಾಗಿದ್ದೇವೆ. ಪತ್ರಿಕೆಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಬೇಕೆಂದಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಪತ್ರಿಕೆಗಳು ಕೆಲಸ ಮಾಡಿರುವ ಬಗ್ಗೆ ಪ್ರತಿಯೊಬ್ಬರೂ ಮೆಚ್ಚಿದ್ದಾರೆ. ಪತ್ರಿಕಾಕರ್ತರು ಬಹಳ ಉತ್ತಮವಾದ ರೀತಿಯಲ್ಲಿ ಅವರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಭಾರತ ದೇಶದಲ್ಲಿ ಇವರು ಮಾದರಿಯಾಗಿ ವರ್ತನೆ ಮಾಡಿದ್ದಾರೆ. ಪತ್ರಿಕೆಗಳ ಪಾತ್ರ ಏನಿದೆ ಅದನ್ನು ಈ ಪ್ರಜಾಪ್ರಭುತ್ವದಲ್ಲಿ ಸಾಭೀತುಪಡಿಸಿದ್ದಾರೆ. ಒಳ್ಳೆಯ ಕೆಲಸ ಮಾಡಿದ್ದಾರೆ. ಬಹಳ ಶ್ಲಾಘನೀಯವಾದ ಕೆಲಸ ಮಾಡಿದ್ದಾರೆ. ಒಂದೊಂದು ಸಾರಿ ವೈಯಕ್ತಿಕವಾಗಿ ಟೀಕೆ ಮಾಡಬಹುದು. ನನ್ನ ಮೇಲೆ ಟೀಕೆ ಮಾಡಿದಾಕ್ಷಣ ಪತ್ರಿಕೆಗಳೆಲ್ಲ ಕೆಟ್ಟವುಗಳು ಅಂತ ಹೇಳುವ ಸ್ವಭಾವವು ನನಗಿಲ್ಲ. ಟೀಕೆ ಮಾಡುತ್ತಾರೆ. ಟೀಕೆಗೆ ಗುರಿಯಾಗಲೇಬೇಕಾಗುತ್ತದೆ. ಟೀಕೆಗೆ ಗುರಿಯಾಗುವುದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಟೀಕೆಗಳನ್ನು ಮಾಡಿದಾಕ್ಷಣ ಆ ಪತ್ರಿಕೆ ಕೆಟ್ಟದ್ದು ಎಂಬ ತೀರ್ಮಾನಕ್ಕೆ ಬಂದು ಜಾಹಿರಾತನ್ನು ನಿಲ್ಲಿಸಬೇಕೆಂದೇನೂ ಇಲ್ಲ. ನಾನು ಇದುವರೆಗೂ ಒಂದೇ ಒಂದು ಪತ್ರಿಕೆಗೂ ಈ ಸಂಬಂಧವಾಗಿ ಜಾಹಿರಾತನ್ನು ನಿಲ್ಲಿಸಿಲ್ಲ.

ನಮ್ಮನ್ನು ಟೀಕೆ ಮಾಡುತ್ತಿದ್ದ ಪತ್ರಿಕೆಗಳಿಗೂ ಜಾಹಿರಾತು ಕೊಟ್ಟಿದ್ದೇವೆ. ಸಿದ್ಧರಾಮೇಶ್‌ರವರ ಪತ್ರಿಕೆಗೆ ಕೂಡ ಜಾಹಿರಾತು ಕೊಡುವುದನ್ನು ನಿಲ್ಲಿಸಿಲ್ಲ. ಪತ್ರಿಕೆಯವರು ಟೀಕೆ ಮಾಡುತ್ತಾರೆಂದು ನಾವು ಯಾವತ್ತೂ ಜಾಹಿರಾತು ಕೊಡುವುದನ್ನು ನಿಲ್ಲಿಸುವುದಿಲ್ಲ. ಜಾಹಿರಾತು ಕೊಡುವ ಪದ್ಧತಿ ಏನಿದೆ ಅದನ್ನು ನಾವು ಮುಂದುವರಿಸುತ್ತೇವೆಂದು ಹೇಳಿದ್ದೇವೆ. ಮತ್ತು ಆ ಪ್ರಕಾರ ಕೊಡುತ್ತಿದ್ದೇವೆ. ಒಂದು ಶೋಚನೀಯ ವಿಷಯ ಏನೆಂದರೆ, ಆಗಾಗ ಕೆಲವರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಪತ್ರಿಕೆಗಳಲ್ಲಿ ಅವರ ಮೇಲೆ ವರದಿ ಆದಾಗ ಪತ್ರಿಕೆಯವರ ಮೇಲೆ ಕೈಮಾಡುವುದಕ್ಕೆ ಹೋಗುತ್ತಾರೆ. ಅದು ತಪ್ಪು. ಹಾಗೇನಾದರೂ ಇದ್ದರೆ ದೂರು ಕೊಡಲಿ, ಅವರು ವಿಚಾರಣೆ ಮಾಡುತ್ತಾರೆ. ಸುಳ್ಳು ಸುದ್ದಿ ಬರೆದಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪತ್ರಿಕೆಯವರ ಮೇಲೆ ಜವಾಬ್ದಾರಿ ವಹಿಸುತ್ತಿದ್ದೇವೆ. ಆ ಕಾರಣದಿಂದ ಯಾರಾದರೂ ಸಹನೆಯಿಂದ ಇರಬೇಕು. ಅವರು ಬರೆದರು ಅಂದಾಕ್ಷಣ ಅವರನ್ನು ಹೊಡೆಯುವುದು ಅಲ್ಲ, ಅದು ಒಳ್ಳೆಯ ಕೆಲಸ ಅಲ್ಲವೆಂದು ಹೇಳುತ್ತೇನೆ. ಪತ್ರಿಕೆಯವರು ನಿರ್ಭಯತೆಯಿಂದ ಯಾವ

ಅಡ್ಡಿ ಅಡಚಣೆಗಳು ಇಲ್ಲದೆ ಕೆಲಸ ಮಾಡಬೇಕಾಗಿದೆ. ಸಿದ್ಧರಾಮೇಶ್ವರ ಕೊಲೆಯ ಬಗ್ಗೆ ತನಿಖೆ ನಡೆಯುತ್ತಿದೆ. ಅದರ ಬಗ್ಗೆ ನಮಗೂ ಮನಸ್ಸು ನೊಂದಿದೆ. ಇಂಥಾದ್ದು ನಡೆಯಬಾರದಾಗಿತ್ತು. ಆದರೆ ಆಕಸ್ಮಿಕವಾಗಿ ನಡೆದಿದೆ. ಅದರ ಬಗ್ಗೆ ಸಿ. ಬಿ. ಐ. ವಿಚಾರಣೆ ನಡೆಯುತ್ತಿದೆ. ಅದರ ವರದಿ ಬಂದಮೇಲೆ ಏನಾಗುತ್ತದೆಂಬುದನ್ನು ನೋಡೋಣ. ಈಗ ವಾರ್ತಾ ಇಲಾಖೆಯಿಂದ ಎರಡು ಪತ್ರಿಕೆಗಳು ಬರುತ್ತಿವೆ, ಒಂದು ''ಮಾರ್ಚ್ ಆಫ್ ಕರ್ನಾಟಕ'' ಮತ್ತೊಂದು ''ಜನಪದ'' ಎಂದು. ಹಿಂದೆ ಏನು ಒಂದು ಪತ್ರಿಕೆ ಬರುತ್ತಿತ್ತು ಅದು ಫಲಪ್ರದವಾಗಲಿಲ್ಲವೆಂದು ಅದನ್ನು ತೆಗೆದು ಹಾಕಿ ಒಂದೊಂದು ಜಿಲ್ಲೆಯಲ್ಲಿ ೧೦–೧೫ ಸಾವಿರ ಪ್ರತಿಗಳನ್ನು ಮುದ್ರಣ ಮಾಡಿ ''ಜಿಲ್ಲಾ ಜನಪದ'' ಎಂದು ೪ ಪುಟಗಳಿರುವ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಆ ಪ್ರಕಾರ ಪತ್ರಿಕೆಗಳನ್ನು ಪ್ರಕಟಣೆ ಮಾಡುತ್ತೇವೆ. ಈ ರೀತಿ ಪ್ರತಿಯೊಂದು ಜಿಲ್ಲೆಯಲ್ಲೂ ಮಾಡುತ್ತೇವೆ. ಹೀಗೆ ಪ್ರಾರಂಭ ಮಾಡಿ ಆ ಪತ್ರಿಕೆಯನ್ನು ಜಿಲ್ಲಾ ವಿಕಾಸ ಮತ್ತು ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೀಸಲಾಗಿಡುತ್ತೇವೆ, ಮತ್ತು ಜಿಲ್ಲೆಯಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬೆಳಕು ಚೆಲ್ಲುವುದಕ್ಕೋಸ್ಕರ ಈ ಪತ್ರಿಕೆಯನ್ನು ಉಪಯೋಗಿಸಿಕೊಳ್ಳುತ್ತೇವೆ. ಆ ಪತ್ರಿಕೆಗೆ ಮುಂಗಡವಾಗಿ ಸ್ಟ್ಯಾಂಪ್ ಫೀ ಕೊಟ್ಟರೆ ಸಾಕು, ಆ ರೀತಿ ಯಾರು ಸ್ಟ್ಯಾಂಪ್ ಫೀ ಕೊಡುತ್ತಾರೋ ಅಂಥವರಿಗೆ ಪುಕಟೆಯಾಗಿ ಪತ್ರಿಕೆಯನ್ನು ಕಳುಹಿಸಿಕೊಡುತ್ತೇವೆ. ಕೆಲವರು ಹರಿಜನರು, ಹಿಂದುಳಿದ ವರ್ಗದವರು ಏನಿದ್ದಾರೆ ಅಂಥವರು ತಾಲ್ಲೂಕು ಬೋರ್ಡ್ ಸದಸ್ಯರಾಗಿದ್ದರೆ ಮತ್ತು ಅವರಿಗೆ ಓದುವುದಕ್ಕೆ ಬರೆಯುವುದಕ್ಕೆ ಬಂದರೆ ಅಂಥವರಿಗೆ ಪುಕ್ಕಟೆಯಾಗಿ ಪೋಸ್ಟಲ್ ಚಾರ್ಜನ್ನು ಕೂಡ ತೆಗೆದುಕೊಳ್ಳದೆ ಪತ್ರಿಕೆ ಅವರ ಮನೆಗೆ ಹೋಗಿ ತಲುಪುವಂಥ ಏರ್ಪಾಡು ಮಾಡುತ್ತೇವೆ. ಈ ಒಂದು ಕೆಲಸಕ್ಕೆ ಗ್ರಾಮ ಲೆಕ್ಕಿಗರು ಏನಿದ್ದಾರೆ ಅವರ ಸೇವೆಯನ್ನು ಪ್ರಪ್ರಥಮವಾಗಿ ಉಪಯೋಗಿಸಿಕೊಳ್ಳುತ್ತೇವೆ. ಆ ರೀತಿ ಈ ಒಂದು ಪತ್ರಿಕಾ ಆಂದೋಲನವನ್ನು ಪ್ರಾರಂಭ ಮಾಡಿದ್ದೇವೆ. ಇದು ಫಲಪ್ರದವಾಗಿ ನಡೆಯುತ್ತದೆಂಬ ನಂಬಿಕೆ ಇದೆ. ಇದರ ಜೊತೆಗೆ ಹೊಸ ಕಾರ್ಯಕ್ರಮ ಒಂದನ್ನು ಪ್ರಾರಂಭಿಸುತ್ತಿದ್ದೇವೆ. ಅದೇನೆಂದರೆ, ಒಂದು ವರ್ಷದಲ್ಲಿ ೧೦೦ ನಾಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಬೇಕು ಎಂದು. ಇಷ್ಟು ದಿನ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ನಾಟಕಗಳು ನಡೆಯುತ್ತಿದ್ದವು. ಈಗ ಈ ಒಂದು ಏರ್ಪಾಡು ಮಾಡಿದ್ದೇವೆ. ಆ ಏರ್ಪಾಡಿನ ಪ್ರಕಾರ ೧೦೦ ನಾಟಕ ಕಾರ್ಯಕ್ರಮಗಳನ್ನು ಹಳ್ಳಿಗಾಡಿನಲ್ಲಿ ನಡೆಸುತ್ತೇವೆ. ಈ ರಾಜ್ಯದಲ್ಲಾಗುವ ಪ್ರಗತಿಪರ ಕಾರ್ಯಕ್ರಮಗಳನ್ನು ಹಳ್ಳಿಗಾಡಿನ ಜನತೆಗೆ ತಿಳಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ನಾಟಕಗಳು, ಸಿನೆಮಾಗಳು ಮತ್ತು ಸಂಗೀತ ಕಾರ್ಯಕ್ರಮ ಇವು ಮೂರು ಜನತೆಗೆ ತಿಳುವಳಿಕೆ ನೀಡತಕ್ಕ ಪ್ರಬಲವಾದ ಮಾಧ್ಯಮಗಳು. ನಮ್ಮ ದೇಶದಲ್ಲಿ ಇನ್ನೂ ಅನಕ್ಷರತೆ ಹೋಗದೆ ಇರುವುದರಿಂದ ಪತ್ರಿಕೆಗಳನ್ನು ಪ್ರತಿಯೊಬ್ಬರೂ ಓದಲಿಕ್ಕೆ ಸಾಧ್ಯವಾಗುತ್ತಿಲ್ಲ. ಈಗ ರೇಡಿಯೋ ಇದೆ, ಟಿ. ವಿ. ಬಂದಿದೆ. ಇಷ್ಟನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಓದಲು ಬರದೇ ಇದ್ದವರು ರೇಡಿಯೋ ಕೇಳುತ್ತಾರೆ ಮತ್ತು ಟಿ. ವಿ. ಯನ್ನು ನೋಡುತ್ತಾರೆ. ಅದೇ ರೀತಿ ನಾಟಕವನ್ನು ಕೂಡ ಓದದೆ ಇದ್ದವರು ನೋಡುತ್ತಾರೆ ಮತ್ತು ಸಂಗೀತವನ್ನು ಕೇಳುತ್ತಾರೆ. ಆ ರೀತಿ ಎಲ್ಲರಿಗೂ ಅನುಕೂಲವಾಗಬೇಕೆಂದು ೧೦೦ ನಾಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಬೇಕೆಂಬ ಕಾರ್ಯಕ್ರಮವನ್ನು ಈ ವರ್ಷ ಹಾಕಿಕೊಂಡಿದ್ದೇವೆ. ಈ ದಿಸೆಯಲ್ಲಿ ಹಣ ದುರುಪಯೋಗವಾಗುತ್ತಿದೆ ಎಂದು ನನಗೆ ದೂರುಗಳು ಬಂದವು. ಆ ದೂರುಗಳು ಬಂದಮೇಲೆ ನಾನು, ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ನಡೆಸಿದರೆ ಮಾತ್ರ ಹಣ ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ ಮೇಲೆ ದುರುಪಯೋಗವಾಗುತ್ತಿಲ್ಲ. ನಮ್ಮಲ್ಲಿ ಕಾರ್ಯಕ್ರಮಗಳು ಚೆನ್ನಾಗಿ ನಡೆಸಿದರೆ ಹೊರನಾಡಿನವರು ಕೂಡ ನಾಟಕಗಳಿಗೆ ಹಣ ಕೊಡುತ್ತೇವೆಂದು ಹೇಳಿದ್ದಾರೆ, ಇಲ್ಲದಿದ್ದರೆ ಕೊಡುವುದಿಲ್ಲ. ಇದಲ್ಲದೆ, ಒಂದು ವರ್ಷದಲ್ಲಿ ೧೨೦ ಸಂಗೀತ ಸಂಜೆ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಮಾಡಿದ್ದೇವೆ. ಹರಿಕಥೆ, ಯಕ್ಷಗಾನ, ಲಘು ಸಂಗೀತ, ಭಕ್ತಿ ಗೀತೆಗಳು ಇತ್ಯಾದಿಗಳ ಮೂಲಕ ಸರ್ಕಾರದ ಕಾರ್ಯಕ್ರಮಗಳನ್ನು ಹಳ್ಳಿಗಾಡಿನ ಜನತೆಗೆ ಪ್ರಚಾರ ಮಾಡಬೇಕೆಂದು ಮಾಡಿದ್ದೇವೆ. ಮೇಲಾಗಿ ಸಂಗೀತ ಪ್ರತಿಯೊಬ್ಬರಿಗೂ ಮನದಟ್ಟುವ ಉತ್ತಮ ಮಾಧ್ಯಮ. ಈ ಮಾಧ್ಯಮವನ್ನು ಬಳಸಿಕೊಂಡು ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ಸರ್ಕಾರದ ಸಾಧನೆಗಳು ಮತ್ತು ರಾಜ್ಯದ ಪ್ರಗತಿ, ರಾಷ್ಟ್ರದ ಪ್ರಗತಿ, ಈ ದೇಶದ ಪರಿಸ್ಥಿತಿ, ಈ ದೇಶದಲ್ಲಿ ನಡೆಯುವ ಶೋಷಣೆಗಳು ಮತ್ತು ಬಡವ-ಬಲ್ಲಿದರ ನಡುವೆ ಇರತಕ್ಕ ತಾರತಮ್ಯಗಳು, ಸಮಾಜವಾದಿ ಸಮಾಜದಲ್ಲಿ ಸಮಾಜ ಯಾವ ರೀತಿ ಇರಬೇಕೆಂಬುದನ್ನು ತಿಳಿಸುವುದಕ್ಕೋಸ್ಕರ ಈ ಹೊಸ ಕಾರ್ಯ

ಕ್ರಮವನ್ನು ಪ್ರಾರಂಭಿಸಿದ್ದೇವೆ. ಈ ವರ್ಷದಿಂದ ಇದು ಪ್ರಾರಂಭವಾಗುತ್ತದೆ. ಇದನ್ನು ಇನ್ನು ಕೆಲವೇ ದಿನಗಳಲ್ಲಿ ಪ್ರಾರಂಭಿಸುತ್ತೇವೆ. ಇನ್ನು ಸಂಚಾರಿ ವಸ್ತು ಪ್ರದರ್ಶನದ ಬಗ್ಗೆ ಹೇಳಬೇಕಾದರೆ ಇದರಲ್ಲಿ ಒಂದೇ ಒಂದು ವಿಭಾಗ ಇದೆ. ಈಗ ಇನ್ನೂ ಎರಡು ವಿಭಾಗಗಳನ್ನು ಕ್ರಿಯೇಟ್ ಮಾಡಿರುವುದರಿಂದ ಆ ಎರಡು ವಿಭಾಗಗಳಲ್ಲಿ ಎರಡು ಸಂಚಾರಿ ವಾಹನಗಳನ್ನು ಖರೀದಿ ಮಾಡಿ ಅವುಗಳ ಮೂಲಕ ವಸ್ತು ಪ್ರದರ್ಶನಗಳನ್ನು ಹಳ್ಳಿಗಾಡಿನಲ್ಲಿ ಮತ್ತು ಹೆಚ್ಚಾಗಿ ತಾಲ್ಲೂಕು ಮಟ್ಟದಲ್ಲಿ ಪ್ರದರ್ಶನ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದನ್ನು ಈ ವರ್ಷ ಕಾರ್ಯಗತ ಮಾಡುತ್ತಿದ್ದೇವೆ ಒಂದು ಯೂನಿಟ್ ಇದ್ದುದನ್ನು ೩ ಯೂನಿಟ್ ಮಾಡುತ್ತೇವೆ. ಇನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಎರಡೆರಡು ವೀಡಿಯೋಗಳನ್ನು ಖರೀದಿ ಮಾಡಬೇಕೆಂದು ಮಾಡಿದ್ದೇವೆ. ಅವುಗಳನ್ನು ಪ್ರಪ್ರಥಮ ವಾಗಿ ನಾವು ಖರೀದಿ ಮಾಡಿ ಬಳಸುತ್ತಿದ್ದೇವೆ. ಇದರಲ್ಲಿ ನಮ್ಮದೇ ಪ್ರಥಮ ರಾಜ್ಯ. ಅವುಗಳ ಮೂಲಕ ಗ್ರಾಮಾಂತರ ಪ್ರದೇಶಗಳ ಜನತೆಗೆ ಸಿನೇಮಾ ತೋರಿಸುವುದು ಮತ್ತು ನಮ್ಮ ರಾಜ್ಯದಲ್ಲಿ ಆಗುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಚಯ ಮಾಡಿಕೊಡುವುದು ಆಗಿದೆ, ಗ್ರಾಮಾಂತರ ಪ್ರದೇಶಗಳಿಗೆ ವೀಡಿಯೋ ತಲುಪಿಸಬೇಕೆಂಬ ಉದ್ದೇಶದಿಂದ ಪ್ರತಿಯೊಂದು ಜಿಲ್ಲೆಯಲ್ಲಿ ೩ ವೀಡಿಯೋ ಸೆಟ್ಟುಗಳನ್ನು ಖರೀದಿ ಮಾಡಬೇಕು ಮತ್ತು ಅದಕ್ಕೆ ಎರಡು ಕ್ಯಾಮರಾಗಳನ್ನು ಖರೀದಿ ಮಾಡ ಬೇಕೆಂದು ಆರ್ಡರ್ ಪ್ಲೇಸ್ ಮಾಡಿದ್ದೇವೆ. ಅದು ಕೆಲವೇ ದಿನಗಳಲ್ಲಿ ಬರುವ ಸೂಚನೆ ಇದೆ. ಆದುದರಿಂದ ಪ್ರತಿಯೊಂದು ಜಿಲ್ಲೆಯಲ್ಲಿ ೩ ವೀಡಿಯೋಗಳನ್ನು ಇಡಬೇಕು ಮತ್ತು ಅವುಗಳ ಮೂಲಕ ಗ್ರಾಮೀಣ ಜನತೆಗೆ ಯಾವುದನ್ನು ಕಾಣಲು ಲಭ್ಯವಿರುವುದಿಲ್ಲವೋ ಅದನ್ನು ಸಿನೇಮಾ ಮೂಲಕ ಪರಿಚಯ ಮಾಡಿಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಮತ್ತು ಈ ವರ್ಷ ಡಾಕ್ಯುಮೆಂಟರಿ ತೆಗೆಯಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಒಟ್ಟಾರೆ ೧೨ ಡಾಕ್ಯುಮೆಂಟರಿಗಳನ್ನು ತೆಗೆಯಬೇಕೆಂದಿದ್ದೇವೆ.

ಅದರಲ್ಲಿ ಮುಖ್ಯವಾಗಿ ಕೆಂಗಲ್ ಹನುಮಂತಯ್ಯನವರ ಮೇಲೆ, ಡಾ॥ ಶಿವರಾಮ ಕಾರಂತರ ಮೇಲೆ, ಡಾ॥ ಮಲ್ಲಿಕಾರ್ಜುನ ಮನ್ಸೂರ್ ಅವರ ಮೇಲೆ ಡಾಕ್ಯುಮೆಂಟರಿ ತೆಗೆಯಬೇಕೆಂದು ಯೋಚನೆ ಮಾಡಿದ್ದೇವೆ. ಡಾ॥ ಮಾಸ್ತಿ ವೆಂಕಟೇಶ ಐಯಂಗಾರ್ ಅವರ ಬಗ್ಗೆಯೂ ಸಾಕ್ಷ್ಯಚಿತ್ರ ತೆಗೆಯ ಬೇಕೆಂದು ಇದ್ದೇವೆ. ಆದರೆ ಅದಕ್ಕೆ ಅವರು ಒಪ್ಪುತ್ತಿಲ್ಲ. ಅವರು ಒಪ್ಪಿದರೆ ಅವರ ಮೇಲೂ ತೆಗೆಯ ಬೇಕೆಂದಿದ್ದೇವೆ. ಇವೆಲ್ಲಾ ಸಾಧ್ಯವಾಗುತ್ತದೆಂದು ನಾನು ನಂಬಿಕೆ ಇಟ್ಟುಕೊಂಡಿದ್ದೇನೆ. ಇದಲ್ಲದೇ ಇನ್ನೂ ಎಂಟು ವಿಷಯಗಳ ಬಗ್ಗೆ ಸಾಕ್ಷಿ ಚಿತ್ರಗಳನ್ನು ತೆಗೆದು ಇವನ್ನೆಲ್ಲಾ ವಿಡಿಯೊ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ತೋರಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದಲ್ಲದೆ ಹಿಂದೆ ತೆಗೆದಿದ್ದ ೫೦ ಸಾಕ್ಷ್ಯ ಚಿತ್ರಗಳು ಹಾಗೇ ಕೊಳೆಯುತ್ತಿದೆ. ಯಾರೂ ನೋಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ಸಾರಿ ಸಿನಿಮಾದಲ್ಲಿ ಹಾಕಿದರೆ ಮುಗಿದುಹೋಯಿತು, ಬೇರೆ ಕಡೆ ತೋರಿಸುತ್ತಿಲ್ಲ. ಆದ್ದ ರಿಂದ ಇದನ್ನೆಲ್ಲಾ ವಿಡಿಯೊ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ತೋರಿಸಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದನ್ನು ಮಾಡುತ್ತೇವೆ.

ಇನ್ನು ಚಲನಚಿತ್ರೋದ್ಯಮದ ಬಗ್ಗೆ ಈಗ ಹೇಳುತ್ತೇನೆ. ಈ ವರ್ಷಕ್ಕೆ ನಮ್ಮ ರಾಜ್ಯದಲ್ಲಿ ಕನ್ನಡ ಚಲನಚಿತ್ರಗಳು ಪ್ರಾರಂಭವಾಗಿ ೫೦ ವರ್ಷ ತುಂಬುತ್ತದೆ. ಈ ೫೦ ವರ್ಷ ತುಂಬುವ ಸಮ ಯದಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ೧೯೩೪ರಲ್ಲಿ ಏನು ಕನ್ನಡ ಚಲನಚಿತ್ರ ಪ್ರಪ್ರಥ ಮವಾಗಿ ಬಿಡುಗಡೆಯಾಯಿತು ಅಲ್ಲಿಂದ ಆದಿಯಾಗಿ ಪ್ರಶಸ್ತಿ ಪಡೆದಿರುವಚಿತ್ರಗಳನ್ನು ಪ್ರದರ್ಶನ ಮಾಡ ಬೇಕುಮತ್ತು ಈಗ ತಾನೇ ಮಾನ್ಯಮುಖ್ಯಮಂತ್ರಿಗಳುಪ್ರಕಟಣೆ ಮಾಡಿರುವ ಕಾರ್ಯಕ್ರಮದ ಪ್ರಕಾರ ಅವೆಲ್ಲವನ್ನೂ ಸಂಗ್ರಹಾಲಯದಲ್ಲಿ ಇಡಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದೇವೆ. ಮತ್ತೆ ಒಂದು ಪುಸ್ತಕವನ್ನೂ ಹೊರತರಬೇಕೆಂದಿದ್ದೇವೆ. ಇದಕ್ಕೆ ಸಂಪಾದಕ ಮಂಡಳಿಯನ್ನು ರಚನೆ ಮಾಡಿ ೫೦ ವರ್ಷಗಳ ಕರ್ನಾಟಕದ ಕನ್ನಡ ಚಲನಚಿತ್ರ ಬೆಳವಣಿಗೆ ಎಂದು ಒಂದು ಪುಸ್ತಕವನ್ನು ಬಿಡುಗಡೆ ಮಾಡಬೇಕು ಮತ್ತು ಇದರ ಜೊತೆಗೆ ಉತ್ಸವಗಳನ್ನೂ ಮಾಡಬೇಕು ಎಂದು ಅದಕ್ಕೆ ಎರಡು ಲಕ್ಷ ರೂಪಾಯಿಗಳನ್ನು ತೆಗೆದಿಡುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದೇವೆ. ಅಧಿಕಾರಿಗಳ ಜೊತೆ ಈ ವಿಷಯದಲ್ಲಿ ಚರ್ಚೆ ಮಾಡಿ ನಿರ್ಣಯ ತೆಗೆದುಕೊಂಡಿದ್ದೇನೆ. ಇವತ್ತು ಕನ್ನಡ ನಾಡಿನಲ್ಲಿ ಕನ್ನಡ ಚಿತ್ರಗಳು ಪ್ರದರ್ಶನ ಆಗಬೇಕಾಗಿದ್ದರೆ ಕಾಡಿ ಬೇಡಬೇಕಾಗಿದೆ. ಈ ಕಾಡಿಬೇಡುವ ಪರಿಸ್ಥಿತಿ ತಪ್ಪಬೇಕೆಂದು ಒಂದು ಆಜ್ಞೆ ಹೊರಡಿಸ ಬೇಕೆಂದಿದ್ದೇವೆ. ಸಾಧ್ಯವಾದರೆ ಇದನ್ನು ಮಸೂದೆ ಮೂಲಕ

ಈ ಅಧಿವೇಶನದಲ್ಲೇ ತರುತ್ತೇನೆ. ಅದೇನೆಂದರೆ ೬ ತಿಂಗಳ ಕಾಲ ಕಡ್ಡಾಯವಾಗಿ ಕನ್ನಡ ಚಲನ ಚಿತ್ರಗಳನ್ನು ಪ್ರದರ್ಶನ ಮಾಡಬೇಕು ಎಂಬುದು. ೫೦ ವರ್ಷಗಳು ತುಂಬಿರುವ ಕನ್ನಡ ಚಿತ್ರೋದ್ಯಮ ಏನಿದೆ ಇದು ಸತ್ತುಹೋಗಬಾರದು. ಇನ್ನೂ ಹೆಚ್ಚಿಗೆ ಬೆಳೆಯಬೇಕು ಎಂಬ ಅಭಿಪ್ರಾಯ ನಮ್ಮದು. ಭಾರತ ದೇಶದಲ್ಲಿ ಉತ್ತಮ ಚಿತ್ರಗಳನ್ನು ಕನ್ನಡಿಗರು ಕೊಟ್ಟಿದ್ದಾರೆ. ಉತ್ತಮ ಚಿತ್ರಗಳನ್ನು ತಯಾರು ಮಾಡಿದ್ದಾರೆ. ಉತ್ತಮ ಕಲಾವಿದರಿದ್ದಾರೆ. ಈ ದೃಷ್ಟಿಯಿಂದ ಸಾಧ್ಯವಾದರೆ ಚಲನಚಿತ್ರ ವಸ್ತು ಸಂಗ್ರಹಾಲಯ ಏನು ಮಾಡಬೇಕೆಂದಿದ್ದೇವೆ ಅದರ ಜೊತೆಗೆ ಒಂದು ಪರ್ಮನೆಂಟ್ ಎಗ್ಸಿಬಿಷನ್ ಕೂಡ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಕನ್ನಡ ಚಿತ್ರ ಪ್ರಾರಂಭವಾದ ೫೦ನೇ ವರ್ಷದ ನೆನಪಿನ ಕಾಣಿಕೆಯಾಗಿ ಎಗ್ಸಿಬಿಷನ್ ಮಾಡಬೇಕು, ಪುಸ್ತಕವನ್ನು ಬಿಡುಗಡೆ ಮಾಡಬೇಕು. ಮತ್ತು ೬ ತಿಂಗಳುಗಳಕಾಲ ಕನ್ನಡ ಚಿತ್ರಗಳನ್ನು ಪ್ರದರ್ಶಿಸಬೇಕು—ಈ ಕೆಲಸಗಳನ್ನು ಈ ವರ್ಷ ಕಾರ್ಯಗತ ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಇದೇ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳುತ್ತೇನೆ. ಕಂಠೀರವ ಸ್ಟುಡಿಯೋ ರಾಜ್ಯ ಸರ್ಕಾರದ ಕೈಯಲ್ಲಿದೆ. ಅಲ್ಲಿಗೆ ೨೦ ಲಕ್ಷ ರೂಪಾಯಿಗಳನ್ನು ಹೊಸದಾಗಿ ಖರ್ಚು ಮಾಡಿ ಸಿನಿಮಾ ಆಟೋಗ್ರಫಿ ಎಕ್ವಿಪ್‌ಮೆಂಟ್ಸ್ ತರಿಸುತ್ತಿದ್ದೇವೆ. ಮಿನಿ ಸ್ಲೈಡ್ಸ್ ತರಿಸುತ್ತಿದ್ದೇವೆ, ಮೊಬೈಲ್ ವ್ಯಾನ್ ತರಿಸುತ್ತಿದ್ದೇವೆ. ಅದರಿಂದ ಒಳಾಂಗಣ ಮತ್ತು ಹೊರಾಂಗಣ ಚಿತ್ರೀಕರಣಕ್ಕೆ ಉಪಯೋಗವಾಗುತ್ತದೆ. ಆದ್ದರಿಂದ ಈ ಎಕ್ವಿಪ್‌ಮೆಂಟ್ಸ್ ತರಿಸುತ್ತೀದ್ದೇವೆ. ಇದು ಬಹಳ ದಿನಗಳ ಬೇಡಿಕೆಯಾಗಿರುವುದರಿಂದ ಇದನ್ನು ತರಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಮತ್ತು ಏರ್‌ಕಂಡೀಷನಿಂಗ್ ಮಾಡುವುದು, ೧೬ ಎಂ.ಎಂ.ನಿಂದ ೩೫ ಎಂ.ಎಂ. ಫಿಲ್ಮ್ ಪ್ರೊಡಕ್ಷನ್ ಮಾಡುವುದು, ಇದರ ಜೊತೆಗೆ ಒಂದು ಎಡಿಟಿಂಗ್ ಸ್ಟುಡಿಯೋವನ್ನು ಪ್ರಾರಂಭ ಮಾಡುತ್ತೇವೆ. ಈಗ ಎಡಿಟಿಂಗ್ ಮಾಡಬೇಕಾದರೆ ಮದ್ರಾಸಿಗೆ ಹೋಗಿ ಮಾಡಿಕೊಂಡುಬರುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ, ಇಲ್ಲೇ ಅದರಲ್ಲೂ ಬೆಂಗಳೂರಿನಲ್ಲೇ ನಾಲ್ಕು ಕೊಠಡಿಗಳನ್ನು ಮಾಡಿ ಎಡಿಟಿಂಗ್‌ಗೆ ವ್ಯವಸ್ಥೆ ಮಾಡುತ್ತಿದ್ದೇವೆ. ಮಾನ್ಯ ಮೊಯಿಲಿಯವರು ಚಲನಚಿತ್ರ ನಗರ ಮಾಡುತ್ತೇವೆಂದು ಆಸೆ ತೋರಿಸಿ ಮಾಡಲಿಲ್ಲ ಎಂದು ಹೇಳಿದರು. ಅದು ನಿಜ. ಆದರೆ ನಾವು ಹಾಲೆವುಡ್ ಮಾಡುತ್ತೇವೆಂದು ಹೇಳಲಿಲ್ಲ. ಹಿಂದಿದ್ದ ಮಂತ್ರಿಗಳು ಅದನ್ನು ಹೇಳಿದ್ದರೇ ಹೊರತು ನಾನು ಹೇಳಿರಲಿಲ್ಲ. ಚಲನಚಿತ್ರ ನಗರವನ್ನು ಏತಕ್ಕೆ ಮಾಡಲಿಲ್ಲ ಎಂದರೆ ೧೯೬೯-೭೦ರಲ್ಲಿ ಈ ಬಗ್ಗೆ ಸದನದಲ್ಲಿ ಉತ್ತರ ಕೊಟ್ಟ ಮೇಲೆ ಒಂದು ಸೆಮಿನಾರ್ ನಡೆಸಿದೆವು. ಆ ಸೆಮಿನಾರ್‌ನಲ್ಲಿ ಪ್ರತಿಯೊಬ್ಬರೂ ಸಿನಿಮಾನಗರ ಮಾಡುವುದು ಬೇಡ, ಮಹಾರಾಷ್ಟ್ರದಲ್ಲಿ ಚಲನಚಿತ್ರ ನಗರ ಮಾಡಿ ಕೈಸುಟ್ಟುಕೊಂಡಿದ್ದಾರೆ, ಅದರಿಂದ ಯಾರಿಗೂ ಲಾಭವಾಗಿಲ್ಲ, ಆದ್ದರಿಂದ ದಯವಿಟ್ಟು ಅದನ್ನು ಮಾಡಬೇಡಿ ಅದರ ಬದಲು ಫಿಲ್ಮ್ ಇನ್‌ಸ್ಟಿಟ್ಯೂಟ್ ಬೇಕಾದರೆ ಮಾಡಿ ಎಂದು ಹೇಳಿದರು. ಈಗಾಗಲೇ ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್ ಪ್ರಾರಂಭವಾಗಿದ್ದು ಅದಕ್ಕೆ ಸರ್ಕಾರ ಹಣ ಕೊಡುತ್ತಿದೆ. ಅವರಿಗೆ ೧೦ ಎಕರೆ ಜಮೀನನ್ನು ಕೊಡುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಷಯದಲ್ಲಿ ಪ್ರೋಸೆಸ್ ಆಗಿದೆ. ಒಂದೂವರೆ ಎರಡು ತಿಂಗಳೊಳಗೆ ಅವರಿಗೆ ೧೦ ಎಕರೆ ಜಮೀನನ್ನು ಪುಕ್ಕಟೆಯಾಗಿ ಕೊಡುತ್ತಿದ್ದೇವೆ. ಒಂದು ರೂಪಾಯಿ ಬಾಡಿಗೆ ತೆಗೆದುಕೊಂಡು ೯೯ ವರ್ಷ ಲೀಸ್ ಮೇಲೆ ಆದರ್ಶ ಇನ್‌ಸ್ಟಿಟ್ಯೂಟಿಗೆ ಕೊಡುತ್ತಿದ್ದೇವೆ. ಅದೇ ತರಹ ಬೇರೆಯವರು ಮುಂದೆ ಬಂದು ಸ್ಟುಡಿಯೋ ಮಾಡುತ್ತೇವೆಂದರೆ ಅವರಿಗೂ ಪ್ರೋತ್ಸಾಹ ಕೊಡುತ್ತೇವೆ. ೩೫೦ ಎಕರೆ ನಮ್ಮ ಜಮೀನಿದೆ. ಯಾರಾದರೂ ಅಲ್ಲಿ ಸ್ಟುಡಿಯೋ ಮಾಡುತ್ತೇವೆಂದು ಮುಂದೆ ಬಂದು ತಕ್ಕ ಹಣವನ್ನು ಬಂಡವಾಳವಾಗಿ ಹಾಕುತ್ತೇವೆಂದರೆ, ನಮಗೆ ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟರೆ, ಖಂಡಿತ ಅಂಥ ಸ್ಟುಡಿಯೊಗಳಿಗೆ ಬಹಳ ಕಡಿಮೆ ದರದಲ್ಲಿ ಜಮೀನು ಕೊಡಲು ತಯಾರಾಗಿದ್ದೇವೆ. ಚಲನಚಿತ್ರ ಉದ್ಯಮವನ್ನು ಬೆಳೆಸಬೇಕು ಎಂಬ ಒಂದೇ ಒಂದು ಕಾರಣದಿಂದ ಈ ರಿಯಾಯಿತಿ ಕೊಡುತ್ತಿದ್ದೇವೆ. ನಾವು ಹಲವಾರು ಜನರಿಗೆ ಪತ್ರಗಳನ್ನು ಬರೆದು ಕರ್ನಾಟಕಕ್ಕೆ ಬಂದು ಸ್ಟುಡಿಯೋ ಸ್ಥಾಪನೆ ಮಾಡಿ, ಇಲ್ಲಿ ಒಳ್ಳೆಯ ವಾತಾವರಣ ಇದೆ ಎಂದು ಕೈ ನೀಡಿ ಕರೆಯುತ್ತಿದ್ದೇವೆ. ಚಲನಚಿತ್ರ ನಿರ್ಮಾಣಕ್ಕೆ ಎಲ್ಲ ರೀತಿಯ ವಾತಾವರಣ ಕರ್ನಾಟಕದಲ್ಲಿದೆ, ಬೆಂಗಳೂರು ನಗರ ಉತ್ತಮವಾದ ನಗರ ಎಂದು ಹೇಳಿದ್ದೇವೆ. ಅದೇ ತರಹ ಮೈಸೂರಿನಲ್ಲಿ ಕೂಡ ಪ್ರೋತ್ಸಾಹ ಕೊಡುವುದಕ್ಕೆ ತಯಾರಾಗಿದ್ದೇವೆ, ಈ ಎರಡು ನಗರದಲ್ಲಿ ಚಲನಚಿತ್ರ ಉದ್ಯಮಕ್ಕೆ ಪ್ರೋತ್ಸಾಹ ಕೊಡುತ್ತಿದ್ದೇವೆ. ಅದರಲ್ಲೂ ಆದ್ಯತೆ ಮೇರೆಗೆ ಬೆಂಗಳೂರಿನಲ್ಲಿ ಕೊಡುತ್ತೇವೆ. ಏತಕ್ಕೆಂದರೆ ಅವರು ಏರ್ ಪೋರ್ಟ್ ಇರಬೇಕೆಂದು ಕೇಳುತ್ತಾರೆ. ಆದ್ದರಿಂದ ೩೫೦ ಎಕರೆ ಜಮೀನಿನಲ್ಲಿ ಅರ್ಧ ದರಕ್ಕೆ ಜಮೀನು ಕೊಟ್ಟು, ಪ್ರೋತ್ಸಾಹ ಕೊಡುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತೇ

ದ್ದೇನೆ. ಚಲನಚಿತ್ರ ನಗರ ಮಾಡಬೇಕೆಂದು ಏನು ಹೇಳಿದ್ದೆವು ಅದನ್ನು ಪೂರ್ಣವಾಗಿ ಕೈಬಿಟ್ಟಿದ್ದೇವೆಂದು ಹೇಳುವುದಿಲ್ಲ. ಆದರೆ ಅದು ಸ್ವಲ್ಪ ತಡವಾಗುತ್ತಿದೆ. ತಜ್ಞರ ಅಭಿಪ್ರಾಯ ಹೀಗಿರುವುದರಿಂದ ತಡವಾಗಿದೆಯೇ ಹೊರತು ಬೇರೆ ಕಾರಣದಿಂದಲ್ಲ ಎಂದು ಈ ಸದನಕ್ಕೆ ತಿಳಿಸುತ್ತಿದ್ದೇನೆ. ಈಗ ಇನ್ನೊಂದು ಸ್ಟುಡಿಯೋ ಫ್ಲೋರ್ ಕಟ್ಟಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಈಗ ಎರಡು ಫ್ಲೋರ್ ಸಾಕಾಗದಿರುವುದರಿಂದ ಇದನ್ನು ಮಾಡುತ್ತಿದ್ದೇವೆ. ಕಾಲ್ ಶೀಟ್ಸ್ ಹೆಚ್ಚಾಗಿ ಬರುತ್ತಿದ್ದು ಈಗಾಗಲೇ ೩೬೫ ಬಂದಿವೆ. ಒಂದು ವರ್ಷದಲ್ಲಿ ೩೬೫ ಕಾಲ್‌ಶೀಟ್ಸ್ ಯಾವಾಗಲೂ ಆಗುತ್ತಿರಲಿಲ್ಲ. ಈಗ ದೊಡ್ಡ ಪ್ರಮಾಣದಲ್ಲಿ ಇದು ನಡೆದಿರುವುದು ಮನವರಿಕೆಯಾಗಿದೆ. ಆದ್ದರಿಂದ ಬೇಡಿಕೆಗೆ ಅನುಗುಣವಾಗಿ ಸ್ಟುಡಿಯೋ ಕೊಡಬೇಕೆಂದು ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತೆ ಪ್ರತಿಯೊಂದು ಜಿಲ್ಲೆಯಲ್ಲಿ ಟೆಲಿಪ್ರಿಂಟರ್ ಸ್ಥಾಪಿಸಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ನಾನು ಬಂದಮೇಲೆ ಕೊಡಗು ಜಿಲ್ಲೆ ಸೇರಿ ನಾಲ್ಕು ಕಡೆ ಮಾಡಿದ್ದೇನೆ. ಕೋಲಾರ ಮತ್ತು ಮಂಡ್ಯದಲ್ಲಿ ಆಗಬೇಕಾಗಿದೆ. ದಾವಣಗೆರೆ ನಗರದಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಮಾಡಬೇಕೆಂದಿದ್ದೇವೆ. ಧಾರವಾಡದಲ್ಲಿದೆ, ಆದರೆ ಹುಬ್ಬಳ್ಳಿಯಲ್ಲಿಲ್ಲ.

ಇದೇ ರೀತಿ ಮುಂದೆ ಎಲ್ಲಾ ಜಿಲ್ಲೆಗಳಲ್ಲೂ ಟೆಲಿಪ್ರಿಂಟ್‌ಗಳ ವ್ಯವಸ್ಥೆಯಾಗಬೇಕು ಮತ್ತು ಇದರ ಸೇವೆ ಪತ್ರಿಕಾಕರ್ತರಿಗೆ ಸಿಗಬೇಕೆಂದು ಹೇಳಿ ಸ್ಥಾಪನೆ ಮಾಡಿದ್ದೇವೆ. ಇದರಿಂದಾಗಿ ಪತ್ರಿಕಾಕರ್ತರು ಸುಲಭವಾಗಿ ಸಂಪರ್ಕ ಮಾಡುವುದಕ್ಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಸಂಪರ್ಕ ಮಂತ್ರಿಗಳ ಊರಾದ ರಾಯಚೂರಿನ ಬಗ್ಗೆ ಹೇಳಲಿಲ್ಲ.

ಶ್ರೀ ಎಂ. ರಘುಪತಿ.— ರಾಯಚೂರ್ ಬಗ್ಗೆ ಆರ್ಡರ್ ಮಾಡಿದ್ದೇವೆ. ಅದೂ ಕೆಲವು ದಿವಸಗಳಲ್ಲಿ ಆಗುತ್ತದೆ. ಆದ್ದರಿಂದ ಆ ಬಗ್ಗೆ ಹೇಳಲಿಲ್ಲ. ಇನ್ನು ಪತ್ರಿಕಾ ಭವನ ಕಟ್ಟುತ್ತೇವೆಂದು ವಚನ ಕೊಟ್ಟಿದ್ದೆವು. ಆದರೆ ಸ್ಥಳವನ್ನು ಒದಗಿಸುವುದಕ್ಕೆ ಸ್ವಲ್ಪ ತಡ ಆಗಿದೆ. ಈಗ ಆ ಬಗ್ಗೆ ಎಲ್ಲಾ ಸಿದ್ಧತೆಗಳು ಆಗಿದ್ದು ಇನ್ನು ಎರಡು ತಿಂಗಳ ಒಳಗೆ ಪತ್ರಿಕಾ ಭವನ ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಾನ್ಯ ವಿರಪ್ಪ ಮೊಯ್ಲಿಯವರು ಪ್ರೀಮಿಯರ್ ಸ್ಟುಡಿಯೋ ಬಗ್ಗೆ ಹೇಳಿದ್ದಾರೆ. ಅಲ್ಲಿ ಸಿನಿಮಾ ಟೋಗ್ರಫಿ ರೂಲ್ಸ್‌ನ್ನು ಏನಾದರೂ ವಯಲೇಟ್ ಮಾಡಿದ್ದಾರೆಯೋ ಎಂಬುದನ್ನು ನೋಡಬೇಕೆಂದು ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದೇವೆ. ಅವರು ಇಂಡಸ್ಟ್ರಿಯಲ್ ಹಾಗೂ ಕಮರ್ಶಿಯಲ್ ಜೋನ್‌ನ್ನು ಏನಾದರೂ ವಯಲೇಟ್ ಮಾಡಿದ್ದಾರೆಯೋ ಎಂಬುದನ್ನು ನೋಡಿ ಎಂದು ಪುರಸಭೆ ಅಧಿಕಾರಿಗಳಿಗೆ ಪತ್ರ ಬರೆದಿದ್ದೇವೆ. ಅವರಿಂದ ಆ ಬಗ್ಗೆ ವಿಷಯವನ್ನು ತರಿಸಿಕೊಳ್ಳುತ್ತಿದ್ದೇವೆ. ಈ ಪ್ರೀಮಿಯರ್ ಸ್ಟುಡಿಯೋವನ್ನು ಸ್ಟುಡಿಯೋ ವಿಷಯಕ್ಕೆ ಮಾತ್ರ ಉಪಯೋಗಿಸಬೇಕೇ ಹೊರತು ಬೇರೆ ಯಾವುದಕ್ಕೂ ಉಪಯೋಗ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತೇನೆ. ಅದನ್ನು ಬೇರೆ ಕಾರಣಕ್ಕೆ ಉಪಯೋಗ ಮಾಡಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಏನು ಅಲ್ಲಿ ಅಥಾರಿಟಿಯವರು ನೋಟೀಸ್ ಕೊಟ್ಟಿದ್ದಾರೆ ಅದನ್ನು ಜಾರಿಗೆ ಕೊಟ್ಟರೇ ಎಲ್ಲಾ ಗೊತ್ತಾಗುತ್ತದೆ.

ಶ್ರೀ ಎಂ. ರಘುಪತಿ.—ನಾನು ಆ ಬಗ್ಗೆ ಮೈಸೂರಿಗೆ ಹೋಗಿ ಚರ್ಚೆ ಮಾಡಿದ್ದೇವೆ. ಅದನ್ನು ಅವರು ನಡೆಸುವುದಕ್ಕೆ ಆಗುವುದಿಲ್ಲವೆಂದರೆ ಅದನ್ನು ಸರ್ಕಾರ ವಹಿಸಿಕೊಂಡು ನಡೆಸುವುದಕೆ ಹಿಂಜರಿಯುವುದಿಲ್ಲವೆಂಬ ಮಾತನ್ನು ನಾನು ಹೇಳುತ್ತೇನೆ. ಮತ್ತು ಯಾರು ಕಾನೂನಿನ ಉಲ್ಲಂಘನೆ ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ. ಇಷ್ಟು ಹೇಳಿ ಇನ್ನು ಟಿ. ವಿ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಮೊಯ್ಲಿಯವರು ಮಾತನಾಡುತ್ತಾ ಬಹಳ ಆಕ್ರೋಶದಿಂದ ಒಂದು ಮಾತನ್ನು ಹೇಳಿದರು. ಒಳ್ಳೆಯ ಉದ್ದೇಶದಿಂದಲೇ ಅವರು ಹೇಳಿರಬಹುದು. ಇದು ಒಂದು ರಾಷ್ಟ್ರಘಾತುಕ ಕೆಲಸ ಎಂದು ಹೇಳಿದರು. ಆದರೆ ಇವತ್ತು ನಾನು ಹೇಳುತ್ತೇನೆ, ಆ ಒಂದು ಹೋರಾಟದ ಬಲದಿಂದ, ಕನ್ನಡ ಕಲಾವಿದರ ಒಂದು ಬಲದಿಂದ ಅದು ಬಂದಿತು ಎಂದರೆ ತಪ್ಪಾಗಲಾರದು. ಅವರ ಒಂದು ಹೋರಾಟದ ಫಲದಿಂದ ಮತ್ತು ನನ್ನ ಒಂದು ಸತತ ಪ್ರಯತ್ನದಿಂದ ನಮ್ಮ ನಮ್ಮ ಸಂಸದೀಯ ಸದಸ್ಯರ ಪ್ರಯತ್ನದಿಂದ, ಮಾನ್ಯ ಮುಖ್ಯಮಂತ್ರಿಯವರು ಪ್ರಧಾನಿಯವರಿಗೆ ಬರೆದ ಪತ್ರದ ಫಲದಿಂದ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಈ

ಬಗ್ಗೆ ಪತ್ರವನ್ನು ಬರೆದಿದ್ದೇನೆಂದು ಹೇಳಿದರು. ಅದರ ಒಂದು ಫಲದಿಂದಾಗಿ ಇವತ್ತು ಬಜೆಟ್ಟಿನಲ್ಲಿ ಆ ಆ ಬಗ್ಗೆ ಕೇಂದ್ರದವರು ಒದಗಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಕಾರ್ಯವನ್ನು ನಾನು ಹೃತ್ಪೂರ್ವಕದಿಂದ ಸ್ವಾಗತ ಮಾಡುತ್ತೇನೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಮೊಯ್ಲಿಯವರಿಗೆ ಹೇಳುತ್ತಿದ್ದೇನೆ. ಮಾನ್ಯ ಮೊಯ್ಲಿಯವರು ನಮ್ಮದು ರಾಷ್ಟ್ರಘಾತುಕ ಕೆಲಸ ಎಂದು ಹೇಳಿದ್ದು ಸರಿಯೇ? ನವೆಂಬರ್ ೧ನೇ ತಾರೀಖಿನ ಒಳಗೆ ಕನ್ನಡ ಕನ್ನಡ ಕಾರ್ಯಕ್ರಮ ಜಾರಿಗೆ ಬರದಿದ್ದರೆ ಉಗ್ರ ಹೋರಾಟ ಕರ್ನಾಟಕದಲ್ಲಿ ಆಗುತ್ತದೆಂದು ನಾನು ಹೇಳಿದ್ದೆ. ಆ ಒಂದು ಸಂದರ್ಭದಲ್ಲಿ ಆ ಮಾತನ್ನು ಹೇಳದೆ ಇದ್ದಿದ್ದರೆ ಕೇಂದ್ರ ಸರ್ಕಾರದವರು ಇಷ್ಟು ಎಚ್ಚೆತ್ತುಕೊಂಡು ಕೆಲಸ ಮಾಡುತ್ತಿರಲಿಲ್ಲ. ೧೯ನೇ ತಾರೀಖು ಮಾನ್ಯ ಎಚ್. ಕೆ. ಎಲ್. ಭಗತ್ ಅವರು ಬೆಂಗಳೂರಿಗೆ ಬಂದಿದ್ದಾಗ ನವೆಂಬರ್ ೧ನೇ ತಾರೀಖಿನಿಂದ ಕನ್ನಡ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿ ಎಂದು ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಅವರಿಗೆ ಹೇಳಿದರು. ಅದಕ್ಕೆ ಅವರು ೧ನೇ ತಾರೀಖು ಆಗುವುದಿಲ್ಲ ಸ್ವಲ್ಪ ತಡ ಆಗುತ್ತದೆ ಎಂದು ಹೇಳಿದಾಗ ಎಷ್ಟು ದಿನ ತಡ ಆಗಬಹುದೆಂದು ಮುಖ್ಯ ಮಂತ್ರಿಯವರು ಕೇಳಿದರು. ಆಗ ಅದಕ್ಕೆ ೨ ವಾರಗಳು ಆಗಬಹುದೆಂದಾಗ, ಎಂದರೆ ೧೪ನೇ ತಾರೀಖು ಪಂಡಿತ್ ಜವಹರಲಾಲ್ ನೆಹರೂರವರ ಹುಟ್ಟಿದ ಹಬ್ಬದ ದಿನ ಪ್ರಾರಂಭ ಮಾಡಬಹುದಲ್ಲವೇ ಎಂದು ಕೇಳಿದರು. ಆ ನಂತರ ಆ ಬಗ್ಗೆ ಯೋಚನೆ ಮಾಡುತ್ತೇವೆ ಎಂದು ಅದರು ದೆಹಲಿಗೆ ಹೊರಟರು. ಆ ನಂತರ ೧೯ನೇ ತಾರೀಖು, ರಾಷ್ಟ್ರದ ಪ್ರಧಾನಿಯವರ ಹುಟ್ಟಿದ ಹಬ್ಬದ ದಿವಸದಂದು ಪ್ರಾರಂಭ ಮಾಡುತ್ತೇವೆಂದು ಉತ್ತರ ಬಂತು. ಪಂಡಿತ್ ನೆಹರೂರವರು ಕೇವಲ ರಾಷ್ಟ್ರದ ನಾಯಕರಲ್ಲ, ಅವರು ವಿಶ್ವದ ನಾಯಕರು, ಅವರ ಹುಟ್ಟಿದ ಹಬ್ಬದಂದು ಮಾಡಿದ್ದರೆ ಏನಿತ್ತು. ಅದು ಹೋಗಲಿ ನವೆಂಬರ್ ೧, ಕನ್ನಡಿಗರ ಹೆಮ್ಮೆಯ ಹಾಗೂ ಸಂತೋಷದ ದಿನ. ಅವತ್ತು ಕೂಡಾ ಆಗಲಿಲ್ಲ. ಈ ಬಗ್ಗೆ ಮೊನ್ನೆಯ ವಿರೋಧ ಪಕ್ಷದ ನಾಯಕರು ಆ ಸಭೆಯಲ್ಲಿ ನಿಮಗೆ ಶಕ್ತಿ ಇಲ್ಲ, ತಾವು ರಾಜೀನಾಮೆ ಕೊಡಬೇಕು, ನಿಮಗೆ ಧೈರ್ಯವಿಲ್ಲ ಎಂದೆಲ್ಲಾ ಹೇಳಿದರು. ಇಷ್ಟೆಲ್ಲಾ ಆದಮೇಲೆ ೧೯ನೇ ತಾರೀಖು ಕನ್ನಡ ಕಾರ್ಯಕ್ರಮ ಪ್ರಾರಂಭವಾಯಿತು. ಇನ್ನು ಸ್ವಲ್ಪ ಕಾಲಾವಧಿಯಲ್ಲಿ ಪರಿಪೂರ್ಣ ಸ್ಟುಡಿಯೋ ಸಿಗುತ್ತದೆ. ಆ ಬಗ್ಗೆ ನಾನು ಮೊನ್ನೆ ಹೋಗಿ ಕೆಲಸ ಹೇಗೆ ಸಾಗುತ್ತಿದೆ ಎಂದು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದ್ದು ೧೯೮೪ರ ಅಂತ್ಯದಲ್ಲಿ ಅಲ್ಲಿ ಕೆಲಸ ಪೂರ್ತಿಗೊಳ್ಳುತ್ತದೆ. ಈಗ ಕೇಂದ್ರದವರು ಹಣವನ್ನು ಒದಗಿಸಿರುವುದರಿಂದ ಈ ಕೆಲಸ ಪೂರ್ತಿಗೊಂಡು ಕನ್ನಡನಾಡಿನ ಜನತೆಯ ಬಹು ದಿವಸದ ಬಯಕೆ ಈಡೇರುತ್ತದೆಂದು ಹೇಳುತ್ತೇನೆ.

ಇನ್ನು ಹರಿಜನಗಿರಿಜನರು ಎಲ್ಲಿ ಹೆಚ್ಚು ವಾಸ ಮಾಡುತ್ತಾರೆ ಅಂತಹ ಸ್ಥಳಗಳಿಗೆ ದೂರದರ್ಶನ ಸೆಟ್‌ಗಳನ್ನು ತೆಗೆದುಕೊಂಡು ಹೋಗಿ ಸ್ಥಾಪನೆ ಮಾಡಿ ಇತರ ಯಾವ ರಾಜ್ಯದಲ್ಲೂ ತರದಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇವತ್ತು ದೂರದರ್ಶನ ಕೇವಲ ಶ್ರೀಮಂತರ ಸೊತ್ತು ಆಗಬಾರದು ಎಂದು ಹೇಳಿ ಇದನ್ನು ಬಡವರೂ ನೋಡಬೇಕೆಂದು ಹೇಳಿ ಬೆಂಗಳೂರು ನಗರದಲ್ಲಿ ೧೪ ಸೆಟ್‌ಗಳನ್ನು ಇಟ್ಟಿದ್ದೇವೆ. ಮುಂದೆ ರಾಜ್ಯದಲ್ಲಿ ಸಂಪೂರ್ಣ ೧೧ ಲೋ ಪವರ್ ಟ್ರಾನ್ಸ್‌ಮಿಷನ್‌ಗಳನ್ನು ಏನು ಕೇಂದ್ರ ಸರ್ಕಾರ ಸ್ಥಾಪನೆ ಮಾಡುತ್ತದೆ, ಆನಂತರ ಸುಮಾರು ೩೦೦ ಸೆಟ್‌ಗಳನ್ನು ಖರೀದಿ ಮಾಡಿ ಈ ರೀತಿಯ ಸ್ಥಳಗಳಲ್ಲಿ ಇಡಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಈಗ ಏನು ೧೧ ಕೇಂದ್ರಗಳನ್ನು ಕೊಡುತ್ತಿದ್ದಾರೆ ಅದರ ಜೊತೆಗೆ ಇನ್ನೂ ೩ ಕೇಂದ್ರಗಳನ್ನು ಒದಗಿಸಬೇಕೆಂದು ನಾವು ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಈ ಮೂರನ್ನು ಹಾಸನ, ಉತ್ತರ ಕನ್ನಡದ ಕಾರವಾರ ಹಾಗೂ ಚಿಕ್ಕಮಗಳೂರಿಗೆ ಕೊಡಬೇಕೆಂದು ಹೇಳಿದ್ದೇವೆ. ಹಾಗೂ ಈಗ ಕೊಟ್ಟಿರತಕ್ಕ ೧೧ ಕೇಂದ್ರಗಳು ಈ ರೀತಿ ಇವೆ. ಹುಬ್ಬಳ್ಳಿ-ಧಾರವಾಡ, ಮೈಸೂರು ಮಂಗಳೂರು, ಬೆಳಗಾವಿ ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಬಿಜಾಪುರ, ರಾಯಚೂರು, ಗದಗ್-ಬೆಟಗೇರಿ, ಹೊಸಪೇಟೆ. ಹಾಗೂ ಇನ್ನೂ ೫ ಕೇಂದ್ರಗಳನ್ನು, ಮಂಡ್ಯ, ಕೋಲಾರ, ಹಾಸನ, ಚಿಕ್ಕಮಂಗಳೂರು, ಕಾರವಾರದಲ್ಲಿ ಸ್ಥಾಪಿಸಬೇಕೆಂದು ನಾವು ಕೇಂದ್ರಕ್ಕೆ ಬರೆದಿದ್ದೇವೆ. ಇನ್ನು ಗುಲ್ಬರ್ಗದಲ್ಲಿ ಸುಮಾರು ೨೪೦ ಕಮ್ಯೂನಿಟಿ ಟಿ.ವಿ. ಸೆಟ್‌ಗಳು ಇವೆ. ಅವುಗಳನ್ನು ಏಪ್ರಿಲ್ ತಿಂಗಳಿಂದ ಸರ್ಕಾರವೇ ವಹಿಸಿಕೊಂಡು ಇವುಗಳ ಉಸ್ತುವಾರಿ ಹಾಗೂ ರಿಪೇರಿ ಕೆಲಸವನ್ನು ನಮ್ಮ ಇಲಾಖೆ ವಹಿಸಿಕೊಳ್ಳುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವೀಡಿಯೋಗಳನ್ನು ಅಕ್ರಮವಾಗಿ ಪ್ರದರ್ಶನ ನಡೆಸುತ್ತಿರುವುದರಿಂದ ಸಿನಿಮಾಗಳಿಗೆ ಬಹಳ ಮಾರಕವಾಗುತ್ತಿದೆ ಎನ್ನುವ ದೂರುಗಳು ಬರುತ್ತಿವೆ. ಆ ರೀತಿಯ ದೂರುಗಳನ್ನು ನಾವು ಗಮನಕ್ಕೆ ತೆಗೆದುಕೊಂಡು ಸಾಧ್ಯವಾದರೆ ಇದೇ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತರುತ್ತಿದ್ದೇವೆ.

ವೀಡಿಯೋಗಳ ಪ್ರದರ್ಶನದ ಮೇಲೆ ನಿಯಂತ್ರಣ ಹಾಕಲಿಕ್ಕೆ ಕಾನೂನು ತರುತ್ತಿದ್ದೇವೆ. ವೀಡಿಯೋಗಳು ಯಾವ ಪರಿಮಿತಿಯೊಳಗೆ ಕೆಲಸವನ್ನು ಮಾಡಬೇಕೋ ಆ ರೀತಿಯಲ್ಲಿ ಮಾಡಲಿಕ್ಕೆ ಅವಕಾಶವಿರುತ್ತದೆ ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಪಂಪಾಪತಿ.—ಅಶ್ಲೀಲ ಚಿತ್ರ ಪ್ರದರ್ಶನವನ್ನು ತಡೆಗಟ್ಟಬೇಕು.

ಶ್ರೀ ಎಂ. ಮಲ್ಲಪ್ಪ.—ಲೈಂಗಿಕ ಚಿತ್ರಗಳನ್ನು ತೋರಿಸಿ ಯುವಕರನ್ನು ಅಡ್ಡದಾರಿಗೆ ಎಳೆಯತಕ್ಕವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದನ್ನು ನೋಡಲಿಕ್ಕೆ ವಯಸ್ಸಾದವರೇ ಹೋಗುತ್ತಿದ್ದಾರೆಂದು ಕೇಳಿದ್ದೇನೆ. ಆದ್ದರಿಂದ, ಅಂಥ ಪ್ರದರ್ಶನಗಳನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.— ಸಿನಿಮಾ ಹೆಸರು ಇರುವುದು ಒಂದು, ಅದಕ್ಕೆ ಬೇರೆ ಹೆಸರು ಕೊಟ್ಟು ಪ್ರದರ್ಶನಗಳು ನಡೆಯುತ್ತಿವೆ. ಅಲ್ಲದೆ, ಅಶ್ಲೀಲ ಭಿತ್ತಿಪತ್ರಗಳು, ವಾಲ್‌ಪೋಸ್ಟರ್ಸ್ ಮಾಡುತ್ತಿದ್ದಾರೆ. ಅಂಥಾದ್ದನ್ನು ಸಂಪೂರ್ಣ ತೆಗೆದುಹಾಕಬೇಕು, ಅಂತಹ ಪ್ರದರ್ಶನಗಳನ್ನು ಮಾಡಬಾರದು, ಅದನ್ನು ನಿಷೇಧ ಮಾಡುವ ಬಗ್ಗೆ ಸರ್ಕಾರದ ಆಜ್ಞೆಯನ್ನು ಶೀಘ್ರದಲ್ಲೇ ಹೊರಡಿಸುತ್ತೇನೆ. ಅಂತಹವರು ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ನಾನು ಶಿವಮೊಗ್ಗ, ಧಾರವಾಡ, ರಾಯಚೂರಿಗೆ ಹೋದಾಗ ಆ ವಿಚಾರದ ಬಗ್ಗೆ ಮಹಿಳೆಯರು ಬಂದು ನನಗೆ ಮನವಿ ಪತ್ರವನ್ನು ಸಲ್ಲಿಸಿದರು. ಅವರ ಮನವಿ ಪತ್ರಕ್ಕೆ ಮನ್ನಣೆ ಕೊಟ್ಟು, ಇಂತಹ ಚಿತ್ರಗಳಿಗೆ ಪ್ರೋತ್ಸಾಹ ಕೊಡಬಾರದು, ಎಂದು ನಿರ್ಧಾರ ತೆಗೆದುಕೊಂಡು, ಅಶ್ಲೀಲ ಚಿತ್ರಗಳಿಗೆ ಕಡಿವಾಣ ಹಾಕಬೇಕೆಂದು ಮಾಡಿದ್ದೇವೆ. ಇನ್ನು ಸಿನಿಮಾ ಶೂಟಿಂಗ್ಸ್ ಬಗ್ಗೆ ಮಾನ್ಯ ಸದಸ್ಯರಾದ ಮಹೇಶ್ವರಪ್ಪನವರು ಹೇಳಿದರು. ಮೊದಲು ಸಿಂಗಲ್ ವಿಂಡೋ ಪಾಲಿಸಿ ಇರಲಿಲ್ಲ. ಚಲನಚಿತ್ರ ಶೂಟಿಂಗ್ ಮಾಡಬೇಕಾದರೆ ಅವರು ಹಲವಾರು ಸಂಸ್ಥೆಗಳ ಹತ್ತಿರ ಹೋಗಿ ತಿಂಗಳಾನುಗಟ್ಟಲೆ ಕಾಡಿ, ಬೇಡಿ, ಬರಬೇಕಾಗಿತ್ತು. ಈಗ "ಪ್ಯಾಸೇಜ್ ಟು ಇಂಡಿಯಾ" ಶೂಟಿಂಗ್ ಕೆಲಸ ಏನು ನಡೆಯುತ್ತಿದೆ ಅದಕ್ಕೆ ಪ್ರತಿ ದಿವಸಕ್ಕೆ ಒಂದು ಸಾವಿರ ರೂಪಾಯಿ ಪ್ರಕಾರ ವಸೂಲು ಮಾಡುತ್ತಿದ್ದೇವೆ. ನಾವು ಬಂದಮೇಲೆ ನಮ್ಮ ಚಿತ್ರಗಳಿಗೆ ೪೦೦ ರೂಪಾಯಿ ಇದ್ದುದು ೧೦೦೦ ರೂಪಾಯಿಗೆ ಮಾಡಿದ್ದೇವೆ. ಇನ್ನು ೯೦ ಲಕ್ಷ ರೂಪಾಯಿ ಸಬ್ಸಿಡಿ ಹಣವನ್ನು ಕೊಡದೇ ಹೋಗಿದ್ದರ ಬಗ್ಗೆ, ೪೫ ಲಕ್ಷ ರೂಪಾಯಿಗಳನ್ನು ನಾವು ಅಧಿಕಾರ ವಹಿಸಿಕೊಂಡ ಮೇಲೆ ಬಿಡುಗಡೆ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಮಾರ್ಚ್ ೨೬ನೇ ತಾರೀಖು ಒಂದು ದಿವಸದಲ್ಲಿ ೪೫ ಲಕ್ಷ ರೂಪಾಯಿ ಬಿಡುಗಡೆ ಮಾಡಿದರು. ಆ ಚೆಕ್ಕುಗಳನ್ನು ಸಂಬಂಧಪಟ್ಟವರ ಮನೆಗೆ ಕಳುಹಿಸಿದ್ದೇವೆ ಈ ತರಹ ಒಂದು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಇನ್ನೂ ಸ್ವಲ್ಪ ಸಬ್ಸಿಡಿ ಹಣ ಕೊಡಬೇಕಾಗಿದೆ. ಅದನ್ನು ಅತಿ ಶೀಘ್ರದಲ್ಲೇ ಕೊಡಲಿಕ್ಕೆ ಏರ್ಪಾಡು ಮಾಡುತ್ತೇವೆ. ಸಿನಿಮಾ ಚಲನಚಿತ್ರದ ಬಗ್ಗೆ, ಪತ್ರಿಕಾ ಪ್ರಪಂಚದ ಬಗ್ಗೆ, ದೂರದರ್ಶನದ ಬಗ್ಗೆ ಹೇಳಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಟಿ. ವಿ. ಅಕ್ಷರಗಳನ್ನು ನೋಡಿದ್ದೀರಾ ? ತಲೆಕಟ್ಟು ಚೆನ್ನಾಗಿದೆಯೇ ?

ಶ್ರೀ ಎಂ. ರಘುಪತಿ.—ಅದು ಸರಿಯಿಲ್ಲ ಎಂದು ನಾನು ಬರೆದಿದ್ದೇನೆ. ಅದು ನನ್ನ ಇಲಾಖೆ ಕೆಳಗಡೆ ಬರುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಬರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಏಕೆ, ಇಲ್ಲಿ, ಅದು ಬರೆಯುವುದೆಲ್ಲಾ ಯಾರಿಗೆ ಬರುತ್ತದೆ.

ಶ್ರೀ ಎಂ. ರಘುಪತಿ.—ಬರೆಯುವುದು ಅವರಿಗೆ ಬರುತ್ತದೆ.

ಒಬ್ಬ ಸದಸ್ಯರು.—ಇತ್ತೀಚೆಗೆ ಕಾಗುಣಿತ ಹೇಳುವುದು ತಪ್ಪಿಹೋಗಿದೆ.

ಶ್ರೀ ಎಂ. ರಘುಪತಿ.—ಅದನ್ನು ತರ್ಜುಮೆ ಮಾಡಲಿಕ್ಕೆ ಮಾನ್ಯ ಅಜೀಜ್‌ಸೇಠ್‌ರವರನ್ನು ಕಳುಹಿಸಿದರೆ ಸರಿಹೋಗಬಹುದು. ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳಿಗೂ ಮತ್ತು ನಿರ್ದೇಶಕರಿಗೂ ಪತ್ರ ಬರೆದಿದ್ದೇನೆ. ಕನ್ನಡಿಗರಿಗೆ ದೂರದರ್ಶನದಲ್ಲಿ ಹೆಚ್ಚು ಕೆಲಸ ಸಿಕ್ಕಬೇಕು. ಕನ್ನಡ ಪ್ರತಿನಿಧಿಗಳು ಆಯ್ಕೆ ಸಮಿತಿಯಲ್ಲಿರಬೇಕು. ಹಾಗೆ ರಾಜ್ಯದ ಪ್ರತಿನಿಧಿಗಳು ಇರಬೇಕೆಂದು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ದೂರದರ್ಶನ ಕೇಂದ್ರಗಳಲ್ಲಿ ಕನ್ನಡಿಗರು ಆಯ್ಕೆಯಾಗಿ ಅವರಿಗೆ ಕೆಲಸ ಸಿಕ್ಕುತ್ತದೆ ಎನ್ನುವ ನಂಬಿಕೆ ಇದೆ, ಅಧ್ಯಕ್ಷರೆ. ನಾನು ಹೇಳುವಂಥಾದ್ದು ಇನ್ನು

ಯಾವುದಾದರೂ ಬಿಟ್ಟಿದ್ದರೆ, ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳುವಾಗ ಉತ್ತರ ಹೇಳುತ್ತೇನೆ. ಇನ್ನೊಂದು ವಿಚಾರ ಅಂದರೆ, ತಾಲ್ಲೂಕು ಮಟ್ಟದಲ್ಲಿ ಪ್ರಚಾರ ಕೇಂದ್ರ ಸ್ಥಾಪನೆ ಮಾಡಬೇಕೆಂದು ವ್ಯಾಪಕವಾಗಿ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆ. ಈಗ ೧೬ ಕೇಂದ್ರಗಳಲ್ಲಿ ಸ್ಥಾಪನೆ ಮಾಡಿದ್ದೇವೆ. ಇನ್ನೂ ಎಲ್ಲಾ ತಾಲ್ಲೂಕುಗಳಲ್ಲಿ ಸ್ಥಾಪನೆ ಮಾಡಬೇಕೆಂದು ಈಗ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಸಂಪರ್ಕ ಮಾಡುತ್ತಿದ್ದೇವೆ. ಹಣ ಒದಗಿದ ತಕ್ಷಣ ಬೇರೆ ತಾಲ್ಲೂಕುಗಳಿಗೆ ವಿಸ್ತರಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಮಾನ್ಯ ದೊಡ್ಡಮೇಟಿಯವರು ಮಾತನಾಡುತ್ತಾ ಹೊರ ರಾಜ್ಯಗಳಲ್ಲಿ ತಯಾರಾಗುವ ಕನ್ನಡ ಚಲನಚಿತ್ರಗಳಿಗೂ ೭೫ ಸಾವಿರ ರೂಪಾಯಿ ಕೊಡುತ್ತಿದ್ದೀರಾ ಎಂದು ಹೇಳಿದರು. ಕೆಲವು ಸಲಕರಣೆಗಳು ನಮ್ಮಲ್ಲಿ ಇನ್ನೂ ಇಲ್ಲ. ಆ ಸಲಕರಣೆಗಳನ್ನು ಪೂರ್ತಿ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳಬೇಕೆಂದರೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಬಡ್ಜೆಟ್‌ನಲ್ಲಿ ಬರತಕ್ಕ ಹಣ ೫ ಕೋಟಿ ೪೬ ಲಕ್ಷ ರೂಪಾಯಿ ಮಾತ್ರ. ವಾರ್ತಾ ಇಲಾಖೆಯೂ ನನ್ನದೇ. ಬಡ್ಜೆಟ್‌ನಲ್ಲಿ ನೋಡಿದರೆ ಕೊನೆಯಲ್ಲಿರುವುದು ನನ್ನ ಬಡ್ಜೆಟ್. ಆದರೆ ಬೇಡಿಕೆಗಳು ಮಾತ್ರ ಬಹಳ ಜಾಸ್ತಿ. ಮತ್ತೆ ಟೂರಿಸಮ್‌ಗೆ ಇರುವುದು ೧ ಕೋಟಿ ೭೦ ಲಕ್ಷ ರೂಪಾಯಿ. ಪ್ರವಾಸೋದ್ಯಮವನ್ನು ಸರಿಯಾಗಿ ಉಪಯೋಗಿಸಿಕೊಂಡರೆ, ಕರ್ನಾಟಕ ರಾಜ್ಯದಲ್ಲಿ ಇಂಡಸ್ಟ್ರಿ ಬಿಟ್ಟರೆ, ಸೇಲ್ಸ್‌ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಬಾಬುಗಳಿಂದ ಎಷ್ಟು ಹಣ ಬರುತ್ತದೋ ಅಷ್ಟೇ ಹಣ ಟೂರಿಸಂನಿಂದ ಬರಲಿಕ್ಕೆ ಸಾಧ್ಯ ಇದೆ. ಕರ್ನಾಟಕ ರಾಜ್ಯ ಬಹಳ ಸುಂದರವಾದ ರಾಜ್ಯ. ಬಹಳ ಉತ್ತಮವಾದ ಪ್ರದೇಶಗಳು ಇವೆ. ಪ್ರವಾಸಿಗರು ನೋಡಿ ಮೆಚ್ಚಿಕೊಳ್ಳತಕ್ಕಂಥ ಪ್ರದೇಶಗಳು ಇವೆ. ಅದಕ್ಕೆ ಸುಮಾರು ೫೬೦ ಸ್ಥಾವರಗಳನ್ನು ನಾವು ಗುರುತಿಸಿದ್ದೇವೆ. ಪ್ರತಿಯೊಂದು ಸ್ಥಾವರಗಳನ್ನು ಅಭಿವೃದ್ಧಿಪಡಿಸಬೇಕೆಂದು ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ, ಅದನ್ನು ತಯಾರು ಮಾಡಿ, ಒಂದು ಪುಸ್ತಕವನ್ನು ಮುದ್ರಿಸುತ್ತೇವೆ. ನಮ್ಮ ರಾಜ್ಯಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಸುಂದರವಾದ ಪ್ರದೇಶಗಳು ಇವೆ, ನದಿಗಳು ಹರಿಯುವಂಥ ಸ್ಥಳಗಳು ಇವೆ, ಪುಣ್ಯ ಕ್ಷೇತ್ರಗಳು ಇವೆ, ಈ ರೀತಿ ಪ್ರವಾಸಿ ಆಕರ್ಷಣೆಯುಳ್ಳ ೫೬೦ ಸ್ಥಳಗಳನ್ನು ಗುರುತು ಮಾಡಿ ಅಭಿವೃದ್ಧಿಪಡಿಸಬೇಕೆಂದು ಸಮಗ್ರ ಯೋಜನೆಯನ್ನು ರೂಪಿಸುತ್ತಿದ್ದೇವೆ ತದನಂತರ ಈ ಒಂದು ಪ್ರವಾಸೋದ್ಯಮದ ಪಾಲಿಸಿಯನ್ನ ಅನೌನ್ಸ್ ಮಾಡಬೇಕೆಂದಿದ್ದೇವೆ. ಅದರ ಪ್ರಕಾರ ಸಿಂಗಲ್ ವಿಂಡೋ ಪಾಲಿಸಿ ಮಾಡಬೇಕೆಂದಿದ್ದೇವೆ.

ಈಗ ಈ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಹೋಟೆಲ್‌ಗಳನ್ನು ಮಾಡಬೇಕಾದರೆ, ವೇ ಸೈಡ್ ರೆಸ್ಟೋರೆಂಟ್‌ಗಳನ್ನು ಇಡಬೇಕಾದರೆ, ರೆಸಾರ್ಟ್ಸ್, ಇಡಬೇಕಾದರೆ ಇವನ್ನು ಮುಂತಾದುವನ್ನು ಮಾಡಬೇಕಾದರೆ ಇಲಾಖೆಯಿಂದ ಇಲಾಖೆಗೆ ಹೋಗಬೇಕಾಗುತ್ತದೆ. ಆದರೆ ಇನ್ನು ಮುಂದೆ ೫ ನಕ್ಷತ್ರಗಳ ಹೋಟೆಲ್‌ಗಳು, ವೇ ಸೈಡ್ ರೆಸ್ಟೋರೆಂಟ್, ರೆಸಾರ್ಟ್, ಉಪಹಾರ ಗೃಹಗಳು ಮುಂತಾದುವನ್ನು ತೆರೆಯುವ ಕಾರ್ಯವನ್ನು ಪ್ರವಾಸೋದ್ಯಮ ಇಲಾಖೆಯೇ ವಹಿಸಿಕೊಳ್ಳುತ್ತದೆ. ಏಕೆ ನಮ್ಮ ಪ್ರವಾಸೋದ್ಯಮ ಇಲಾಖೆ ವಹಿಸಿಕೊಳ್ಳುತ್ತದೆ ಎಂದರೆ, ಹೊಸ ಹೊಸ ಉದ್ಯಮಿಗಳಿಗೆ ಪ್ರೋತ್ಸಾಹ ಕೊಡಬೇಕು ಎನ್ನುವ ಕಾರಣದಿಂದ, ಇಷ್ಟೇ ಅಲ್ಲ, ಹೊರಗಡೆಯಿಂದ ಬರತಕ್ಕವರಿಗೋಸ್ಕರ ಟೂರಿಸ್ಟ್ ಸೆಂಟರ್‌ಗಳನ್ನು ಜಾಸ್ತಿ ಮಾಡಿದರೆ ಅದರಿಂದ ನಮಗೆ ಹೆಚ್ಚು ಆದಾಯ ಬರುತ್ತದೆ. ಸಬ್ಸಿಡಿ ಇನ್‌ಸ್ಟಿಟ್ಯೂಟ್ಸ್ ಬರುತ್ತವೆ. ಇದರಿಂದ ನಮಗೆ ಲಾಭವಾಗುತ್ತದೆ. ಇವತ್ತು ಉದಾಹರಣೆಗೆ ಡೆನ್ಮಾರ್ಕ್ ದೇಶವನ್ನು ತೆಗೆದುಕೊಂಡರೆ ಅದು ಕೇವಲ ಪ್ರವಾಸೋದ್ಯಮದಿಂದಲೇ ಒಂದು ಉನ್ನತ ಸ್ಥಾನವನ್ನು ಗಳಿಸಿದೆ. ಇವತ್ತು ನಮ್ಮ ರಾಜ್ಯದಲ್ಲಿ ಉತ್ತಮವಾದ ರಸ್ತೆಗಳು ಆಗಬೇಕಾಗಿದೆ, ಆಸ್ಪತ್ರೆಗಳು ಆಗಬೇಕಾಗಿದೆ, ಶಾಲಾ ಕಟ್ಟಡಗಳು ಆಗಬೇಕಾಗಿದೆ, ಇಂಥ ಅವಶ್ಯಕ ಕಾರ್ಯಗಳಿಗೆ ನಾವು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗಿರುವುದರಿಂದ ಕೇವಲ ಪ್ರವಾಸೋದ್ಯಮಕ್ಕೇ ಹೆಚ್ಚು ಹಣವನ್ನು ಕೊಡುವುದಕ್ಕೆ ನಮಗೂ ಕೂಡ ಮನಸ್ಸು ಬರುವುದಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಆರ್ಥಿಕ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ ಇವತ್ತು ಬಹಳ ಹಿಂದುಳಿದಿದೆ. ಮೊದಲು ನಮ್ಮ ರಾಜ್ಯದ ಅವಶ್ಯಕ ಅಭಿವೃದ್ಧಿಗಳ ಕಡೆ ಹೆಚ್ಚು ಗಮನಹರಿಸಿ ಅನಂತರ ಪ್ರವಾಸೋದ್ಯಮಕ್ಕೆ ಗಮನ ಕೊಡಬೇಕೆಂಬುದು ನಿರ್ವಿವಾದ, ಇವತ್ತು ದುರ್ಬಲ ವರ್ಗದವರಿಗೆ ಸಲ್ಲಬೇಕಾದ ಸವಲತ್ತುಗಳು ಏನಿವೆ ಅವುಗಳನ್ನು ನಾವು ಒದಗಿಸಿಕೊಡಬೇಕಾಗಿದೆ. ಈ ಎಲ್ಲ ಕಾರಣಗಳಿಂದ ಇದು ಲಾಸ್ಟ್ ಪ್ರಿಯಾರಿಟಿ ಸೆಕ್ಟರ್ ಆಗಿದೆ. ಆದರೂ ಈ ಇಲಾಖೆಗೆ ಸಾಕಷ್ಟು ಮಹತ್ವವನ್ನು ಒದಗಿಸಿಕೊಡು

ವುದರಲ್ಲಿ ನಾನು ಯಶಸ್ವಿಯಾಗುತ್ತೇನೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಬೆಳಗಾಂ, ಮುಳಬಾಗಿಲು, ಹಿರಿಯೂರು, ಮದ್ದೂರು, ಯಡಿಯೂರು ಅಂಕೋಲ ಈ ಸ್ಥಳಗಳಲ್ಲಿ ವೇ ಸೈಡ್ ರೆಸ್ಟೋರೆಂಟ್ ಮಾಡಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ಯಡಿಯೂರಿಗೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟಿದ್ದೇವೆ. ನಾನೂ ಕೂಡ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಈ ಕೇಂದ್ರದ ಕೆಲಸ ಕಳೆದ 2 ವರ್ಷದಿಂದ ಹಾಗೆಯೆ ನಿಂತಿತ್ತು. ಈಗ ಅದನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನವರಿಗೆ ವಹಿಸಿದ್ದು ಈ ವರ್ಷದಲ್ಲೇ ಈ ಕೆಲಸವನ್ನು ಪೂರೈಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ ಅದರ ಪ್ರಕಾರ ಈ ಕೆಲಸವೂ ಪ್ರಸಕ್ತ ವರ್ಷದಲ್ಲಿ ಆಗೇ ಆಗುತ್ತದೆಂಬ ನಂಬಿಕೆ ನನಗಿದೆ.

ಇನ್ನೊಂದು ಪ್ರಮುಖ ವಿಚಾರವೇಂದರೆ, ದಕ್ಷಿಣ ಭಾರತದಲ್ಲಿರತಕ್ಕ ರಾಜ್ಯಗಳಲ್ಲಿ ಎಲ್ಲೆಲ್ಲಿ ಏರ್‌ಪೋರ್ಟ್ ಮತ್ತು ನ್ಯಾಷನಲ್ ಏರ್‌ಪೋರ್ಟ್ ಇವೆ ಅಲ್ಲೆಲ್ಲ ನಮ್ಮ ರಾಜ್ಯದ ಪ್ರವಾಸೋದ್ಯಮದ ಬಗ್ಗೆ ಪ್ರಚಾರ ಕಾರ್ಯಕ್ಕೋಸ್ಕರ ಸೂಕ್ತ ವ್ಯವಸ್ಥೆ ಮಾಡುತ್ತಿದ್ದೇವೆ. ಕಾವೇರಿ ಎಂಪೋರಿಯಂ ಎಂಬು ತೆರೆದು ಅಲ್ಲಿ ನಮ್ಮ ರಾಜ್ಯದ ಲಿಟರೇಚರ್ ಪ್ರವಾಸೋದ್ಯಮದ ಬಗ್ಗೆ ಸಂಪೂರ್ಣ ವಿವರಗಳನ್ನು ಇಡುವಂತೆ ಮಾಡುತ್ತಿದ್ದೇವೆ. ಅದೇ ರೀತಿ ಬೇರೆ ರಾಜ್ಯಗಳ ಪ್ರವಾಸೋದ್ಯಮದ ಬಗ್ಗೆ ಕೂಡ ನಮ್ಮಲ್ಲಿ ಪ್ರಚಾರಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಈ ದಿಸೆಯಲ್ಲಿ ಮಹಾರಾಷ್ಟ್ರ ಮತ್ತು ಗೋವಾದ ಮಂತ್ರಿಯವರನ್ನು ಭೇಟಿಮಾಡಿ ಅವರೊಡನೆ ಚರ್ಚೆ ಮಾಡಿದ್ದೇವೆ. ಅವರೂ ಕೂಡ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಈ ಬಗ್ಗೆ ಪತ್ರವನ್ನೂ ಕೂಡ ಬರೆದಿದ್ದೇನೆ. ಹೊರ ರಾಜ್ಯಗಳಲ್ಲಿ ನಮ್ಮ ರಾಜ್ಯದ ಅಧಿಕಾರಿಯೊಬ್ಬರನ್ನು ನೇಮಕ ಮಾಡಿ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರವಾಸೀ ಕೇಂದ್ರಗಳಿವೆ, ಅಲ್ಲಿಗೆ ಹೋಗಲು ವ್ಯವಸ್ಥೆ ಯಾವ ರೀತಿ ಇದೆ ಎನ್ನುವ ಬಗ್ಗೆ ಮಾಹಿತಿ ಕೊಟ್ಟು ಪ್ರಚಾರ ಮಾಡಲು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಕೆಲಸದಲ್ಲೂ ಕೂಡ ನಾವು ಯಶಸ್ವಿಯಾಗುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಬೆಂಗಳೂರು ನಗರದಲ್ಲಿ ಬಹಳ ಹಳೆಯ ಕಾಲದಿಂದ ಇರತಕ್ಕ, ಮೊದಲು ಸುಂದರವಾಗಿದ್ದು ಈಗ ಸ್ವಲ್ಪ ಅಧೋಗತಿಗೆ ಇಳಿದಿರತಕ್ಕ ಅಲಸೂರು ಕೆರೆಯ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈ ಕೆರೆಗೆ ಚರಂಡಿಯ ನೀರು ಬಂದು ಸೇರುತ್ತಿದೆ. ಅದನ್ನು ಬೇರೆ ಕಡೆಗೆ ತಿರುಗಿಸಬೇಕೆಂದು ಬೆಂಗಳೂರು ನಗರಸಭೆಯವರಿಗೆ ತಿಳಿಸಿದ್ದೇವೆ. ಅವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಈ ಚರಂಡಿ ನೀರನ್ನು ಬೇರೆ ಕಡೆ ತಿರುಗಿಸುತ್ತಿದ್ದಾರೆ. ಈ ಕೆರೆಯ ಅಭಿವೃದ್ಧಿ ಕಾರ್ಯಕ್ಕೋಸ್ಕರ ಒಂದು ಸಲಹಾ ಸಮಿತಿಯನ್ನು ನೇಮಕ ಮಾಡುತ್ತಿದ್ದೇವೆ. ಇದರಲ್ಲಿ ನಮ್ಮ ಬೆಂಗಳೂರಿನ ಶಾಸಕರು ಮತ್ತು ಸರ್ಕಾರೀ ಅಧಿಕಾರಿಗಳೂ ಇರುತ್ತಾರೆ. ಇದನ್ನು ಒಂದು ಮಿನಿ ಬೃಂದಾವನವನ್ನಾಗಿ ಈ ವರ್ಷದಲ್ಲೇ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇದೇ ರೀತಿ ನಮ್ಮ ಬೆಂಗಳೂರಿನ ಸ್ಯಾಂಕಿಟ್ಯಾಂಕ್, ಹೆಸರಘಟ್ಟ ಕೆರೆ, ಲಾಲ್‌ಬಾಗ್ ಕೆರೆ ಮತ್ತು ಕಣ್ವ ಜಲಾಶಯ ಈ ಸ್ಥಳಗಳನ್ನೂ ಅಭಿವೃದ್ಧಿಪಡಿಸಿ ಇಲ್ಲಿ ಬೋಟಿಂಗ್ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಅಲಸೂರು ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆ, ದೀಪಾಲಂಕಾರ, ಉಪಹಾರ ಕೇಂದ್ರವನ್ನು ತೆರೆಯುವ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಇದಕ್ಕಾಗಿ ಬೇಕಾಗತಕ್ಕ ಹೆಚ್ಚು ಹಣವನ್ನು ಕೇಂದ್ರದಿಂದ ಪಡೆಯಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎನ್. ಜಿ. ನಾಯಕ್.—ಸ್ವಾಮಿ, ಅಲಸೂರು ಕೆರೆಯ ಅಭಿವೃದ್ಧಿಗಾಗಿ ಒಂದು ಸಮಿತಿಯನ್ನು ನೇಮಕ ಮಾಡುತ್ತೇವೆಂದು ಹೇಳಿದಿರಿ. ಅದರಲ್ಲಿ ಕೇವಲ ನಿಮ್ಮ ಪಕ್ಷದವರನ್ನೇ ಹಾಕಿಕೊಳ್ಳುತ್ತೀರೋ ? ಅಥವಾ ಬೇರೆ ಪಕ್ಷದ ಸದಸ್ಯರನ್ನೂ ಸೇರಿಸುತ್ತೀರೋ ?

ಶ್ರೀ ಎಂ. ರಘುಪತಿ.—ಇದರಲ್ಲಿ ಬೇರೆಯವರು ಬರುವುದಿಲ್ಲ.

ಶ್ರೀ ಎನ್. ಜಿ. ನಾಯಕ್.—ಸ್ವಾಮಿ, ನಮ್ಮ ಕ್ಷೇತ್ರದಲ್ಲಿ ಲುಕೆ ಮುರುಳಸಿದ್ದೇಶ್ವರ ಎಂದು ಒಂದು ಸ್ಥಳ ಇದೆ. ಅದು ಬಹಳ ಹೆಸರುವಾಸಿಯಾದ ಸ್ಥಳ......

ಶ್ರೀ ಎಂ. ರಘುಪತಿ.—ಅದನ್ನು ಮಾಡೋಣ. ನಾನು ಈಗಾಗಲೇ ಹೇಳಿದಂತೆ ಅಲಸೂರು ಟ್ಯಾಂಕ್‌ನಲ್ಲಿ ಚಿಕ್ಕ ಉಪಹಾರ ಕೇಂದ್ರವನ್ನು ತೆರೆದು ಬೋಟಿಂಗ್ ವ್ಯವಸ್ಥೆಯನ್ನು ಮಾಡುತ್ತೇವೆ.

ಇನ್ನು ಜೋಗ್‌ಫಾಲ್ಸ್ ಮುತ್ತ್ಯಾಲಮಡು, ಚಂದ್ರಗಿರಿ, ಇವುಗಳನ್ನೂ ಕೂಡ ಅಭಿವೃದ್ಧಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈ ವರ್ಷ ನಾವು ಪ್ರವಾಸಿ ಕೇಂದ್ರಗಳಾಗಿ ಮಾಡಲು ೨೬೦ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ............

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಈಗ ನಮ್ಮ ರಾಜ್ಯದಲ್ಲಿ ಹಣದ ಮುಗ್ಗಟ್ಟು ಬಹಳವಾಗಿದೆಯೆಂದು ತಾವೇ ಹೇಳುತ್ತಿದ್ದೀರಿ. ಆದರೂ ಅನೇಕ ಯೋಜನೆಗಳನ್ನು ತಾವು ಹಾಕಿಕೊಂಡಿದ್ದೀರಿ, ಇವುಗಳನ್ನೂ ಹಾಕಿಕೊಂಡಿರುವುದೂ ಕೂಡ ಕೇವಲ ಮೈಸೂರು ಮತ್ತು ಬೆಂಗಳೂರಿಗೆ ಮಾತ್ರವೇ ಸೀಮಿತ ಮಾಡುತ್ತಿದ್ದೀರಿ. ಈ ರೀತಿ ಮಾಡುವುದು ಸರಿಯಲ್ಲ. ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಕಡೆಗೂ ತಾವು ನೋಡಬೇಕು.

ಶ್ರೀ ಎಂ. ರಘುಪತಿ.—ಇದಕ್ಕೆ ನಮ್ಮಲ್ಲಿ ಹಣವಿಲ್ಲ. ಕೇಂದ್ರದಿಂದ ನಾವು ಇದಕ್ಕೆ ಹಣವನ್ನು ತರಿಸಬೇಕಾಗುತ್ತಿದೆ. ಇನ್ನೊಂದು ವಿಚಾರ ಏನೆಂದರೆ, ಬೆಳೆಯದೇ ಇರತಕ್ಕ ಈ ಸಂಸ್ಥೆಯನ್ನು ನಾವು ಇಂದು ಬೆಳೆಸಬೇಕಾಗಿದೆ. ಇದು ಬೆಳೆದ ಮೇಲೆ ಎಲ್ಲ ಪ್ರವಾಸೀ ಕೇಂದ್ರಗಳನ್ನೂ ಅಭಿವೃದ್ಧಿ ಮಾಡಬೇಕಾಗುತ್ತದೆ. ಇದು ಬೆಳೆಯುವುದಕ್ಕೆ ಮೊದಲೇ ನಾವು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಹೋದರೆ ಈ ಕಡೆಯಿಂದ ತೆರೆದುಕೊಂಡು ಹೋದರೆ ಆ ಕಡೆಯಿಂದ ಮುಚ್ಚಿಕೊಂಡು ಬರಬೇಕಾಗುತ್ತದೆ. ಅಂಥ ಕೆಲಸವನ್ನು ಮಾಡುವುದು ಬೇಡ.

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಸ್ವಾಮಿ ಈ ಬಾಬಿಗೋಸ್ಕರ ಬೆಂಗಳೂರಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ? ಮತ್ತು ಬೇರೆ ಬೇರೆ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಖರ್ಚುಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಜಿ. ಎಂ. ಕಾನಡೆ.—ಸಿದ್ದಾಪುರದಲ್ಲಿ ಊಂಚಳ್ಳಿ ಜಲಪಾತ ಎಂದು ಇದೆ, ಅದನ್ನು ಅಭಿವೃದ್ಧಿಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಇದ್ದೆಲ್ಲಾ ಈಗಲೇ ಮಾಡುವುದಕ್ಕಾಗುವುದಿಲ್ಲ. ಮುಂದೆ ಇದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎನ್. ಜಿ. ನಾಯಕ್.—ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಮರುಳಸಿದ್ಧೇಶ್ವರ ಸ್ವಾಮಿ ದೇವಸ್ಥಾನವಿದೆ, ಅದು ಒಂದು ಯಾತ್ರಾಸ್ಥಳವಾಗಿರುತ್ತದೆ. ಅಲ್ಲಿ ಸಾವಿರಾರು ಜನರು ಸೇರುತ್ತಾರೆ. ಇದನ್ನೂ ಕೂಡ ಮಾನ್ಯ ಸಚಿವರು ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಒಂದೊಂದನ್ನೇ ಪ್ರಸ್ತಾಪ ಮಾಡುತ್ತಿರುತ್ತಾರೆ. ಬಹಳ ಜನರು ತಪ್ಪು ತಿಳಿದುಕೊಂಡಿರುತ್ತಾರೆ ವಿಹಾರ ಸ್ಥಳಗಳೇ ಬೇರೆ ಯಾತ್ರಾ ಸ್ಥಳಗಳನ್ನೆಲ್ಲ ವಿಹಾರ ಸ್ಥಳಗಳನ್ನಾಗಿ ಮಾಡಬೇಕೆಂದು ಕೇಳಿದರೆ ಅದು ಸಾಧ್ಯವಾಗುವುದಿಲ್ಲ ಯಾತ್ರಾ ಸ್ಥಳಗಳನ್ನು ವಿಹಾರ ಸ್ಥಳಗಳನ್ನಾಗಿ ಮಾಡುವುದು ಸೂಕ್ತವಲ್ಲ ಎನ್ನುವ ಅಭಿಪ್ರಾಯವಿದೆ. ಯಾತ್ರಾ ಸ್ಥಳಗಳನ್ನು ದೇವರ ದರ್ಶನಕ್ಕಾಗಿ ದೇವರ ಪೂಜೆಯನ್ನು ಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕು. ಅದಕ್ಕೆ ಚಾರಿಟಬಲ್ ಅಂಡ್ ಎಂಡೋಮೆಂಟ್ ಡಿಪಾರ್ಟ್‌ಮೆಂಟ್ ಎಂದು ಬೇರೆ ಇಲಾಖೆಯೇ ಇದೆ. ಅದರಮುಖಾಂತರ ಅಭಿವೃದ್ಧಿಕಾರ್ಯವನ್ನು ಮಾಡಬೇಕಾಗುತ್ತದೆ. ಎಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಮುಖಾಂತರ ಹೆಚ್ಚು ಹಣವನ್ನು ಪಡೆದು ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಆ ಕೆಲಸವನ್ನು ಮಾಡುತ್ತೇವೆ. ಪೂರ್ತಿಯಾಗಿ ನಮ್ಮ ಇಲಾಖೆಯವರೇ ಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ ಏತಕ್ಕೆಂದರೆ ಹಣದ ಮುಗ್ಗಟ್ಟು ಬೇರೆ ಇರುತ್ತದೆ.

ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡುತ್ತಾ ಹಂಪೆ ಸೆಂಟ್ರಲ್ ಬೋರ್ಡ್ ಬಗ್ಗೆ ಮಾತನಾಡಿದರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಎಷ್ಟೋ ದಿವಸಗಳ ಹಿಂದೆ ಹಂಪೆ ಸಮಿತಿಯೊಂದು ಸ್ಥಾಪನೆ ಆಯಿತು.. ೨೮-೮-೮೧ರಲ್ಲಿಯೇ ಸ್ಥಾಪನೆಯಾಯಿತು. ಇದುವರೆಗೆ ಎರಡು ಸಮಿತಿಯ ಸಭೆಗಳು ನಡೆದಿರುತ್ತವೆ. ಒಂದ ೬-೯-೮೨ ರಲ್ಲಿ ಮತ್ತು ೨೨-೨-೮೩ ರಲ್ಲಿ ಮತ್ತೊಂದು ಸಭೆ ನಡೆದಿರುತ್ತದೆ. ಮತ್ತೆ ಸಮಿತಿಯ ನಡೆಯುವುದಕ್ಕೆ ಕಾರಣಗಳನ್ನು ನಾನು ಹುಡುಕುವುದಕ್ಕೆ ಹೋಗುವುದಿಲ್ಲ. ನಾವು ಅಧಿಕಾರವನ್ನು ವಹಿಸಿಕೊಂಡಮೇಲೆ ಎರಡುಬಾರಿ ಸಮಿತಿಯ ಸಭೆಯನ್ನು ಕರೆದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳವರ ಕೈಯಲ್ಲಿ ಅರ್ಥಶಾಖೆ, ಆರ್ಕಿಯಾ

ಲಾಜಿಕಲ್ ಡಿಪಾರ್ಟ್‌ಮೆಂಟ್. ಪ್ರವಾಸೋದ್ಯಮ ಇವೆಲ್ಲವೂ ಇದೆ. ಇವೆಲ್ಲಾ ಸರಿಯಾಗಿ ಕೆಲಸ ಮಾಡಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳೇ ಅದರ ಅಧ್ಯಕ್ಷರಾಗಿದ್ದಾರೆ ಒಳ್ಳೆಯದೆಂದು ಹೇಳಿ ಎರಡು ಸಭೆಗಳನ್ನು ದಿನಾಂಕ ೬-೯-೮೨ ರಂದು ಮತ್ತು ದಿನಾಂಕ ೨೨-೨-೮೩ ರಂದು ಕರೆದು ಮಾತನಾಡಿದ್ದೇವೆ. ಇನ್ನೊಂದು ಸಭೆಯನ್ನು ಮುಂದಿನ ತಿಂಗಳಲ್ಲಿಯೇ ಕರೆಯಬೇಕೆಂದು ಇದ್ದೇವೆ. ಎರಡು ಸಬ್ ಕಮಿಟಿಗಳನ್ನೂ ಸಹ ಮಾಡಿದ್ದೇವೆ. ಡಾ. ಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ ಮತ್ತೊಂದು ಪ್ರೊಫೆಸರ್ ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ಮಾಡಿದ್ದೇವೆ. ಅವರು ಮೂರು ತಿಂಗಳಲ್ಲಿಯೇ ವರದಿಯನ್ನು ಕೊಡುತ್ತಾರೆ. ಅವರಮೇಲೆ ಕಾರ್ಯಾಚರಣೆಯನ್ನು ಮಾಡಲು ಮತ್ತೊಂದು ಸಮಿತಿಯನ್ನು ಮಾಡಿರುತ್ತೇವೆ. ಅದು ಮೂರು ಜನ ಮಂತ್ರಿಗಳನ್ನು ಒಳಗೊಂಡಂತಹ ಸಮಿತಿಯಾಗಿರುತ್ತದೆ. ಅದರಲ್ಲಿ ನಾನು ಮತ್ತು ಮಾನ್ಯ ಜೀವರಾಜಆಳ್ವರವರು ಮತ್ತು ಸಾರಿಗೆ ಸಚಿವರಾದ ಶ್ರೀ ಎಂ. ಪಿ. ಪ್ರಕಾಶ್‌ರವರು ಇರುತ್ತೇವೆ. ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಲು ಒಂದು ಡೇಟನ್ನು ನಿಗದಿಮಾಡಿಕೊಂಡು ಈ ಅಧಿವೇಶನವು ಮುಗಿದ ಕೂಡಲೇ ಹೋಗುತ್ತೇವೆ. ಏನು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಈ ಸಂದರ್ಭದಲ್ಲಿ ಹೇಳುವುದೇನೆಂದರೆ ೧೬ ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ನಾಲ್ಕುವರೆ ಲಕ್ಷ ಮುಂಗಡಹಣವನ್ನು ಕೊಟ್ಟಿದ್ದಾರೆ. ಕೆಲಸ ಪ್ರಾರಂಭಮಾಡಿ ಕಾರ್ಯಾಚರಣೆ ಮಾಡುತ್ತೇವೆಂದು ಹೇಳುತ್ತೇನೆ.

ಇನ್ನು ಬಾದಾಮಿ, ಪಟ್ಟದಕಲ್ಲು. ಐಹೊಳೆ ಇವುಗಳನ್ನು ನಮ್ಮ ವಶಕ್ಕೆ ತೆಗೆದುಕೊಂಡಿರುತ್ತೇವೆ. ಅಲ್ಲಿ ಕಟ್ಟಡಗಳ ಕೆಲಸವನ್ನು ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತೇವೆ. ಮತ್ತೆ ಸೌತ್ ಮತ್ತು ನಾರ್ತ್ ಈ ರೀತಿ ಎರಡು ಟೂರಿಸ್ಟ್ ಸರ್‌ಕ್ಯೂಟ್ ಪ್ರಾರಂಭಮಾಡಲು ಕೇಂದ್ರ ಸರ್ಕಾರ ಮಂತ್ರಿಗಳ ಜೊತೆಯಲ್ಲಿ ೬ನೇ ತಾರೀಖು ಸಭೆಯನ್ನು ಇಟ್ಟುಕೊಂಡಿದ್ದೇವೆ. ಆ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಮಾಡಿ ನಮಗೆ ಏನೇನು ಬರಬೇಕೋ ಅದೆಲ್ಲವನ್ನು ನಾವು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹಳೇಬೀಡಿನಲ್ಲಿ ವಸತಿ ಗೃಹಗಳ ನಿರ್ಮಾಣ ಕಾರ್ಯವನ್ನು ಪೂರೈಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಇದಕ್ಕಾಗಿ ಅವರ ಹತ್ತಿರ ಹಣವನ್ನು ಪಡೆಯಲಿಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆ. ಮತ್ತೆ ಒಂದು ಟೂರಿಸಂ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್‌ನ್ನು ಪ್ರಾರಂಭ ಮಾಡಬೇಕೆಂದಿರುತ್ತೇವೆ. ಆ ಇನ್‌ಸ್ಟಿಟ್ಯೂಷನ್‌ನಲ್ಲಿ ಟೂರಿಸ್ಟ್ ಗೈಡ್ಸನ್ನು ತಯಾರು ಮಾಡುವುದು ಮತ್ತೆ ಪರ್ಸನಲ್ ಮ್ಯಾನೇಜರ್‌ಗಳು ಎಂದು ಯಾರು ಇರುತ್ತಾರೋ ಅವರಿಗೆ ತರಬೇತಿಯನ್ನು ಕೊಟ್ಟು ಸಾರ್ವಜನಿಕ ಸಂಪರ್ಕ ಮತ್ತು ಕ್ಯಾಟರಿಂಗ್‌ಗೆ ಸಂಬಂಧಪಟ್ಟ ವಿಷಯಗಳ ಬೋಧನೆಯನ್ನು, ತರಬೇತಿಯನ್ನು ಕೊಡತಕ್ಕಂಥ ಒಂದು ವರ್ಷದ ಕೋರ್ಸನ್ನು ಪ್ರಾರಂಭ ಮಾಡಬೇಕೆಂದು ಇದ್ದೇವೆ. ಈ ಇನ್‌ಸ್ಟಿಟ್ಯೂಷನ್‌ನನ್ನು ಈ ವರ್ಷದಲ್ಲಿಯೇ ಅಂದರೆ ಈ ಶೈಕ್ಷಣಿಕ ವರ್ಷದಲ್ಲಿಯೇ ನಾವು ಪ್ರಾರಂಭ ಮಾಡಬೇಕೆಂದಿದ್ದೇವೆ.

ಕೊನೆಯದಾಗಿ ಒಂದು ಸಂತೋಷದ ಸುದ್ದಿ ತಿಳಿಸಬೇಕೆಂದು ಇದ್ದೇನೆ ಇದು ಬಹುದಿನಗಳ ಬೇಡಿಕೆ ಏನೆಂದರೆ ಹುಬ್ಬಳ್ಳಿಯಲ್ಲಿ ಮತ್ತು ಧಾರವಾಡದಲ್ಲಿ. ವಿಮಾನ ನಿಲ್ದಾಣವನ್ನು ಮಾಡಬೇಕೆಂದು ಮತ್ತು ಮೈಸೂರಿನಲ್ಲಿಯೂ ಒಂದು ವಿಮಾನ ನಿಲ್ದಾಣ ಮಾಡಬೇಕೆಂದು ಯೋಜಿಸಿದ್ದೇವೆ ಮೈಸೂರಿಗೆ ನಮ್ಮ ರಾಷ್ಟ್ರಪತಿಗಳು ಬಂದಿದ್ದಾಗ ಮೈಸೂರು ನಗರಕ್ಕೆ ವಿಮಾನ ನಿಲ್ದಾಣ ಇಲ್ಲದಿರುವುದು ಬಹಳ ಕಷ್ಟವಾಗಿದೆ ಎಂದಿರುತ್ತಾರೆ. ಆದ್ದರಿಂದ ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆಯಲ್ಲಿ ಸಂಪರ್ಕ ಮಾಡಿದ್ದೇನೆ. ಅವರ ಕಡೆಯಿಂದ ಉತ್ತರ ಬಂದಿದೆ. ಇದನ್ನು ಮುಂದಿನ ಪ್ಲಾನ್‌ನಲ್ಲಿ ಸೇರಿಸಲಾಗುತ್ತದೆ. ಇದಕ್ಕೆ ತಕ್ಕ ಜಮೀನನ್ನು ಒದಗಿಸಿ ಎಂದು ಹೇಳಿದ್ದಾರೆ. ಮತ್ತೆ ನಾವು ಉತ್ತರವನ್ನು ಬರೆದಿದ್ದೇವೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಕೊಡುತ್ತೇವೆಂದು ಹೇಳಿದ್ದೇವೆ. ರಸ್ತೆ ಸಂಪರ್ಕ ಇತ್ಯಾದಿ ಎಲ್ಲವನ್ನು ಒದಗಿಸಿಕೊಡುತ್ತೇವೆಂದು ಅವರಿಗೆ ಹೇಳಿದ್ದೇವೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಇನ್ನು ದಸರ ವಸ್ತು ಪ್ರದರ್ಶನದ ಬಗ್ಗೆ ಹೇಳಿದ್ದಾರೆ. ತಮಗೆ ಗೊತ್ತಿದೆ. ಕಳೆದಬಾರಿ ವಸ್ತು ಪ್ರದರ್ಶನ ಬಹಳ ಚೆನ್ನಾಗಿ ನಡೆದಿದೆ. ಕೇವಲ ಒಂದೇ ತಿಂಗಳಲ್ಲಿ ವಸ್ತುಪ್ರದರ್ಶನದ ಏರ್ಪಾಡು ಮಾಡಿರುತ್ತೇವೆ. ಈ ವರ್ಷವೂ ಕೂಡ ಜೂನ್ ಜುಲೈ ತಿಂಗಳುಗಳಲ್ಲಿ ದಸರಾ ವಸ್ತು ಪ್ರದರ್ಶನದ

ಕೆಲಸ ಪ್ರಾರಂಭ ಮಾಡಬೇಕೆಂದು ಇದ್ದೇವೆ. ಮುಂಚಿತವಾಗಿಯೇ ಕೆಲಸ ಪ್ರಾರಂಭಮಾಡಿ ಸರಿಯಾದ ಸಮಯಕ್ಕೆ ನಾವು ಎಕ್ಸಿಬಿಷನ್ ಪ್ರಾರಂಭ ಮಾಡಬೇಕೆಂದು ಇದ್ದೇವೆ. ದಸರಾ ಸಂದರ್ಭದಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಂದು ವಿಭಾಗವಾಗಿ ಮಾಡಬೇಕೆಂದು. ಅದರಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ನೋಂದಾಯಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಇಲ್ಲದೆ ದಸರಾ ವಸ್ತು ಪ್ರದರ್ಶನಕ್ಕಾಗಿಯೇ ಒಂದು ಪರ್ಮನೆಂಟ್ ಎಗ್ಸಿಬಿಷನ್ ಮೈಸೂರಿನಲ್ಲಿ ಮಾಡಬೇಕೆಂದು ಇದ್ದೇವೆ. ಇದರ ಬಗ್ಗೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ನನ್ನ ಬೇಡಿಕೆಯ ಮೇಲೆ ಹಲವಾರು ಸದಸ್ಯರು ಮಾತನಾಡಿದ್ದಾರೆ. ಮಾನ್ಯ ವಿರೋಧಪಕ್ಷದ ಸದಸ್ಯರೂ ಕೂಡ ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟಿರುತ್ತಾರೆ ಮತ್ತೊಂದು ವಿಷಯ ನಮ್ಮ ರಾಷ್ಟ್ರ ಕವಿಗಳಾದ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಹುಟ್ಟಿದ ಸ್ಥಳದಲ್ಲಿ ೫ ಕಿಲೋಮೀಟರ್ ವಿಸ್ತೀರ್ಣದಲ್ಲಿ ಸಾವು ಮತ್ತು ಯುವ ಜನ ಇಲಾಖೆಯವರು ಇಬ್ಬರೂ ಸೇರಿ ಕವಿಗಳು ಯಾರಾದರೂ ಹೋಗಿ ಅಲ್ಲಿ ಬರೆಯುವುದಕ್ಕೆ ಮತ್ತು ಓದಿಕೊಳ್ಳುವುದಕ್ಕೆ ಒಂದು ಸ್ಥಳವನ್ನಾಗಿ ಉಪಯೋಗಿಸಿಕೊಳ್ಳತಕ್ಕಂಥ ಒಂದು ಉತ್ತಮವಾದ ಕೆಲಸ ವನ್ನು ಮಾಡಬೇಕೆಂದು ಹೇಳಿ ಅಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿ ಅಲ್ಲಿ ಕವಿಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಿ ಒಂದು ಉತ್ತಮವಾದ ವಾತಾವರಣವನ್ನು ಸೃಷ್ಟಿ ಮಾಡಬೇಕು ಎಂದು ಕೂಡ ನಿರ್ಣಯ ಮಾಡಿದ್ದೇವೆ.

ಶ್ರೀ ಸ್ವಾಮಿರಾವ್.—ಹೋದವರ್ಷ ತಮ್ಮ ಭಾಷಣದಲ್ಲಿ ಕೊಡಚಾದ್ರಿಯನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡಬೇಕೆಂದು ಹೇಳಿದ್ದಿರಿ. ಈ ವರ್ಷ ಅದನ್ನು ತೆಗೆದುಕೊಳ್ಳುತ್ತೀರಾ ?.

ಶ್ರೀ ಎಂ. ರಘುಪತಿ.—ಬಜೆಟ್‌ನಲ್ಲಿ ಬಂದಿರತಕ್ಕಂಥಾ ವಿಷಯಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಒಟ್ಟಿನಲ್ಲಿ ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನೆಲ್ಲಾ ಗಮನ ದಲ್ಲಿಟ್ಟುಕೊಂಡು ನಾನು ಸಂಪೂರ್ಣವಾಗಿ ಈ ಖಾತೆಯನ್ನು ಅಭಿವೃದ್ಧಿ ಮಾಡುತ್ತೇನೆಂದು ತಿಳಿಸುತ್ತೇನೆ. ಇಷ್ಟು ಹೇಳಿ ಈ ನನ್ನ ಬೇಡಿಕೆಗಳಿಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಸಂಗಮೇಶ್ವರ ಸರ್ದಾರ್ (ರಾಯಚೂರು).—ಮಾನ್ಯ ಮಂತ್ರಿಗಳು ರಾಯಚೂರಿನಲ್ಲಿರ ತಕ್ಕ ವಿಮಾನನಿಲ್ದಾಣವನ್ನು ನೋಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ, ಅದು ಬಹಳ ಹಿಂದುಳಿದಿದೆ, ನಮ್ಮ ಹೈದ್ರಾಬಾದ್ ಕರ್ನಾಟಕ ಭಾಗವನ್ನು ಮಾನ್ಯ ಮಂತ್ರಿಗಳು ಮರೆತಿದ್ದಾರೆಂದು ಕಾಣುತ್ತದೆ. ಈಗಲಾದರೂ ಅದರ ಕಡೆಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕು. ಮತ್ತು ಅದನ್ನು ಒಂದು ಸುಸಜ್ಜಿತವಾದ ವಿಮಾನ ನಿಲ್ದಾಣವನ್ನಾಗಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ ಎರಡನೆಯದಾಗಿ, ಈ ಚಲನಚಿತ್ರ ನಗರದ ಬಗ್ಗೆ ತಾವು ಮತ್ತೊಮ್ಮೆ ವಿಚಾರ ಮಾಡಬೇಕು. ಏಕೆಂದರೆ ಇಡೀ ಭಾರತದಲ್ಲಿಯೇ ಅಲ್ಲ, ಇಡೀ ವಿಶ್ವದಲ್ಲಿಯೇ ಆಕರ್ಷಣೀಯವಾದಂಥ ಚಲನಚಿತ್ರನಗರವನ್ನು ಮಾಡುವಂಥಹ ಕಾಲ ಬಂದಿದೆ. ಏಕೆಂದರೆ ಇವತ್ತು ಭಾರತದಲ್ಲಿ ಇದು ಎರಡನೆ ಉದ್ಯೋಗವಾಗಿ ಬೆಳೆದಿದೆ. ಜಗತ್ತಿನಲ್ಲಿ ಇದು ಎರಡು ಅಥವಾ ಮೂರನೇ ಉದ್ಯೋಗವಾಗಿ ಬೆಳೆಯುತ್ತಿದೆ. ಆದ್ದರಿಂದ ಈ ನಿಮ್ಮ ಕಲ್ಪನೆ ಏನಿದೆ ಇದನ್ನು ಕೈಬಿಡದಂತೆ ಮತ್ತೊಮ್ಮೆ ಪುನರ್‌ವಿಚಾರ ಮಾಡಬೇಕು. ಇದಕ್ಕೆ "ಪ್ರೇಮನಗರ್" ಎಂದು ಹೆಸರಿಟ್ಟರೆ ಇನ್ನು ಚೆನ್ನಾಗಿರುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಸರ್ಕಾರದವರು ಅನೇಕ ಜಲಾಶಯಗಳನ್ನು ಕಟ್ಟಿಸಿ ದ್ದಾರೆ. ಇವುಗಳನ್ನು ನೋಡಲು ಜನರು ಹೋಗುತ್ತಾರೆ, ಆದ್ದರಿಂದ ಇಂಥಹ ಕಡೆಗಳಲ್ಲಿ ಮಿಷನ್ ಬೋಟ್‌ಗಳ ಒಂದು ವ್ಯವಸ್ಥೆ ಮಾಡಿದರೆ ಪ್ರವಾಸಿಗಳಿಗೆ ಇವು ಆಕರ್ಷಣೀಯವಾದ ಸ್ಥಳಗಳಾಗುತ್ತವೆ. ಇದರಿಂದ ನಿಮ್ಮ ಇಲಾಖೆಗೆ ಲಾಭವೂ ಬರುತ್ತದೆ. ಎರಡನೆಯದಾಗಿ ಬಾದಾಮಿ, ಪಟ್ಟದ ಕಲ್ಲು, ಐಹೊಳೆ ಇಲ್ಲೆಲ್ಲಾ ಒಂದೆರಡು ದಿವಸಗಳಲ್ಲಿ ಹೋಗಿ ನೋಡಲು ಯಾವುದೇ ವಾಹನ ಸೌಕರ್ಯವಿಲ್ಲ. ಪ್ರವಾಸಿಗಳು ಟಾಂಗ ಇಲ್ಲವೆ ಚಕ್ಕಡಿಯಲ್ಲಿ ಹೋಗಬೇಕಾಗಿದೆ. ಆದ್ದರಿಂದ ಇಲ್ಲಿ ಮಿನಿಬಸ್ ವ್ಯವಸ್ಥೆ ಮಾಡಬೇಕು. ಪಟ್ಟದಕಲ್ ಜಾಗದಲ್ಲಿ ಉಪಹಾರ ಮಂದಿರದ ಸೌಕರ್ಯವನ್ನು ಕಲ್ಪಿಸಿಕೊಟ್ಟಿರುವುದ ಕ್ಕಾಗಿ ನಾನು ಮಾನ್ಯ ಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ನಮ್ಮ ಕೋಲಾರ ಜಿಲ್ಲೆಯ ಮಾಲೂರಿನ ಹತ್ತಿರ ಇರತಕ್ಕಂಥಾ ಚಿಕ್ಕತಿರುಪತಿ ಬಹಳ ಹೆಸರುವಾಸಿಯಾಗಿದೆ. ಆಂಧ್ರದ ತಿರುಪತಿ ಬೆಟ್ಟದ ಮೇಲಿರುವ ಶ್ರೀನಿವಾಸ ದೇವರ ಹಾಗೆ ಇಲ್ಲಿಯ ದೇವಸ್ಥಾನವೂ ಕೂಡ ಹೆಸರುಪಡೆದಿದೆ. ಆದ್ದರಿಂದ ಮಾನ್ಯ

ಸಚಿವರು ಈ ಜಾಗವನ್ನು ಒಂದು ಪ್ರವಾಸೀ ಕೇಂದ್ರವನ್ನಾಗಿ ಮಾಡುವುದರ ಮೂಲಕ ಅಲ್ಲಿಗೆ ಹೋಗುವಂಥ ಯಾತ್ರಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಹೆಸರಘಟ್ಟದಲ್ಲಿ ಇರುವಂಥ ಸರ್ಕಾರ ಜಮೀನನ್ನು ಶ್ರೀ ದೇವರಾಜ್ ಅರಸ್ ಅವರ ಸರ್ಕಾರ ಇದ್ದಾಗ ಪಶುಪಾಲನಾ ಇಲಾಖೆಗೆ ವಹಿಸಿಕೊಟ್ಟಿದ್ದರು. ಆದರೆ ಈಗ ಆ ಜಾಗದಲ್ಲಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಅಲ್ಲಿ ಚಲನಚಿತ್ರ ನಗರವನ್ನು ಮಾಡಬೇಕೆಂದು ಹೊರಟಿದ್ದಾರೆ. ಆದರೆ ಆ ಕೆಲಸ ಇನ್ನು ಪ್ರಾರಂಭವಾಗದಿರುವ ಕಾರಣ ಸದರೀ ಜಾಗವನ್ನು ಪುನಃ ಪಶುಪಾಲನಾ ಇಲಾಖೆಗೆ ವಹಿಸಿಕೊಟ್ಟರೆ ದನಗಳ ಮೇವಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಕಾಳಮರಿಗೌಡ (ಪಿರಿಯಾಪಟ್ಟಣ).—ಕೆ.ಆರ್. ನಗರದ ಹತ್ತಿರ ಇರತಕ್ಕಂಥಾ ಚುಂಚನಕಟ್ಟೆಯನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಪ್ರತಿ ವರ್ಷವೂ ಜಾತ್ರೆ ನಡೆಯುತ್ತದೆ. ಇಲ್ಲಿರುವಂತಹ ದೇವರ ದರ್ಶನ ಮಾಡಲು ಅನೇಕ ಜನರು ಬರುತ್ತಾರೆ. ಆದ್ದರಿಂದ ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಬಸವನಗುಡಿ).—ಈಗ ಬೆಂಗಳೂರು ನಗರದಲ್ಲಿ ರೇಡಿಯೋ ಬ್ರಾಡ ಕ್ಯಾಸ್ಟಿಂಗ್ ಷಾರ್ಟ್‌ವೇವ್ ಸ್ಟೇಷನ್ ಇಲ್ಲ. ಇದರಿಂದ ಈ ಕೇಂದ್ರದಿಂದ ಪ್ರಸಾರವಾಗುವ ಕಾರ್ಯಕ್ರಮಗಳು ಬಹಳ ದೂರದವರೆಗೆ ಕೇಳುವುದಿಲ್ಲ, ಆದ್ದರಿಂದ ಷಾರ್ಟ್‌ವೇವ್ ಸ್ಟೇಷನ್ ಮಾಡಿಸಬೇಕು. ಅದೇರೀತಿ ಮೈಸೂರಿನಲ್ಲಿ ಫುಲ್‌ಟೈಮ್ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್ ಇಲ್ಲ. ಆದ್ದರಿಂದ ಫುಲ್‌ಟೈಮ್ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್ ಆಗಿ ಮಾಡಲು ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದವರು ಬೆಂಗಳೂರು ಟಿ.ವಿ. ಕೇಂದ್ರವನ್ನು ೧೯೮೪–೮೫ರಲ್ಲಿ ಒಂದು ಪಕ್ಕಾ ಕೇಂದ್ರವನ್ನಾಗಿ ಮಾಡಲು ಬಜೆಟ್‌ನಲ್ಲಿ ಹಣವನ್ನು ಇಟ್ಟಿದ್ದಾರೆ. ಇದು ಪಕ್ಕಾ ಸ್ಟೇಷನ್ ಆದಮೇಲೆ ಕಲರ್ ಟಿ.ವಿ. ಬ್ರಾಡ್‌ಕ್ಯಾಸ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಚಂದ್ರಶೇಖರ ಗಚ್ಚಿನಮಠ್ (ಬಿಜಾಪುರ).—ಬಿಜಾಪುರ ಐತಿಹಾಸಿಕ ಸ್ಥಳಗಳಿಂದ ಕೂಡಿದ ಸ್ಥಳವಾಗಿದೆ. ಐತಿಹಾಸಿಕ ಸ್ಥಳಗಳ ಪೈಕಿ ಬಿಜಾಪುರವು ಜಗತ್ತಿನಲ್ಲಿಯೇ ಎರಡನೆಯ ಸ್ಥಾನ ಪಡೆದಿದೆ. ಈ ಕಾರಣದಿಂದ ಇಲ್ಲಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರವಾಸಿಗಳು ಬರುತ್ತಾರೆ, ಆದರೆ ಇಲ್ಲಿ ಒಂದು ಸುಸಜ್ಜಿತವಾದ ವಿಮಾನ ನಿಲ್ದಾಣ ಇಲ್ಲ. ಆದ್ದರಿಂದ ಇದನ್ನು ಜಾಗ್ರತೆ ಮಾಡಲು ಕ್ರಮ ಕೈಗೊಳ್ಳಬೇಕು ಇದರ ಜೊತೆಗೆ ಬಿಜಾಪುರ ನಗರದಲ್ಲಿರತಕ್ಕ ಐತಿಹಾಸಿಕ ಸ್ಥಳಗಳನ್ನು ನೋಡಲು ವಾಹನ ಸೌಲಭ್ಯಗಳು ಇಲ್ಲ. ಆದ್ದರಿಂದ ಮಿನಿಬಸ್‌ಗಳ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಪಿ. ಗಂಗಾಧರಪ್ಪ (ತಿಪಟೂರು).—ಯಡಿಯೂರು ಹತ್ತಿರ ಮಾರ್ಕೊನಹಳ್ಳಿ ಜಲಾಶಯದ ಬಳಿ ಬೋಟಿಂಗ್ ಕ್ಲಬ್ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶಾನಪ್ಪ (ಶಹಾಬಾದ್).—ಗುಲ್ಬರ್ಗಾ ಜಿಲ್ಲೆಯ ವಾಡೀ ಬಳಿ ಚಂದ್ರಲಾಪರಮೇಶ್ವರೀ ದೇವಸ್ಥಾನವಿದೆ. ಇದೊಂದು ಪವಿತ್ರವಾದಂಥ ದೇವಸ್ಥಾನ, ಇಲ್ಲಿನ ದೇವರ ದರ್ಶನ ಮಾಡಲು ಸಾವಿರಾರು ಜನರು ಬರುತ್ತಾರೆ. ಮಹಾರಾಷ್ಟ್ರ, ಆಂಧ್ರ ಹಾಗೂ ಇತರ ಕಡೆಗಳಿಂದ ಇಲ್ಲಿಗೆ ಜನರು ಬರುತ್ತಾರೆ. ಕಳೆದ ಸಲ ಕೂಡ ನಾನು ಇದನ್ನು ಟೂರಿಸ್ಟ್ ಸೆಂಟರ್ ಮಾಡಬೇಕೆಂದು ಕೇಳಿದ್ದೆ. ಆದ್ದರಿಂದ ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಸೂರ್ಯನಾರಾಯಣರಾವ್ (ವರ್ತೂರು).—ಈಗ ನಮ್ಮ ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ಹೆಚ್ಚಿನ ರೀತಿಯಲ್ಲಿ ಬೆಳೆಯುತ್ತಿವೆ, ದೇಶದ ಸಮಗ್ರತೆಯನ್ನು ಹಾಳುಮಾಡತಕ್ಕಂಥಾ ಒಂದು ಸಂಕುಚಿತ ಪ್ರವೃತ್ತಿ ಬೆಳೆಯುತ್ತಿವೆ ಇದನ್ನು ತಡೆಗಟ್ಟುವ ಬಗ್ಗೆ ಸಣ್ಣ ಸಣ್ಣ ಚಲನಚಿತ್ರಗಳನ್ನು ತಯಾರಿಸಿ ಜನತೆಗೆ ತೋರಿಸುವ ವ್ಯವಸ್ಥೆ ಮಾಡಬೇಕೆಂದು ಕಳೆದ ಸಲವೇ ಹೇಳಿದ್ದೆ. ಇದರ ಜೊತೆಗೆ ವರದಕ್ಷಿಣೆಯ ಪಿಡುಗನ್ನು ಹೋಗಲಾಡಿಸುವಂತಹ ಚಲನಚಿತ್ರಗಳನ್ನು ತಯಾರಿಸಿ ಜನತೆಗೆ ತೋರಿಸಬೇಕೆಂದು ಸಲಹೆ ಮಾಡಿದ್ದೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಮತ್ತೆ ಚಿತ್ರಮಾಲಾ ಎಂಬ ಪತ್ರಿಕೆಯು ಅಶ್ಲೀಲತೆಗೆ ಕಾರಣವಾಗಿದೆ. ಈ ಅಶ್ಲೀಲತೆಯನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಬೆಂಗಳೂರು ನಗರದಲ್ಲಿ ಬ್ಲೂ ಫಿಲಂ ಹಾವಳಿ ಜಾಸ್ತಿಯಾಗಿದೆ.

ಇದಕ್ಕೆ ಪೋಲೀಸರೇ ಸಹಕರಿಸುತ್ತಿದ್ದಾರೆ. ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಹೆಚ್. ಕೆಂಪೇಗೌಡ (ಚಾಮರಾಜ) — ಹೆಸರಘಟ್ಟದಲ್ಲಿ ಫಿಲಂ ಪ್ರಾಜೆಕ್ಟ್ ಕೆಲಸ ಪ್ರಾರಂಭ ಮಾಡಲು ಬಹಳ ಸಮಯ ಹಿಡಿಯುವುದರಿಂದ ಬೆಂಗಳೂರಿನ ಕಂಠೀರವ ಸ್ಟುಡಿಯೋವನ್ನು ಅಭಿವೃದ್ಧಿ ಪಡಿಸುತ್ತೀರಾ ? ಇಲ್ಲಿ ಕೆಲವು ಕಟ್ಟಡಗಳು ಅರ್ಧದಲ್ಲಿಯೇ ನಿಂತಿವೆ, ಇದನ್ನು ಜಾಗ್ರತೆ ಕಟ್ಟಿ ಮುಗಿಸುತ್ತೀರಾ.

ಶ್ರೀ ಕೆ ಚನ್ನಬಸವನಗೌಡ (ಕೂಡಲಿಗಿ). —ವಿಜಯನಗರದಲ್ಲಿರತಕ್ಕಂಥಾ ಹಂಪೆ ಹಾಗೂ ತುಂಗಭದ್ರಾ ಪ್ರಾಜೆಕ್ಟ್ ನೋಡಲು ಬರುವವರಿಗೆ ಈಗ ವಿಮಾನ ಸೌಕರ್ಯವಿಲ್ಲ. ಬಳ್ಳಾರಿಯಲ್ಲಿರುವಂಥಹ ಕಂಟೋನ್‌ಮೆಂಟ್ ಏರಿಯಾದಲ್ಲಿ ಮಿಲಿಟರಿ ಏರ್‌ಸ್ಟ್ರಿಪ್ ಏನಿದೆ ಅದನ್ನೇ ಏರೋಡ್ರೋಮ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಘುಪತಿ : – ಮಾನ್ಯ ಅಧ್ಯಕ್ಷರೇ, ರಾಯಚೂರಿನಲ್ಲಿ ವಿಮಾನ ನಿಲ್ದಾಣ ಮಾಡಬೇಕೆಂದು ಕೇಳಿದ್ದಾರೆ. ಅದೇರೀತಿ ಬಿಜಾಪುರದಲ್ಲೂ ವಿಮಾನ ನಿಲ್ದಾಣ ಆಗಬೇಕೆಂದು ಕೇಳಿದ್ದಾರೆ. ಈ ವಿಚಾರದಲ್ಲಿ ನಾನು ಫಿಯಸಿಬಿಲಿಟಿ ರಿಪೋರ್ಟ್ ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮತ್ತೆ ಮಿನಿ ವೆಹಿಕಲ್ಸ್‌ನ್ನು ಒದಗಿಸುವುದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಬಾದಾಮಿಯಲ್ಲಿ ಇನ್ನು ೧೦-೧೫ ದಿವಸಗಳಲ್ಲಿ ಮಿನಿಬಸ್ಸನ್ನು ಒದಗಿಸುವುದಕ್ಕೆ ಏರ್ಪಾಟು ಮಾಡುತ್ತಿದ್ದೇವೆ. ಈಗ ನಾವು ಹತ್ತು ಬಸ್‌ಗಳಿಗೆ ಪರ್ಮಿಟ್ ಕೇಳಿದ್ದೇವೆ, ಅವರು ಪರ್ಮಿಟ್ ಕೊಟ್ಟ ತಕ್ಷಣ ಚಿಕ್ಕ ತಿರುಪತಿಗೂ ಮಿನಿಬಸ್ಸನ್ನು ಓಡಿಸಲು ವ್ಯವಸ್ಥೆ ಮಾಡುತ್ತೇವೆ. ಚಿಕ್ಕ ತಿರುಪತಿ ಬೆಂಗಳೂರಿಗೆ ಹತ್ತಿರದಲ್ಲಿರುವುದರಿಂದ ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿದರೆ ಪ್ರಯೋಜನಕ್ಕೆ ಬರುವುದಿಲ್ಲ. ಆದ್ದರಿಂದ ಮಿನಿ ಬಸ್ಸನ್ನು ಹಾಕಿದರೆ ಜನರು ಹೊಸಕೋಟೆ ಹಾಗೂ ಚಿಕ್ಕತಿರುಪತಿಯನ್ನು ನೋಡಿಕೊಂಡು ಬರುವುದಕ್ಕೆ ಅವಕಾಶವಾಗುತ್ತದೆ.

ಇನ್ನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಒಬ್ಬ ಅಧಿಕಾರಿಯನ್ನು ನಾನು ಸಸ್ಪೆಂಡ್ ಮಾಡಿದ್ದೇನೆ. ಆದರೆ ಆ ಅಧಿಕಾರಿ ಯಾರು ಎಂಬುದು ನನಗೆ ಇದುವರೆಗೂ ಗೊತ್ತಿಲ್ಲ. ಆತನನ್ನು ಸಸ್ಪೆಂಡ್ ಮಾಡುವುದಕ್ಕೆ ಸಾಕಷ್ಟು ಆಧಾರಗಳು ಇವೆ. ಆತನ ಮೇಲೆ ಪ್ರಿಲಿಮಿನರಿ ತನಿಖೆಯಾಗಿ ವರದಿ ಕೂಡ ಬಂದಿದೆ. ಮತ್ತೆ ನಾನು ಸಿ.ಒ.ಡಿ.ಗೆ ಕಳುಹಿಸಿದ್ದೇನೆ. ಆ ಒಂದು ಆಧಾರದ ಮೇಲೆ ನಾನು ಸಸ್ಪೆಂಡ್ ಮಾಡಿದ್ದೇನೆ. ಮತ್ತೆ ಇನ್ನೊಬ್ಬ ಅಧಿಕಾರಿಯ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದರು. ಅವರ ಬಗ್ಗೆ ಕೂಡ ಸಿ.ಒ.ಡಿ. ಎನ್‌ಕ್ವೈರಿ ನಡೆಯುತ್ತಿದೆ. ಇನ್ನು ನಮ್ಮ ಇಲಾಖೆ ವತಿಯಿಂದ ಬಸ್ಸಿನಲ್ಲಿ ಪ್ರವಾಸ ಹೋಗಿದ್ದರ ಬಗ್ಗೆ ಮಾನ್ಯ ಲೋಕಸಭೆಯ ಸದಸ್ಯರಾದಂಥ ಶ್ರೀಮಾನ್ ಲಕ್ಕಪ್ಪನವರು ನನಗೆ ಒಂದು ಪತ್ರವನ್ನು ಬರೆದು ಈ ರೀತಿ ತಿಳಿಸಿದ್ದಾರೆ. ಅದು ಈ ರೀತಿ ಇದೆ. ಅದರಲ್ಲಿ ಸ್ವಲ್ಪ ಭಾಗವನ್ನು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

> "To quote my opinion on the tour, I would say that the Corporation has done well its best Taking into account all the minute details a couple of inconveniences caused was only because of the totally unforeseen circumstances and when things were beyond the control of the Corporation for ex :–

ಈ ರೀತಿ ಅವರ ನನಗೆ ಪತ್ರ ಬರೆದಿದ್ದಾರೆ. ಮಾನ್ಯ ಅಧ್ಯಕ್ಷರೇ ನಾವು ಅಲ್ಲಿದ್ದ ಎಲ್ಲಾ ಮಕ್ಕಳನ್ನು ಸಹ ವಿಮಾನದಲ್ಲಿ ನಮ್ಮ ಸ್ವಂತ ಖರ್ಚಿನಲ್ಲಿ ತಂದು ಬೆಂಗಳೂರನ್ನು ತಲುಪಿಸಿದ್ದೇವೆ. ಅಲ್ಲಿ ಯಾರ್ಯಾರು ಈ ಕೃತ್ಯದಲ್ಲಿ ಇದ್ದಾರೆಂದು ತಿಳಿದುಕೊಳ್ಳುವುದಕ್ಕೆ ನಾವು ಇಲಾಖೆ ಮುಖ್ಯಾಧಿಕಾರಿಯವರಿಂದ ತನಿಖೆ ಮಾಡಿಸುತ್ತಿದ್ದೇವೆ.

Mr. Speakar: The question is :

"That the respective sums not exceeding the amount shown in the list of demands be granted to the Government to defray the charges which will come in course of payment during the financial year for the period ending 31st March, 1985 in respect of demands 11, 12 and 25"

The Motion was adopted and the sums were granted

(As directed by the Chair the Demands are reproduced below.)

Demand No. 11–Youth Services

"That a sum not exceeding Rs. 6,67,74,000 on Revenue Account and Rs. 6,00,000 on Capital Account be granted to the Government to defray the charges which will come in course of payment during the financial year ending 31st day of March, 1985 in respect of Youth Services."

Demand No. 12–Literary, Cultural Affairs and Develgpment of Kannada.

"That a sum not exceeding Rs. 4,37,26,000 on Revenue Account be granted to the Government to defray the charges which will come in course of payment during the financial year ending 31st day of March, 1985 in respect of Literary, Cultural Affairs and Development of Kannada."

Demand No. 25-Tourism, Information and Purlicity.

"That a sum not exceeding Rs. 4,53,46,000 on Revenue Account and Rs 66,00,000 on Capital Account be granted to the Government to defray the charges which will come in course of payment during the financial year ending 31st day of March, 1985 of Information, Publicity and Tourisum."

ರಾತ್ರಿ ವೇಳೆಯಲ್ಲಿ ಸೂಪರ್ ಡೀಲಕ್ಸ್ ಬಸ್ಸುಗಳ ಸಂಚಾರ

೮೨೦ ಶ್ರೀ ವಿ. ಎಸ್. ಆಚಾರ್ಯ ವಿಧಾನ ಸಭಾ ಸದಸ್ಯರು (ಉಡುಪಿ) ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೋ

ಅ) ರಾತ್ರಿ ವೇಳೆಯಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯವನ್ನೊದಗಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ;